# 'ಪ್ರಪಂಚ'ದ ಪಾಪು





# 'ಕಸ್ತೂರಿ'ಯ ಪಾವೆಂ

ಜೀವನ-ಸಾಧನೆಯ ಒಂದು ತೌಲನಿಕ ಅಧ್ಯಯನ

▪ ಶಿವಾನಂದ ಜೋಶಿ ▪

'ಚಿಂತನ' ಪ್ರಕಾಶನದ ಮೊದಲ ಚಿಗುರು
೨೦೧೦

# 'ಪ್ರಪಂಚ'ದ 'ಕಸ್ತೂರಿ'ಯ
# ಪಾಪು ಪಾವೆಂ

ಜೀವನ ಮತ್ತು ಸಾಧನೆಗಳ
ತೌಲನಿಕ ಅಧ್ಯಯನ

ಶಿವಾನಂದ ಜೋಶಿ

ಪ್ರಕಾಶನ :
ಚಿಂತನ ಪ್ರಕಾಶನ, ಹುಬ್ಬಳ್ಳಿ

**PAPU-PAVEM**

A Comparative Study of Life and Achievements.

By Shivanand Joshi

Published By : Chintan Prakashan, Hubli

© : Shivanand Joshi

First Impression : 2010

Copies : 1000

Pages : 72 + iv

Price : **85/-**

Paper Used : 70 GSM NS Maplitho

**ಪಾಪು-ಪಾವೆಂ**

ಜೀವನ ಮತ್ತು ಸಾಧನೆಗಳ ತೌಲನಿಕ ಅಧ್ಯಯನ

ಪ್ರಕಾಶಕರು : ಚಿಂತನ ಪ್ರಕಾಶನ
ನಂ. ೫ ಪತ್ರಕರ್ತನಗರ, ನೃಪತುಂಗಬೆಟ್ಟ (ಪ) ಹುಬ್ಬಳ್ಳಿ- ೩೨

ಲೇಖಕರು : ಶಿವಾನಂದ ಜೋಶಿ

ಪ್ರಥಮ ಮುದ್ರಣ : ೨೦೧೦

© ಲೇಖಕರವು

ಪ್ರತಿಗಳು : ೧೦೦೦

ಪುಟಗಳು : ೭೨ + ೪

ಬೆಲೆ : ರೂ. ೮೫/-

ಬಳಸಿದ ಕಾಗದ : ೭೦ ಜಿಎಸ್‌ಎಮ್ ಎನ್‌ಎಸ್ ಮ್ಯಾಪಲಿಥೊ

ಮುದ್ರಕರು :

ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ಕಾಗದಗೇರಿ ಓಣಿ, ಗದಗ – 582 101.
☎: (08372) 237566, 235509 (O) 236578 (R)
Email chaitanya_offset@yahoo.co.in

# ಕೃತಜ್ಞತೆಗಳು

ಗ್ರಂಥಋಣ :

'ನಾನು ಪಾಟೀಲ ಪುಟ್ಟಪ್ಪ'
ಸುಮಾ ಸರಜೂ ಕಾಟಕರ

'ಉಡುಪಿಯ ಪರಿಸರದಲ್ಲಿ ಪಾವೆಂ'
ಹಾಗೂ
'ಪತ್ರಕರ್ತರ ಆಚಾರ್ಯ ಪಾ.ವೆಂ. ಆಚಾರ್ಯ'
ಡಾ॥ ಶ್ರೀನಿವಾಸ ಹಾವನೂರ

'ಪತ್ರಕರ್ತರು ಕಂಡಂತೆ ಪಾಪು'
ಸಂಪಾದಕ ಷಡಕ್ಷರಪ್ಪ

ಚಿತ್ರಋಣ :

ಪಾಪು ಹಾಗೂ ಪಾಪು ದಂಪತಿ
ಶಶಿ ಸಾಲಿ – ಸಾಲಿ ಗ್ರಾಫಿಕ್ಸ್

ಪಾವೆಂ ಹಾಗೂ ಪಾವೆಂ ದಂಪತಿ
ಕ್ಷತ್ರಿ ಸ್ಟುಡಿಯೊ, ಹುಬ್ಬಳ್ಳಿ

ಮುದ್ರಣ :

ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ
ಗದಗ

ಸಹಕಾರ :

ಮುರಳೀಧರ ಪಾಡಿಗಾರ

ಪ್ರಶಾಂತ ಜೋಶಿ

# ಪರಿವಿಡಿ


| | | |
|---|---|---|
| ೧. | ಮುಂದುವರಿಯುವ ಮೊದಲು | ೧ |
| ೨. | ಅಪರೂಪದ ವಿದ್ವಾನ್ ಜೋಡಿ | ೭ |
| ೩. | ಸಾಹಿತ್ಯ : ಓದು–ಬರಹ | ೧೫ |
| ೪. | ಪತ್ರಿಕರ್ತರಾಗಿ (i) | ೨೩ |
| ೫. | ಪತ್ರಿಕರ್ತರಾಗಿ (ii) | ೨೯ |
| ೬. | ವಿದ್ವಾಂಸರು – ಪತ್ರಿಕರ್ತರು ಕಂಡಂತೆ | ೪೧ |
| ೭. | ಸೌಭಾಗ್ಯವತಿಯರು | ೪೭ |
| ೮. | ಮಾನ ಸನ್ಮಾನಗಳು | ೫೧ |
| ೯. | ಹುಬ್ಬಳ್ಳಿಯ ಹೆಮ್ಮೆ | ೫೩ |
| ೧೦. | ಅನುಬಂಧ | ೫೫ |


■■

# ೧. ಮುಂದುವರಿಯುವ ಮೊದಲು !
## (ದಯವಿಟ್ಟು ಓದಿರಿ)

ಬರೆದು ಬದುಕುವವನು ಬಡವ. ಬದುಕಿಗಾಗಿ ಬರೆಯುವವನಿಗಿಂತ ಬರೆಯಲೆಂದು ಬದುಕುವವನಿಗೆ ಸಾತ್ವಿಕ ಸೊಕ್ಕೇ ಸಿರಿವಂತಿಕೆ. ಬಡತನದ ಬದುಕಿನಲ್ಲಿ ಬರವಣಿಗೆಯ ನಿಷ್ಠುರತೆಯಲ್ಲಿ, ಸಾತ್ವಿಕ ಸೊಕ್ಕಿನ ಸಿರಿವಂತಿಕೆಯಲ್ಲಿ ನನಗೆ ಹಾದಿ ಹಾಕಿಕೊಟ್ಟವರು. ನನಗೆ ಸದಾ ಪೂಜನೀಯರಾದ ಪಾಟೀಲ ಪುಟ್ಟಪ್ಪ ಹಾಗೂ ಪಾಡಿಗಾರು ವೆಂಕಟರಮಣ ಆಚಾರ್ಯರು. ಅವರು ಕನ್ನಡ ಪತ್ರಿಕಾ ಪ್ರಪಂಚಕ್ಕೆ ಆದರ್ಶಪ್ರಾಯರು. ಭಾಷೆ ಹಾಗೂ ಬರವಣಿಗೆಯಲ್ಲಿ ಇಬ್ಬರೂ ಸಿದ್ಧಹಸ್ತರು. ಪ್ರಯೋಗಶೀಲ ಮನಸ್ಸು, ಹೊಸತನ್ನು ಹುಡುಕುವ ಹುಮ್ಮಸ್ಸು, ಗಟ್ಟಿಕಾಳನ್ನು ಹಿಟ್ಟುಮಾಡಿ ಹದಗೊಳಿಸುವ ಕಲೆ ಮೊದಲಾದ ಗುಣಗಳು ಪಾಪು ಅವರ 'ಪ್ರಪಂಚ'ವನ್ನು ಮತ್ತು ಪಾವೆಂ ಅವರ 'ಕಸ್ತೂರಿ'ಯನ್ನು ಇಂದಿಗೂ–ಬಹುಶಃ ಎಂದೆಂದಿಗೂ–ಅನುಕರಣೀಯ ಆದರ್ಶವನ್ನಾಗಿ ಕಾಪಾಡಿಕೊಂಡು ಬಂದಿವೆ. ಪುಟ್ಟಪ್ಪನವರ ಪ್ರಪಂಚ ವ್ಯಾಪ್ತಿಯಲ್ಲಿ ಹಾಗೂ ಆಚಾರ್ಯರ ಕಸ್ತೂರಿಯ ಪರಿಮಳದಲ್ಲಿ ಓದುವಿಕೆಯ ಸೊಗಸು ಮಾತ್ರವಲ್ಲ. ಸಾರ್ವಜನಿಕಕ್ಕೆ ಕಲಿಸುವ ಗುಣವೂ ಇದೆ. ಇಂದು 'ಪ್ರಪಂಚ' ಇಲ್ಲ, ಪುಟ್ಟಪ್ಪನವರು ಇದ್ದಾರೆ. ಇನ್ನೊಂದು ಪ್ರಪಂಚಕ್ಕೆ ಇನ್ನೊಬ್ಬ ಪುಟ್ಟಪ್ಪನವರೇ ಬೇಕು. 'ಕಸ್ತೂರಿ' ಇನ್ನೂ ಜೀವ ಹಿಡಿದುಕೊಂಡಿದೆ. ಆದರಲ್ಲಿ ಮೊದಲಿನ ಸೊಗಸು ಬರಬೇಕಾದರೆ ಆಚಾರ್ಯರೇ ಮರಳಿ ಜನ್ಮವೆತ್ತು ಬರಬೇಕು.

ಪುಟ್ಟಪ್ಪನವರು ಸ್ವತಂತ್ರ ವಿಚಾರಗಳನ್ನು ಸಾರ್ವಜನಿಕ ಅಭಿಪ್ರಾಯಗಳನ್ನಾಗಿ

ಪರಿವರ್ತಿಸುವಲ್ಲಿ, ಕಲಾತ್ಮಕ ಜಾಣ್ಮೆ ಉಳ್ಳವರು 'ಕಸ್ತೂರಿ' ರೀಡರ್ಸ್ ಡೈಜೆಸ್ಟ ಮಾದರಿಯ ಮಾಸಪತ್ರಿಕೆ, ಅದು ಸಾರ್ವಜನಿಕ, ರಾಷ್ಟ್ರ ಮತ್ತು ಅಂತಾರಾಷ್ಟ್ರ ವಿಷಯಗಳನ್ನು ವ್ಯಾಖ್ಯಾನ ಮಾಡದೇನೆ ಅವುಗಳ ಹುಟ್ಟಿನ ಹಿನ್ನೆಲೆ ಸಹಿತ ಸಮಗ್ರ ಚಿತ್ರಣ ಕೊಡುತ್ತ ಬಂದಿದೆ. ಆಡು ಮುಟ್ಟದಿರುವ ತೊಪ್ಪಲು ಹೇಗೋ, ಹಾಗೆ ಆಚಾರ್ಯರು ಬರೆಯದ ವಿಷಯಗಳಿಲ್ಲ. ಅವರನು ಸಂಯುಕ್ತ ಕರ್ನಾಟಕ ಕಚೇರಿಯಲ್ಲಿ 'ಸರ್ವಜ್ಞ' ಎಂದೇ ಕರೆಯುತ್ತಿದ್ದರು. ಅರ್ಧ ಹೊಟ್ಟೆಕಿಚ್ಚಿನಿಂದ, ಇನ್ನರ್ಧ ಅನಿವಾರ್ಯವಾದ ಮೆಚ್ಚುಗೆಯಿಂದ.

ನನ್ನ ಸೌಭಾಗ್ಯ ಏನೆಂದರೆ, ಇಬ್ಬರನ್ನೂ ಅತೀ ಸಮೀಪದಿಂದ ಬಲ್ಲವರಲ್ಲಿ ನಾನೂ ಒಬ್ಬ. ಅವರ ಅನುಭವದ ಕುಲುಮೆಯಲ್ಲಿ ಬೆಂದು 'ಚೀಜ್' ಆದವರಲ್ಲೂ ನಾನು ಒಬ್ಬ. ನಾನು ಜೀವನದಲ್ಲಿ ಏನು ಆಗಬೇಕೆಂಬುದನ್ನು ನಿರ್ಧರಿಸುವ ಮೊದಲೇ ೧೯೫೪ರಲ್ಲಿ ಒಂದು ದಿನ ನನ್ನ ತಂದೆ ದಿ. ಕಲ್ಲಂಭಟ್ಟರು 'ಪ್ರಪಂಚ'ದ ಮೊದಲನೇ ಸಂಚಿಕೆಯನ್ನು ತಂದುಕೊಟ್ಟರು. ಅದು ನಾನು ಹಿಡಿಯಬೇಕಾದ ಹಾದಿಯನ್ನು ತೋರಿಸಿತು. ಓದು ಹಾಗೂ ಬರವಣಿಗೆಯಲ್ಲಿ ಆಸಕ್ತಿ ಚಿಗುರುತ್ತಿದ್ದ ಕಾಲದಲ್ಲಿ, ಬರೆದರೆ ಪುಟ್ಟಪ್ಪನವರ ಹಾಗೆ ಬರೆಯಬೇಕೆಂದು ಆಸೆಪಟ್ಟೆ. ಅದು ನನ್ನನ್ನು 'ಪ್ರಪಂಚ' ಕಚೇರಿಗೆ ಕರೆದುಕೊಂಡು ಹೋಗಿ ಪುಟ್ಟಪ್ಪನವರ ಎದುರಿಗೆ ನಿಲ್ಲಿಸಿತು.

ಬಾಲ್ಯದಿಂದಲೂ ಆಚಾರ್ಯರನ್ನು, ಅವರ ಮಗ ಮುರಳೀಧರ ಕನ್ನಡ ಶಾಲೆಯಲ್ಲಿ ಸಹಪಾಠಿಯಾಗಿದ್ದುದರಿಂದ, ಬಲ್ಲವನಾಗಿದ್ದ ನನಗೆ ಸಂಯುಕ್ತ ಕರ್ನಾಟಕ ಸೇರಿದ ಮೇಲೆ ಅವರೊಂದಿಗೆ ಮೈಚಳಿ ಬಿಟ್ಟು ಮಾತನಾಡುವಷ್ಟು ನಿಕಟ ಸಂಬಂಧ ಬೆಳೆಯಿತು. ವಿಷಯಾಧಾರಿತ ಹಾಗೂ ಸಾಂದರ್ಭಿಕ ಲೇಖನಗಳನ್ನು ಬರೆಯಲು ಹೇಗೆ ಸಿದ್ಧತೆ ಮಾಡಿಕೊಳ್ಳಬೇಕೆಂಬುದನ್ನು ಕಲಿಸಿದರು. ಮುಂದೆ ಉಪಯೋಗಕ್ಕೆ ಬರುವುದೆಂದು ಅವರು ಜತನದಿಂದ ಕಾಯ್ದಿಟ್ಟ ಮಾಹಿತಿ ಬಳಕೆಗೆ ಬಾರದೆ ಹೋದದ್ದೇ ಇಲ್ಲ. ಅಲ್ಲಿ ಇದ್ದವರಿಗೆ ಅವರು ಗುರುವಾಗಿ ಗೋಚರಿಸುತ್ತಿದ್ದರು.

ನನ್ನ ಆರಂಭದ ಅನುಭವದಲ್ಲಿ ಪುಟ್ಟಪ್ಪನವರ ಮನೋಗತ ತಿಳಿಯುವುದೇ ಕಷ್ಟವಾಯ್ತು. ಅದರು ಮೌನವಾನಾಗಿದ್ದುಕೊಂಡೇ ನಿಮ್ಮನ್ನು ಪರೀಕ್ಷಿಸತಕ್ಕವರು. ನಾನು ಅವರ ಮುಂದೆ ನಿಂತು ಕೆಲಸ ಕೇಳಿದಾಗ ಅವರು ನನಗೆ ಎತ್ತಿಕೊಟ್ಟಿದ್ದು ಟೈಮ್ ಮ್ಯಾಗಝಿನ್. ಪುಟಗಳನ್ನು ತಿರುವಿ ಒಂದು ಲೇಖನಕ್ಕೆ ಗುರುತು ಹಾಕಿ 'ಇದನ್ನು ಭಾಷಾಂತರ ಮಾಡಿಕೊಂಡು ಬನ್ನಿ' ಎಂದಷ್ಟೇ ಹೇಳಿದವರು ಒಂದು ವಾರ ಕಳೆದರೂ ನನ್ನನ್ನು ಮಾತನಾಡಿಸಲಿಲ್ಲ. ಪಿಯುಸಿ ಎರಡನೇ ವರ್ಷದ ಹುಡುಗನಿಗೆ 'ಪ್ಲಾಸ್ಟಿಕ್ ಬ್ಲಡ್ ವೆಸಲ್ಸ್' ಕುರಿತ ಇಂಗ್ಲಿಷ್ ಲೇಖನ ಅದು ಹೇಗೆ ತಲೆಗೆ ಹತ್ತೀತು! ಅವರು ಗುಣಮಟ್ಟದ ಆರಾಧಕರು. ಎರಡನೇ ದರ್ಜೆ ಬಗ್ಗೆ ಅವರು ಎಂದೂ ಆಲೋಚನೆಯನ್ನು ಮಾಡದವರು. ಅವರೊಂದಿಗೆ ವ್ಯವಹರಿಸುವರು. ಸೂಕ್ಷ್ಮಮತಿಗಳಾಗಿರಬೇಕು. ಅರ್ಥವಾಗದ ನಾನಾ ಶಬ್ದಗಳ ಅರ್ಥಹುಡುಕಿ ಭಾಷಾಂತರ

ಮಾಡಿಕೊಟ್ಟಾಗ ಅವರು ಇನ್ನೊಂದು ಇಂಗ್ಲಿಷ್ ಮ್ಯಾಗಝಿನ್ ಎತ್ತಿ ಗುರುತುಹಾಕಿಕೊಟ್ಟರು. ಆದರೆ ಮೌನ ಮುರಿಯಲಿಲ್ಲ. ಆ ಮೌನದಲ್ಲಿಯೇ ಸಮ್ಮತಿಯೂ ಇತ್ತು. ಸಂತೋಷವೂ ಇತ್ತೆಂಬುದು ನಮಗೆ ಬಹಳ ದಿನಗಳ ನಂತರ ಮನವರಿಕೆಯಾದದ್ದು. ಸಮಯಕ್ಕೆ ಸರಿಯಾಗಿ ಪ್ರಿಂಟರ್ ಬಾರದಿದ್ದರೆ ಮಾತ್ರ ಜ್ವಾಲಾಮುಖಿ ಸ್ಫೋಟವಾಗುತ್ತಿದ್ದಿತು. 'ಇಂಥಲ್ಲಿ, ಇಂಥವರ ಮನೆಯಲ್ಲಿ ಮಲಗಿದ್ದಾನೆ. ಅವನ ಕಿವಿಗೆ ಹರಳು ಹಚ್ಚಿ ಕರೆದುಕೊಂಡು ಬರ್ರಿ' ಎಂದು ನಿಖರವಾಗಿ ಹೇಳುತ್ತಿದ್ದರು. ಅವನು ಕೆಲಸಕ್ಕೆ ಬಂದಾಗ ಅವರ ಸಿಟ್ಟು ಇಳಿದುಹೋಗಿ ಅವನನ್ನು ಬಯ್ಯುವುದೂ ಮರೆತುಹೋದಂತೆ ಇದ್ದು ಬಿಡುತ್ತಿದ್ದರು. ಆಚಾರ್ಯರಿಗೆ ಈ ಯಾವ ಜಂಜಾಟ ಇರಲಿಲ್ಲ. ಅವರದು ನೌಕರಿ, ಬಹಳವಾದರೆ ಒಂದು ಗಂಟೆ ಹೆಚ್ಚು ಕೆಲಸ ಮಾಡಿಯಾರು ! ವೇಳೆಗೆ ಸರಿಯಾಗಿ ಬಂದು, ವೇಳೆಗೆ ಸರಿಯಾಗಿ ಪುಸ್ತಕಗಳ ಒಂದು ಹೊರೆಯನ್ನೇ ಹೊತ್ತು ಬಲಗೈಯಲ್ಲಿ ಛತ್ರಿ ಹಿಡಿದು ಹೊರಟುಬಿಟ್ಟದ್ದೇ ಹೆಚ್ಚು.

ಪಾಪು ಹಾಗೂ ಪಾವೆಂ ಉದಾಹರಣೆಯನ್ನು ಆಡಿ ತೋರಿಸಿದವರಲ್ಲ, ಸ್ವಂತ ಉದಾಹರಣೆಗಳಾಗಿ ಕಾಣಿಸಿಕೊಂಡವರು. ಇಬ್ಬರಿಗೂ ತೀರ ಹತ್ತಿರದ ಸಾಮ್ಯ ಎಂದರೆ, ಅವರಿಗೆ ಓದುವುದು ಹಾಗೂ ಬರೆಯುವುದನ್ನು ಬಿಟ್ಟರೆ ಬೇರೇನೂ ರುಚಿಸುತ್ತಿರಲಿಲ್ಲ. ಇದರಲ್ಲಿ ಆಚಾರ್ಯರ ಹರವು ಸ್ವಲ್ಪ ದೊಡ್ಡದು. ರಸಾಯನ ಶಾಸ್ತ್ರದಿಂದ ಸಂಗೀತ ದವರೆಗೆ, ಮ್ಯಾಥಮ್ಯಾಟಿಕ್ಸ್ ಹಿಡಿದು ಭರತನಾಟ್ಯದವರೆಗೆ, ಹುಯನ್‌ತ್ಸಾಂಗ ಹಿಡಿದು ಹೋಚಿಮಿನ್‌ಹ್‌ರವರೆಗೆ ಜಗತ್ತಿನ ವ್ಯಾಪಾರ– ಅವ್ಯಾಪಾರಗಳ ಬಗ್ಗೆ ಅವರು ಏಕಕಾಲಕ್ಕೆ ಮಾಹಿತಿ ಸಂಗ್ರಹಿಸಿ ಸಾಂದರ್ಭಿಕವಾಗಿ ಬಳಸುತ್ತಿದ್ದರು. ಸಿನೇಮಾ ಮತ್ತು ಕ್ರೀಡೆಗಳಲ್ಲೂ ಕೂಡ ಅವರಿಗೆ ಗೊತ್ತಿಲ್ಲದ್ದು ಇರಲಿಲ್ಲ. ಅವರು ಅಕೌಂಟನ್ಸಿಯನ್ನು ಅಮೂಲಾಗ್ರ ಓದಿ ಪ್ರತ್ಯಕ್ಷ ಪ್ರ್ಯಾಕ್ಟೀಸ್ ಮಾಡಿದ್ದೂ ಉಂಟು. ಮೊಹರೆ ಹಣಮಂತರಾಯರ ಕೋರಿಕೆಯ ಮೇರೆಗೆ ಬ್ಯಾಂಕ್ ಆಫ ಕರ್ನಾಟಕದ ಮೆಮೊರಾಂಡಮ್ ಆಫ್ ಆರ್ಟಿಕಲ್ಸ ತಯಾರಿಸಿಕೊಟ್ಟ ಕೀರ್ತಿ ಅವರಿಗೆ ಸಂದಿದೆ. ಇಂಗ್ಲೀಷ್ ಭಾಷೆಯಲ್ಲಿ ಸ್ವಂತ ಶ್ರಮದಿಂದ ವಿಶೇಷ ಪರಿಣತಿ ಸಾಧಿಸಿದ್ದ ಆಚಾರ್ಯರು ತಮ್ಮ ಆಕೌಂಟನ್ಸಿಯ ಜ್ಞಾನದ ಬಲದಿಂದ ಕಂಪನಿ ಸೆಕ್ರೆಟರಿಯಾಗುವ ಯೋಗ್ಯತೆಯನ್ನು ಪಡೆದಿದ್ದರು. ಆದರೆ ಅವರಿಗೆ ಯಾವ ಡಿಗ್ರಿಯೂ ಇರಲಿಲ್ಲ. ಅವರ ಜೀವನದಲ್ಲಿ ಡಿಗ್ರಿ ಡೊಗ್ಗಾಲೂರಿತ್ತು. ಕವಿ ರವೀಂದ್ರನಾಥ ಠಾಕೂರರ ಅಭಿಮಾನಿ ಯಾಗಿ ಅವರು ಹೊರಗಿನಿಂದ ಪುಸ್ತಕ ತರಿಸಿ ಬಂಗಾಲಿ ಭಾಷೆಯನ್ನು ಕಲಿತಿದ್ದರು.

ಪುಟ್ಟಪ್ಪನವರಿಗೆ ಇಂಗ್ಲೀಷಿನ ಮೇಲೆ ಪ್ರಭುತ್ವ ಇದ್ದಿತು. ಕನ್ನಡದ ಪ್ರೇಮ, ಪರಿಣತಿಯಿಂದಾಗಿ ಅವರ ಇಂಗ್ಲೀಷಿಗೆ ಎಂದೂ ಚ್ಯುತಿ ಬರಲಿಲ್ಲ. ಇಂಗ್ಲೀಷ್ ಓದಿನಿಂದ ಅವರು ಕನ್ನಡದ ಸಿರಿವಂತಿಕೆ ಹೆಚ್ಚಿಸಿದರೆಂದರೆ ಯಾರೂ ಆಕ್ಷೇಪ ಎತ್ತುವ ಹಾಗಿಲ್ಲ. ಇಂಗ್ಲೀಷ ಪತ್ರಿಕೋದ್ಯಮ ಸೇರುವ ಅವಕಾಶ ಉಪಯೋಗಿಸಿಕೊಂಡಿದ್ದರೆ ಖಂಡಿತ ವಾಗಿಯೂ ಅವರು ರಾಷ್ಟ್ರೀಯ ಪತ್ರಿಕೆಯೊಂದರ ಸಂಪಾದಕರಾಗುತ್ತಿದ್ದರು.

ಪಾಪು ಹಾಗೂ ಪಾವೆಂ ನಡುವೆ ಅನೇಕ ಸಾಮ್ಯಗಳಿವೆ. ಪತ್ರಕರ್ತರಾಗಿ ಪ್ರವರ್ಧಮಾನಕ್ಕೆ ಬರಬೇಕೆನ್ನುವ ಆಕಾಂಕ್ಷೆ ಇರತಕ್ಕವರು ಅವುಗಳನ್ನು ಗುರುತಿಸಬೇಕು. ಅವರ ಅನುಭವದ ಆಳದಲ್ಲಿ ಅಡಿಯಷ್ಟಾದರೂ ಇಳಿದು ಅದನ್ನು ಮೈಗೆ ಅಂಟಿಸಿಕೊಳ್ಳಬೇಕು. ನಾನು ಒಂದು ಅಡಿಯಷ್ಟಾದರೂ ಇಳಿದವನೆಂಬ ಆತ್ಮವಿಶ್ವಾಸದಿಂದ ಕನ್ನಡ ಪತ್ರಿಕೋದ್ಯಮದ ಈ ಇಬ್ಬರು ವಿದ್ವಾಂಸರ ಬಗೆಗೆ ಬರೆಯುವ ಸಾಹಸ ಮಾಡಿದ್ದೇನೆ. ನಾನು ಅವರ ಕೆಲಸವನ್ನು ನೋಡಿ ಕಲಿತಿದ್ದೇನೆ; ಆ ಕೆಲಸದ ಬಗ್ಗೆ ಆಡಿ ಕಲಿತಿದ್ದೇನೆ. ಅದನ್ನು ಉದಾಹರಣೆಯಾಗಿ ಆಸಕ್ತಿ ಶ್ರದ್ಧೆ ವೃತ್ತಿಯ ಮೇಲೆ ಪ್ರೀತಿ ಇದ್ದವರಿಗೆ ಕೈಲಾದಷ್ಟು ಕಲಿಸಿದ್ದೇನೆ, ನಾನೂ ಕಲಿಯುತ್ತಿದ್ದೇನೆ. ಕನ್ನಡ ಪತ್ರಿಕೋದ್ಯಮ ತನ್ನ ಉನ್ನತಿಗಾಗಿ ಈ ಇಬ್ಬರು ದಿಗ್ಗಜರ ಸಮರ್ಪಕ ಪ್ರಯೋಜನ ಪಡೆದಿಲ್ಲ ಎಂಬುದು ವ್ಯಸನದ ಸಂಗತಿ. ಇಂದು ದೊಡ್ಡ ದೊಡ್ಡ ಪತ್ರಿಕೆಗಳ ದೊಡ್ಡ ದೊಡ್ಡ ಹುದ್ದೆಗಳಲ್ಲಿ ಇರುವಂಥವರು ಪುಂಖಾನುಪುಂಖವಾಗಿ ಬರೆಯುತ್ತಿದ್ದಾರೆ. ಆದರೆ ಬರೆಯಬೇಕಾದುದನ್ನು ಬರೆಯಬೇಕಾದ ಸಂದರ್ಭದಲ್ಲಿ ಓದುಗರ ಮನಮೆಚ್ಚುವಷ್ಟು ಸಮರ್ಪಕವಾಗಿ ಬರೆಯಬಲ್ಲವರು ಎಷ್ಟು ಮಂದಿ ? ಓದಿದವನು ತಾನೇ ಬರೆಯಬಲ್ಲ! ತಮ್ಮ ಪತ್ರಿಕೆಯನ್ನು ತಾವೇ ಪುಟ ಹೊರಳಿಸಿ ನೋಡಲಾದವರೂ ಇದ್ದಾರೆ. 'ಪ್ರಪಂಚ'ದ 'ಕಸ್ತೂರಿ'ಯ ಹಳೆಯ ಪ್ರತಿಗಳನ್ನು ಅವುಗಳು ಇದ್ದಲ್ಲಿಂದ ತಂದು ಓದುವ ಸಾಹಸಿಗರನ್ನಂತೂ ನಾನು ನೋಡಿಲ್ಲ. ಪತ್ರಿಕೋದ್ಯಮ ಕಾರಕೂನಕಿ ಆಗಬಾರದೆಂದರೆ, 'ಅನುಭವ ಇರುವಲ್ಲಿ ಅಮೃತತತ್ವ ಇದೆ' ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಈ ವಿಷಯದಲ್ಲಿ ಪಾಪು– ಪಾವೆಂ ತುಲನಾತ್ಮಕ ಅಧ್ಯಯನ ಒಂದು ಸಾರ್ಥಕ ಪ್ರಯತ್ನ ಎಂದು ನಾನು ನಂಬಿದ್ದೇನೆ. ಈ ಚಿಕ್ಕ ಹೊತ್ತಗೆಯ ಬರವಣಿಗೆ ನನ್ನ ಪಾಲಿಗೆ ಒಂದು ತೀರ್ಥಯಾತ್ರೆ.

ಇನ್ನೊಂದು ಮಾತು. ಪುಟ್ಟಪ್ಪನವರನ್ನು ಟೀಕಿಸಿ ಅನೇಕರು ದೊಡ್ಡವರಾಗುವ ಪ್ರಯತ್ನ ಮಾಡಿದವರುಂಟು. ಅವರನ್ನು ಹೊಗಳಿ ಅವರ ಹತ್ತಿರಕ್ಕೆ ಸುಳಿದವರೂ ಉಂಟು. ಅದೇ ರೀತಿ ಆಚಾರ್ಯರ ವಿದ್ವತ್ತನ್ನು ಅಣಕಿಸಲು ಅವರನ್ನು ಸರ್ವಜ್ಞ ಎಂದು ಹಾಸ್ಯ ಮಾಡಿ ತಾವು ಸರ್ವ 'ಅಜ್ಞ' ಆಗಿರುವ ಸತ್ಯವನ್ನು ತಾವೇ ಬಯಲು ಮಾಡಿಕೊಂಡವರೂ ಉಂಟು. ತಮ್ಮ ಬರವಣಿಗೆಯಿಂದ ನಾಡಿನ ಓದುಗರ, ಅಭಿಮಾನಕ್ಕೆ ಮತ್ತು ವಿದ್ವಾಂಸರ ಪ್ರಾಮಾಣಿಕ ಪ್ರೀತಿ, ಗೌರವಗಳಿಗೆ ಪಾತ್ರರಾದ ಇವರಿಬ್ಬರಿಗೆ ನಾನು ವಿಶೇಷಣಗಳನ್ನು ಹಚ್ಚಿ ಹೈರಾಣನಾಗುವ ಪ್ರಯತ್ನಮಾಡಿಲ್ಲ. ಇಬ್ಬರೂ ಪ್ರಾತಃಸ್ಮರಣೀಯರು. ಇಬ್ಬರನ್ನೂ ಓದಿ ಅವರ ಅಂತರಂಗ–ಬಹಿರಂಗವನ್ನು ಅರ್ಥಮಾಡಿಕೊಂಡಿದ್ದೇನೆ ಎಂದು ನಂಬಿರುವ ನನ್ನ ಬರವಣಿಗೆಯ ಮೇಲೆ ಬೀರಿದ ಪ್ರಭಾವಕ್ಕೆ ಈ ಅಧ್ಯಯನ ಕೈಗನ್ನಡಿ. ಒಬ್ಬ ಸಮರ್ಥ ಪತ್ರಿಕೋದ್ಯಮಿ, ಹೇಗೆ ಒಬ್ಬ ಸಮರ್ಥ ಶಿಕ್ಷಕನಾಗಿ ಸಮಾಜಕ್ಕೆ ಬೆಳಕಾಗಬಲ್ಲ ಎಂಬುದನ್ನು ಅವರನ್ನು, ಅವರ ಸಾಧನೆಯನ್ನು ಅವಲೋಕಿಸಿ ಕಲಿಯಬೇಕು. ಏಕೆಂದರೆ ಪತ್ರಕರ್ತ ಹಾಗೂ ಶಿಕ್ಷಕರಿಗೆ

ಕಲಿಯಲು ಕಾಲದ ಮಿತಿಯಿಲ್ಲ. ಕಾಲ ಸರಿದಂತೆ ಇಬ್ಬರೂ ದಕ್ಷರಾಗುತ್ತಾರೆ, ಅವರ ಯೋಗ್ಯತೆಯ ಆಳ-ಅಗಲ ವಿಶಾಲವಾಗುತ್ತ ಹೋಗುತ್ತದೆ. ಪಾಪು-ಪಾವೆಂ ಅವರಿಗಿಂತ ಬೇರೆ ಉದಾಹರಣೆ ಬೇಕಾಗಿಲ್ಲ.

ಮಾಧ್ಯಮ ಮತ್ತು ಸಾರ್ವಜನಿಕರನ್ನು ಪತ್ಯೇಕವಾಗಿ ಕಲ್ಪಿಸಿಕೊಳ್ಳಲಾಗದು. ಮಾಧ್ಯಮಗಳಿಲ್ಲದೆ ಸಾರ್ವಜನಿಕರು, ಸಾರ್ವಜನಿಕರಿಲ್ಲದೆ ಮಾಧ್ಯಮಗಳು ಬೆಳೆಯಲಾರವು. ಮಾಧ್ಯಮಗಳು ಅನುಭವಸ್ಥರು ಮತ್ತು ರಾಜಕಾರಣಿಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಸಾರ್ವಜನಿಕರನ್ನು ಪ್ರತಿನಿಧಿಸಬಲ್ಲವು. ಒಂದಕ್ಕೆ ಇನ್ನೊಂದು ವಿಶ್ವಾಸಾರ್ಹತೆಯನ್ನು ತಂದುಕೊಡಲು ಸಾಧ್ಯವಿದೆ. ಉಪಕ್ರಮ ಕೈಕೊಳ್ಳುವ ಪ್ರೌಢಿಮೆ ಮತ್ತು ಜವಾಬ್ದಾರಿ ಮಾಧ್ಯಮಗಳೇ ಹೊರಬೇಕು. ಪಾಪು, ಸಾರ್ವಜನಿಕ ಜೀವನವನ್ನು, ಬೇರೆ ಯಾವ ಪತ್ರಕರ್ತನೂ ಹಿಂದೆ (ಬಹುಶಃ ಮುಂದೆ ಸಹ) ಸಾಧಿಸದಂತೆ, ಆವರಿಸಿಕೊಂಡವರು. ಪಾವೆಂ ವಿವೇಚನೆಯನ್ನು ಸಾಮಾನ್ಯರಿಗೆ ಮಾತ್ರವಲ್ಲ, ಅಸಾಮಾನ್ಯರಿಗೂ ಕಲಿಸಿಕೊಟ್ಟರು. ವೃತ್ತಿಗೆ ಗೌರವ, ಘನತೆಯನ್ನು ತಂದುಕೊಟ್ಟವರಲ್ಲಿ ಇಬ್ಬರೂ ಅಗ್ರಗಣೆಗಳು. ಅವರು ತಮಗಾಗಿ ಬರೆಯಲಿಲ್ಲ; ಸಮಾಜಕ್ಕಾಗಿ ಬರೆದರು. ಅವರಿಗೆ ತಕ್ಕ ಪ್ರ ತಿಫಲ ಅಷ್ಟಕ್ಕಷ್ಟೇ! ಆದರೆ ಓದುಗರ ಮೇಲೆ ಆಗಿರುವ, ಆಗುತ್ತಿರುವ ಪರಿಣಾಮ ಘನವಾದುದು.

ಪಾಪು ಹಾಗೂ ಪಾವೆಂ ಬೇರೆ ಬೇರೆ ಮೂಲಗಳಿಂದ ಬಂದವರಾದರೂ ಹುಬ್ಬಳ್ಳಿಯನ್ನೇ ನೆಲೆಯಾಗಿಟ್ಟುಕೊಂಡವರು. ಹುಬ್ಬಳ್ಳಿಗೆ ಇದು ಬಹುದೊಡ್ಡ ಹೆಮ್ಮೆ ಹಾಗೂ ಗೌರವ. ಬರುತ್ತೇವೆ ಎಂದವರನ್ನು ಬಾಚಿ ತಬ್ಬಿಕೊಳ್ಳುವ ಗುಣ ಹುಬ್ಬಳ್ಳಿಗೆ ಇದೆ. ಅದರ ತೆಕ್ಕೆಯಲ್ಲಿ ಹೃದ್ಯ ಅನುಭವ ಸುಖಿಸಿದವರಲ್ಲಿ ನಾನು ಒಬ್ಬ.

ಈ 'ಪಾಪು-ಪಾವೆಂ' ತುಲನಾತ್ಮಕ ಅಧ್ಯಯನ ನನ್ನ ಬಗ್ಗೆ ಪ್ರೀತಿ, ಅಭಿಮಾನ, ಮೆಚ್ಚುಗೆ ಇಟ್ಟುಕೊಂಡ ಅವರಿಗೆ ಸಲ್ಲಿಸಿದ ಗುರುಕಾಣಿಕೆ, ನನ್ನ ಮಟ್ಟಿಗೆ ಇದು ಸಾರ್ಥಕ ತೀರ್ಥಯಾತ್ರೆ. ಪರಿಪೂರ್ಣತೆ ? ಅದೊಂದು ಬಿಸಿಲುಗುದುರೆ.

ನಾನು ಪಾಪು-ಪಾವೆಂ ಅವರನ್ನು ತಕ್ಕಡಿಯಲ್ಲಿಟ್ಟು ತೂಗಿಲ್ಲ; ಬೆಲೆ ಕಟ್ಟಿಲ್ಲ, ಅವರ ವಜನ ಅವರದೇ. ನಾನು ಉಭಯತರನ್ನು ವಾಸ್ತವದ ನೆಲೆಯಲ್ಲಿ ಅರ್ಥಮಾಡಿ ಕೊಂಡಿದ್ದೇನೆ ಎಂದು ನಂಬಿದ್ದೇನೆ. ನಾನು ಇನ್ನಷ್ಟು ಮತ್ತಷ್ಟು ಬರೆಯಬೇಕೆಂದು ಕೊಂಡಿದ್ದೆ, ಆದರೆ ೨೦೧೧ರ ಕೊನೆಯೊಳಗಾಗಿ ಈ ಕೃತಿಯನ್ನು ಹೊರತರಬೇಕೆಂಬ ಹಿರಿದಾಸೆಯಿಂದ ಹಾಗೂ ಓದುಗರಿಗೆ ಭಾರವಾಗಬಾರದೆಂಬ ಭಾವನೆಯಿಂದ ಪುಸ್ತಕವನ್ನು ನಾನು ಆದಷ್ಟು ಕಡಿಮೆ ಪುಟಗಳಿಗೆ ಮಿತಗೊಳಿಸಿದ್ದೇನೆ. ಆದುದರಿಂದ ಹೋಲಿಕೆಯಲ್ಲಿ ಎಲ್ಲಾದರೂ ದೋಷ ಮತ್ತು ಅಸಮರ್ಪಕತೆ ಕಂಡು ಬಂದಲ್ಲಿ ಪಾಪು-ಪಾವೆಂ ಅಭಿಮಾನಿಗಳು ಅದನ್ನು ಹೊಟ್ಟೆಯಲ್ಲಿ ಹಾಕಿಕೊಳ್ಳಬೇಕೆಂದು

ಕೇಳಿಕೊಳ್ಳುತ್ತೇನೆ. ಇವರಿಬ್ಬರನ್ನೂ ಬೇರೆ ಯಾರೊಡನೆಯೂ ಹೋಲಿಸಲು ಸಾಧ್ಯವೇ ಇಲ್ಲ. ಪಾಪು–ಪಾವೆಂ ಹೋಲಿಕೆ ಈ ಬಗೆಯ ಅಧ್ಯಯನದಲ್ಲಿ ಮಾತ್ರ ಸೂಕ್ತ ಹೋಲಿಕೆ ಆದಷ್ಟು ಹೃದ್ಯ ಆಗಿರುವಂತೆ ಜಾಗ್ರತೆ ವಹಿಸಿದ್ದೇನೆ. ಇದು ನನಗೆ ತುಂಬ ಪ್ರಿಯವಾದ ಕೆಲಸ. ಎರಡು ವರ್ಷಗಳಿಂದ ಮನನ ಮಾಡುತ್ತಿದ್ದು, ಈಗ ಅದು ಕೈಗೂಡುತ್ತಿದೆ. ಇದು ಅವರ ಆಶೀರ್ವಾದದ ಫಲ.

ಈ ಅಧ್ಯಯನ ಕಿರಿಯ ಪತ್ರಕರ್ತರಿಗೆ ಮಾರ್ಗದರ್ಶನವಾಗಬೇಕು. ಅವರಿಗೆ ಹಿರಿಯರ ಅನುಭವದ ಬುತ್ತಿ ಒಂದು ಪಾಠವಾಗಬೇಕೆಂಬ ಹೆಬ್ಬಯಕೆ ನನ್ನದು. ಇದು ಅವರನ್ನು ಚಿಂತನೆಯಲ್ಲಿ ತೊಡಗಿಸಬೇಕು. ಅದಕ್ಕಾಗಿ ಓದುಗರು ಈ ಕೃತಿಯನ್ನು, ಟೀಕಿಸಿದರೂ ಚಿಂತೆ ಇಲ್ಲ, ಪ್ರೀತಿಯಿಂದ ಓದಬೇಕು. ಬೆಲೆಕೊಟ್ಟು ಓದಬೇಕು. ಅಂದರೆ ಅದರ ಬೆಲೆ ಏನು ಎನ್ನುವುದು ಮನವರಿಕೆಯಾದೀತು. ಓದುಗರ ಅನಿಸಿಕೆಗಳಿಗೆ, ಟೀಕೆ ಟಿಪ್ಪಣಿಗಳಿಗೆ ಮುಕ್ತಮನಸ್ಸಿನ ಸ್ವಾಗತ.

■■

# ೨. ಅಪರೂಪದ ವಿದ್ವಾನ್ ಜೋಡಿ

ಪಾಟೀಲ ಪುಟ್ಟಪ್ಪನವರು ಮತ್ತು ಪಾಡಿಗಾರು ವೆಂಕಟರಮಣ ಆಚಾರ್ಯರು ತಮ್ಮ ಜೀವನ ಕಾಲದಲ್ಲಿಯೇ ಕನ್ನಡ ಪತ್ರಿಕಾ ಪ್ರಪಂಚದ ದಂತಕಥೆಗಳಾದವರು. ಕನ್ನಡ ಕೇಳಿ ಬರುವಲ್ಲಿ ಇವರಿಬ್ಬರ ಹೆಸರು ಬಹಳ ಗೌರವದಿಂದ ಪ್ರಸ್ತಾಪವಾಗುತ್ತದೆ. ಸ್ವತಃ ಪಾಪು ಅವರಿಗೆ ಪಾವೆಂ ಬಗೆಗೆ, ಪಾವೆಂ ಅವರಿಗೆ ಪಾಪು ಬಗೆಗೆ ಪ್ರೀತಿ ವಿಶ್ವಾಸಗಳಿದ್ದವು. ಪಾಪು ಆಚಾರ್ಯರ ಬಗ್ಗೆ ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿದ ಮಾತು ಹೋಳಿಗೆ ತುಪ್ಪದ ಸವಿಯಂತಿದೆ. ಪಾಪು ಆಗಾಗ್ಗೆ ಅನೇಕ ವಿಷಯಗಳ ಚರ್ಚೆಗಾಗಿ ಧಾರವಾಡ ಸಾಧನಕೇರಿಯಲ್ಲಿದ್ದ ದ. ರಾ. ಬೇಂದ್ರೆ ಅವರ ಮನೆಗೆ ಹೋಗುತ್ತಿದ್ದರು. ಅಲ್ಲಿ ಅವರಿಗೆ ಪಾವೆಂ ಸಿಕ್ಕುತ್ತಿದ್ದರು. ಚರ್ಚೆ ಗಹನವಾದರೂ ಚೇತೋಹಾರಿ ಯಾಗಿರುತ್ತಿದ್ದಿತು. ಪಾವೆಂ ಅವರ ವಿದ್ವತ್ತು ಪಾಪು ಅವರ ಮನಸ್ಸಿನ ಮೇಲೆ ಬಹಳ ಪ್ರಭಾವ ಬೀರಿರಬೇಕು ಎಂದು ಅನಿಸುತ್ತದೆ. ಅವರು ಬರೆದುದೇನೆಂದರೆ, ''ಆಚಾರ್ಯರಲ್ಲಿ ವಿಷಯಗಳ ಮೈಲಿಗೆ ಇರಲಿಲ್ಲ; ವಿಚಾರಗಳ ದಾರಿದ್ರ್ಯ ಇರಲಿಲ್ಲ. ಅವರೊಂದಿಗೆ ಹೊತ್ತು ಕಳೆಯುವುದೆಂದರೆ ಅದೊಂದು ಮೃಷ್ಟಾನ್ನ ಸವಿದಂತೆ''. ಪುಟ್ಟಪ್ಪನವರ ಈ ಹೃದಯ ವೈಶಾಲ್ಯ, ಮುಕ್ತ ಮನಸ್ಸು ಅವರ ಶ್ರೇಯೋಭಿವೃದ್ಧಿಗೆ ಕಾರಣ.

ಪುಟ್ಟಪ್ಪನವರು ಕ್ರಮಪ್ರಾಪ್ತವಾಗಿ ಶಿಕ್ಷಣ ಪಡೆದವರು. ವಿದ್ಯಾರ್ಥಿ ದೆಸೆಯಲ್ಲಿಯೇ ಸ್ವಾತಂತ್ರ್ಯ ಹೋರಾಟ, ಕರ್ನಾಟಕ ಏಕೀಕರಣದ ದುಡಿಮೆ ಮತ್ತು ಸಾಹಿತ್ಯ

ಚಟುವಟಿಕೆಗಳ ದೀಕ್ಷೆ ಪಡೆದರು. ಹುಟ್ಟೂರು ಕುರುಬಗೊಂಡದಿಂದ ಕ್ಯಾಲಿಫೋರ್ನಿಯದವರೆಗೆ ಅವರ ಅಧ್ಯಯನ ಹರವು ಹೊಂದಿತ್ತು. ತದ್ವಿರುದ್ಧವಾಗಿ ಆಚಾರ್ಯರ ಔಪಚಾರಿಕ ಶಿಕ್ಷಣ ಮೆಟ್ರಿಕ್‌ಗೇ ಮೊಟಕಾಗಿತ್ತು. ಅಕ್ಕಂದಿರಿಂದ ಅಕ್ಷರ ಜ್ಞಾನ ಪಡೆದ ಅವರಿಗೆ ಅರಿವೇ ಗುರುವಾಗಿತ್ತು. ಉಚ್ಚವರ್ಗದಲ್ಲಿ ಮೆಟ್ರಿಕ್ ಪಾಸಾಗಿದ್ದ ಅವರಿಗೆ, ಅವರು ಕಲಿತ ಮಾಧ್ಯಮಿಕ ಶಾಲೆಯ ಮುಖ್ಯಾಧ್ಯಾಪಕ ರಾಕಿ ಫರ್ನಾಂಡಿಸ್ ಅವರು ಮಂಗಳೂರಿನ ಸೇಂಟ್ ಎಲೋಯ್ಸಿಸ್ ಕಾಲೇಜಿನಲ್ಲಿ ಉಚ್ಚ ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟರೂ ಅದನ್ನು ಬಾಲ್ಯದಿಂದಲೂ ಬೆಂಬತ್ತಿದ ಬಡತನ ಹಾಗೂ ಇತರ ಅಡಚಣೆಗಳು ಈ ಅವಕಾಶವನ್ನು ಅವರಿಂದ ವಂಚಿಸಿದವು. ಆದರೆ ಪುಟ್ಟಪ್ಪನವರಿಗೆ ಇಂಥ ಜಂಜಾಟಗಳಿರಲಿಲ್ಲ. ಅವರು ಊರ ಗೌಡರ ಮನೆತನಕ್ಕೆ ಸೇರಿದವರು. ತಕ್ಕಮಟ್ಟಿಗೆ ಶ್ರೀಮಂತ ಮನೆತನ. ಇಂಗ್ಲೀಷ್ ಬಲ್ಲ ದೊಡ್ಡಪ್ಪ ಅವರಿಗೆ ಸ್ಫೂರ್ತಿಯ ಸೆಲೆ. ಸಂಸ್ಕೃತ ಪಂಡಿತರ ಮನೆತನವಾದರೂ ಆಚಾರ್ಯರಿಗೆ ಒಂದು ಎಳೆ ಕೂಡ ಸಿಕ್ಕಲಿಲ್ಲ. ಕುಟುಂಬದಿಂದ ದೂರವಿದ್ದ ತಂದೆ, ನಿರಕ್ಷರಿ ತಾಯಿ, ನಿತ್ಯದ ಬದುಕಿಗೆ ಅಂದರೆ ಒಂದು ಅನ್ನದ ಅಗಳಿಗೆ ಬೆವರಿಳಿಸಬೇಕಾದ ಸ್ಥಿತಿ. ಅವರಿಗೆ ಆನುವಂಶಿಕವಾಗಿ ಬಂದಿದ್ದು ಸ್ವಗ್ರಾಮ ಪಾಡಿಗಾರುವಿನಲ್ಲಿದ್ದ ಚಿಕ್ಕ ಮನೆ ಮತ್ತು ಅಗಾಧವಾದ ಪ್ರತಿಭಾಸಂಪತ್ತು. ಆಚಾರ್ಯರು ಮೆಟ್ರಿಕ್ ಮುಗಿಸುವ ಹೊತ್ತಿಗೆ ಇಂಗ್ಲೀಷ ಕನ್ನಡ ಮತ್ತು ಸಂಸ್ಕೃತ ಪುಸ್ತಕಗಳ ಸಲೀಸಾದ ಅಧ್ಯಯನದಿಂದ ಒಂದು ಆಕರ್ಷಕ ಆಕೃತಿಯಲ್ಲಿ ತಮ್ಮನ್ನು ತಾವು ಮಾರ್ಪಾಟು ಮಾಡಿಕೊಂಡಿದ್ದರು. ಅನ್ನಾರ್ಜನೆಯನ್ನು ಮಾಡಿಕೊಳ್ಳುವಷ್ಟು ಬಲ ತಂದುಕೊಂಡಿದ್ದರು.

ಅವರು ತಮ್ಮ ಊರಿನ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ನೇಮಕಗೊಂಡರು. ಆದರೆ ವಿಧಿಯ ಲೀಲೆ ವಿಚಿತ್ರ. ಅದು ಅವರನ್ನು ಈ ನೌಕರಿಯಲ್ಲಿ ನಿಲ್ಲಗೊಡಲಿಲ್ಲ. ಪದವಿ ತರಗತಿಗಳಿಗೆ ಪಾಠ ಹೇಳುವ ಯೋಗ್ಯತೆ ಸಂಪಾದಿಸಿಕೊಂಡಿದ್ದ ಅವರಿಗೆ ಎಳೆಯ ಮಕ್ಕಳಿಗೆ ತಿಳಿಯುವಂತೆ ಪಾಠ ಹೇಳುವ ಪರಿವೇ ಗೊತ್ತಾಗಲಿಲ್ಲ. ಅವರು ಈ ಕೆಲಸವನ್ನು ಕಬ್ಬಿಣದ ಕಡಲೆಯಂತೆ ಕಂಡರು. ಮಕ್ಕಳೆದುರಿಗೆ ಅಸಹಾಯಕರಾಗಿ ನಿಂತು ಬಿಡುತ್ತಿದ್ದುದಾಗಿ ಅವರೇ 'ಉಡುಪಿಯ ಪರಿಸರ'ದಲ್ಲಿ ಹೇಳಿಕೊಂಡಿದ್ದಾರೆ. ಅವರಿಗೆ ವಿಷಯಗೊತ್ತು ಬಾಯಿ ಬಿಟ್ಟು ಮಕ್ಕಳಿಗೆ ಹೇಳಿಕೊಡುವ ಸಾಮಾನ್ಯವಾದ ಕೆಲಸದ ಹೊಳಹು ಗೋಚರಿಸಲೇ ಇಲ್ಲ. ಅವರು ಜ್ಞಾನ ದಾಹಿ, ಆದರೆ ಬಾಯಿಗೆ ಬಡತನ. ಅವರು ಸ್ವತಃ ತಮ್ಮ ಮಕ್ಕಳಿಗೇ ಏನೂ ಹೇಳಿಕೊಡಲಿಲ್ಲ. ಮುಂದೆ ಸಾವಿರಾರು ಮುದ್ರಿತ ಪುಟಗಳಲ್ಲಿ ಜ್ಞಾನಾಮೃತ ತುಂಬಿ ನಾಡೆಲ್ಲ ಹಂಚಲಿದ್ದ ಅಸಾಮಾನ್ಯ ಪ್ರತಿಭಾವಂತ ಎಂದಿಗೂ ಒಬ್ಬ ಒಳ್ಳೆಯ ಮಾತುಗಾರನಾಗಲಿಲ್ಲ. ಹರಟೆಗೆ ಕೂತರೆ, ವಾದಕ್ಕೆ ಇಳಿದರೆ ಮಾತ್ರ ಅವರ ಬಾಯಿಗೆ ಬಲಬರುತ್ತಿದ್ದಿತು. ಅವರ ಮಾತುಗಳನ್ನು ಕೇಳಿ ಬಲ್ಲವರಿಗೆ ಮಾತ್ರ ಅವುಗಳು ಅರ್ಥವಾಗುತ್ತಿದ್ದವು. ಆಚಾರ್ಯರು ತಮ್ಮ ಜೀವನಾದ್ಯಂತ ಓದುತ್ತಲೇ ಇದ್ದರು. ಆದರೆ ಒಬ್ಬ ಉತ್ತಮ ಭಾಷಣಕಾರನಾಗಲಿಲ್ಲ. ಬರವಣಿಗೆ ಶುದ್ಧ ಸ್ಪಷ್ಟ ಸಲಿಲ. ಪುಟ್ಟಪ್ಪನವರು ಬರಹ ಭಾಷಣ ಎರಡರಲ್ಲೂ

ಅಪ್ರತಿಮರು. ಆಡಿದ್ದನ್ನು ಬರೆಯುವ ಬರೆದುದನ್ನು ಆಡಿ ತೋರಿಸುವ ಚಾಕಚಕ್ಯತೆ ಇಂದಿಗೂ ಅವರನ್ನು ತೊರೆದಿಲ್ಲ. ಅಂತೆಯೇ ಅವರು ಹರಟೆಮಲ್ಲರು. ಯಾವ ಕಂಪನಿಯಲ್ಲೂ ಶೋಭಿಸಬಲ್ಲ ಉಪಸ್ಥಿತಿ ಅವರದು. ಯಾವ ವಿಷಯವನ್ನಾದರೂ ಮಂಡಿಸಬಲ್ಲ ಆಚಾರ್ಯರು ಜೊತೆಗಿದ್ದರೆ ಜುಗಲಬಂದಿ.

ಪುಟ್ಟಪ್ಪ ಬರಹಕ್ಕೆ ಹೇಗೋ ಹಾಗೆಯೇ ಭಾಷಣಕ್ಕೂ ಹೆಸರಾದವರು. ಅವರ ಅಪಾರವಾದ ಲೋಕಸಂಗ್ರಹ, ಕಥೆ ಉಪಕಥೆಗಳು, ಅನುಭವಯಾತ್ರೆ, ದೊಡ್ಡ ವ್ಯಕ್ತಿಗಳು, ಅವರ ಗುಣಾವಗುಣಗಳ ವರ್ಣನೆ, ವಿಷಯದ ಸಾಂದರ್ಭಿಕ ಔಚಿತ್ಯ ಮೊದಲಾದ ಅಂಶಗಳಿಂದ ಅವರ ಭಾಷಣಗಳ ರೋಚಕತೆ ರೋಮಾಂಚನ, ರುಚಿ ಹೆಚ್ಚುತ್ತಲೇ ಹೋಗುವಂಥವು. ಈಗ ೯೧ರಲ್ಲೂ ಅವರು ಭಾಷಣ ಬಲ ಭೀಮರಾಗಿಯೇ ಉಳಿದುಕೊಂಡಿದ್ದಾರೆ. ತಮ್ಮ ಈ ಆಯುಷ್ಯದಲ್ಲಿ ಹತ್ತು ಸಾವಿರ ಭಾಷಣಗಳನ್ನು ಮಾಡಿರಬೇಕು. ಅವರ ಚಟುವಟಿಕೆಯ ಕ್ಷೇತ್ರ ಬಹಳ ವಿಶಾಲ. ಸಾರ್ವಜನಿಕರನ್ನು ಕಿತ್ತು ತಿನ್ನುವ ಸಮಸ್ಯೆಗಳಿಂದ ಹಿಡಿದು ದೇಶದ ಹಿತಚಿಂತನೆಯ ಎಲ್ಲ ವಿಷಯಗಳನ್ನು ಅರೆದು ಕುಡಿದ ಪ್ರಯುಕ್ತ ಭಾಷಣಕ್ಕೆ ವಿಷಯಗಳನ್ನು ಆಯ್ದುಕೊಳ್ಳುವುದು ಅವರಿಗೆ ನೀರು ಕುಡಿದಷ್ಟು ಸುಲಭ. ಅವರು ಸಾಮಾನ್ಯವಾಗಿ ಮಾತನಾಡದಿರುವ ವಿಷಯವೂ ಒಂದಿದೆ ಎಂದರೆ ಆಶ್ಚರ್ಯವೆನಿಸಬಹುದು. ಅದು ಧರ್ಮದ ವಿಷಯ. ಆದರೆ ಧಾರ್ಮಿಕ ಗುರುಗಳ ಬೂಟಾಟಿಕೆಯನ್ನು ಮತ್ತು ಜಾತಿವಾದವನ್ನು ಆಗೀಗ ಖಂಡಿಸುವುದುಂಟು. ಒಂದು ದಿನ ಅವರು, ಬಹುಶಃ ಇನ್ನಾರಿಗೂ ಹಿಂದೆ ಹೇಳದಿದ್ದ ಸಂಗತಿಯನ್ನು ನನಗೆ ಹೇಳಿದರು "ನಾನು ಯಾವುದೇ ಪತ್ರಿಕೆಯನ್ನಾದರೂ ಕೊನೆಯ ಪುಟದಿಂದಲೇ ಓದಲು ಆರಂಭಿಸುತ್ತೇನೆ". ಕ್ರೀಡೆಗಳಲ್ಲಿ ಅವರ ಅಭಿರುಚಿ ಬಹಳ ಜನರಿಗೆ ಅಪರಿಚಿತ. ಅವರಿಗೆ ಟೆನಿಸ್ ಎಂದರೆ ಪಂಚಪ್ರಾಣ. ಅಮೇರಿಕೆಯಲ್ಲಿ ಟೆನಿಸ್ ಮನೆ ಮಾತು. ಬಹುಶಃ ಅವರ ಟೆನಿಸ್ ಪ್ರೀತಿ ಅಮೇರಿಕೆ ವಾಸದಲ್ಲಿ ಅಂಟಿಕೊಂಡಿರಬಹುದು.

ಪಾಪು ಲಿಂಗಾಯತರ ನಡುವೆಯೇ ಬೆಳೆದು ಬಂದವರಾದರೂ ಅವರ ಆಸಕ್ತಿ ಕುತೂಹಲಗಳ ಕ್ಷಿತಿಜ ವಿಸ್ತಾರವಾದ ಹಾಗೆ ಜಾತಿಯ ಚೌಕಟ್ಟನ್ನು ಮುರಿದು ಹಾಕಿ ಹೆಚ್ಚು ಹೆಚ್ಚು ವ್ಯಾಪಕರಾದರು. ಕನ್ನಡ, ಕರ್ನಾಟಕ ಏಕೀಕರಣ, ಭಾರತದ ಸ್ವಾತಂತ್ರ್ಯ ಹೋರಾಟ, ಖಾದಿ ಆಂದೋಲನ, ಬರವಣಿಗೆ ಮೊದಲಾದ ಕ್ಷೇತ್ರಗಳಲ್ಲಿ ಸಕ್ರೀಯರಾದಂತೆ ಜಾತಿಯ ಎಲ್ಲ ಸಂಕೋಲೆಗಳನ್ನು ಮುರಿದು ಹಾಕುತ್ತ ಬಂದರು. ಆಗ ಈ ಎಲ್ಲ ಸ್ವಯಂಸೇವಾ ಚಟುವಟಿಕೆಗಳಲ್ಲಿ ಲಿಂಗಾಯತರು ಮತ್ತು ಬ್ರಾಹ್ಮಣರೇ ಅಧಿಕ ಸಂಖ್ಯೆಯಲ್ಲಿದ್ದರೂ ಎರಡೂ ಸಮುದಾಯಗಳಲ್ಲಿ ಅವರದು ಎದ್ದು ಕಾಣುವ ವ್ಯಕ್ತಿತ್ವ. ಒಳ್ಳೆಯ ಸಂಘಟಕ ಎನ್ನುವ ಕೀರ್ತಿಗೂ ಅವರು ಭಾಜನರಾದರು. ಕೆಲವರು ಹಿರಿಯ ಲಿಂಗಾಯತ ಪ್ರಮುಖರು ಅವರನ್ನು ಬ್ರಾಹ್ಮಣ ಪಕ್ಷಪಾತಿ ಎನ್ನುವ ತಿಳಿವಳಿಕೆಗೆ ತಮ್ಮನ್ನು ತಾನೇ ಕಟ್ಟಿಹಾಕಿಕೊಂಡಿದ್ದರು. ಬ್ರಾಹ್ಮಣರು, ಅವರನ್ನು

ಗೌರವಿಸುತ್ತಿದ್ದರು, ವಿದ್ಯಾರ್ಥಿ ದೆಸೆಯಲ್ಲಿಯೇ ಅಂದರೆ ಇಪ್ಪತ್ತು ದಾಟುವ ಮೊದಲೇ ಅವರು, ಸಂಕೋಚ ಮತ್ತು ಪೂರ್ವಗ್ರಹದ ಭಾವನೆಗಳಿಂದ ದೂರವಾಗಿದ್ದರು. 'ಇವ ನಮ್ಮವ' ಎಂದು ಯಾರಾದರೂ ಅವರ ಬಳಿಗೆ ಬಂದಾಗ ಸ್ಪೇಶಲ್ ಟ್ರೀಟ್‌ಮೆಂಟ್ ಏನೂ ಅವರಿಗೆ ದೊರೆಯುವದಿಲ್ಲ. ಬಹುಶಃ ಇದೇ ಕಾರಣ ಇರಬೇಕು. ಅವರಿಗೆ ಲಿಂಗಾಯತರಲ್ಲೇ ಆಗದವರು ಹೆಚ್ಚು. ತಮ್ಮ ಜಾತಿಯ ಮಠಮಾನ್ಯಗಳಿಗೆ ಪಾವು ಶರಣು ಹೋದವರಲ್ಲ. ಅವರು ಶ್ರದ್ಧಾ ಪೂರ್ವಕ ಗೌರವಿಸುವ ಸ್ವಾಮಿಗಳು ಬಹಳ ಕಡಿಮೆ. ಹಿಂದೊಮ್ಮೆ ಉಡುಪಿಗೆ ಹೋಗಿ ಶ್ರೀ ಕೃಷ್ಣನ ದರ್ಶನ ಮಾಡಿ ಪೇಜಾವರ ಶ್ರೀಗಳನ್ನು ಕಂಡು ಅವರಿಗೆ ಗೌರವ ಅರ್ಪಿಸಿ ಬಂದಿದ್ದಾರೆ. ಬ್ರಾಹ್ಮಣರಲ್ಲಿ ಅನೇಕರು ಅವರನ್ನು ವೈಯಕ್ತಿಕವಾಗಿ ತುಸು ಅಸಹನೆಯಿಂದ ಕಂಡರೂ ಅವರ ವಿದ್ವತ್ತನ್ನು ಯಾರೂ ಪ್ರಶ್ನಿಸಿಲ್ಲ, ಪ್ರಶ್ನಿಸುವ ದಾರ್ಢ್ಯವನ್ನೂ ಯಾರೂ ತೋರಲಾರರು. ಬ್ರಾಹ್ಮಣರು ಪುಟ್ಟಪ್ಪನವರನ್ನು ಬಿಡಲಿ, ತಮ್ಮ ಸಮೂಹದ ಸಾಧಕರನ್ನಾದರೂ ಗೌರವಿಸುವ ಪರಿಪಾಠ ಇಟ್ಟುಕೊಂಡಿದ್ದಾರೆಯೇ ? ಬಹಳ ಕಡಿಮೆ. (ಬ್ರಾಹ್ಮಣ ಸಮುದಾಯದಲ್ಲಿ ಪ್ರತಿಯೊಬ್ಬನೂ ಇನ್ನೊಬ್ಬನಿಗಿಂತ ತಾನು ಜಾಣ ಎಂದೇ ಭಾವಿಸುತ್ತಾನೆ. ಶ್ರೀಮಂತರಲ್ಲಿ ಈ ಭಾವನೆ ಹೆಚ್ಚು. ಬಡಬ್ರಾಹ್ಮಣನತ್ತ ಕಣ್ಣು ಹಾಯಿಸುವ ಕರುಣೆ ಸಮುದಾಯದಲ್ಲಿ ಇಲ್ಲ. ಪ್ರತಿಯೊಂದಕ್ಕೂ ಸ್ಪರ್ಧಿಸಿಯೇ ಗೆಲ್ಲಬೇಕು, ಅದೂ ಪರಿಮಿತ ಅವಕಾಶದಲ್ಲಿ ಎಂಬುದು ಮನವರಿಕೆಯಾದ ನಂತರ ಬ್ರಾಹ್ಮಣ ಸಮುದಾಯ ಸಂಘಟನೆಯತ್ತ, ಸಹಜೀವನದತ್ತ ದೃಷ್ಟಿ ಹಾಯಿಸತೊಡಗಿದೆ. ಈ ಅಭಿಪ್ರಾಯದ ಹೊಣೆ ಸ್ವತಃ ಲೇಖಕನದು.)

ಪಾವೆಂ ಆಚಾರ್ಯರು ಕರ್ಮಠ ಬ್ರಾಹ್ಮಣ ಕುಲದಲ್ಲಿ ಹುಟ್ಟಿ. ಆ ವಾತಾವರಣದಲ್ಲಿಯೇ ಬೆಳೆದು ಬಂದವರು. ಆದರೆ ಆ ಬಡತನ ಜಾತಿಯಿಂದ ನಿವಾರಣೆಯಾಗಲಿಲ್ಲ. ಕಡುಬಡತನದಲ್ಲಿ ಐದನೇ ವಯಸ್ಸಿಗೆ ತಂದೆಯನ್ನು ಕಳೆದುಕೊಂಡ ಅನಾಥ ಪ್ರಜ್ಞೆಯ ನಡುವೆಯೂ ಬಾಲಕ ವೆಂಕಟರಮಣ ಓದಿ ಸಾಹಿತಿಯಾಗುವ ಕನಸು ಕಂಡಿದ್ದರು. ಅದು ಆಶ್ಚರ್ಯವೇ ಸರಿ. ಇಬ್ಬರು ಅಕ್ಕಂದಿರು ಅವರ ಕನಸಿಗೆ ನೀರು, ಗೊಬ್ಬರ ಹಾಕಿ ಪೋಷಿಸಿದರೆಂಬುದನ್ನು ಆಚಾರ್ಯರು ತಮ್ಮ ಒಂದು ಲೇಖನ (ಶ್ರೀನಿವಾಸ ಹಾವನೂರರು ಸಂಪಾದಿಸಿದ 'ಉಡುಪಿಯ ಪರಿಸರದಲ್ಲಿ ಆಚಾರ್ಯರು' ಗ್ರಂಥದಿಂದ ಆಯ್ಕೆ) ದಲ್ಲಿ ಕೃತಜ್ಞತಾಪೂರ್ವಕ ಸ್ಮರಿಸಿದ್ದಾರೆ. ಆಚಾರ್ಯರಿಗೆ ವಿದ್ವತ್ತಿನ ಬಹುದೊಡ್ಡ ಪರಂಪರಾಗತ ಹಿನ್ನೆಲೆ ಇತ್ತು. ಅವರೇ ಬರೆದು ದಾಖಲಿಸಿದ ಸಂಗತಿಗಳನ್ನು, ಅವರ ಮಾತುಗಳಲ್ಲೇ ಓದೋಣ.

''ನಮ್ಮ ಪೂರ್ವಜರು ಉಡುಪಿಯಿಂದ ದಕ್ಷಿಣಕ್ಕೆ ಹದಿಮೂರು ಮೈಲು ದೂರದಲ್ಲಿರುವ ಕೊಲ್ಯದವರಂತೆ. ನಮ್ಮ ಮುತ್ತಜ್ಜ ಉಡುಪಿಗೆ ಬಂದು ಪಾಡಿಗಾರಿನಲ್ಲಿ ನೆಲೆಸಿದ್ದರು. ನನ್ನ ತಂದೆ ಪಾಡಿಗಾರು ಲಕ್ಷ್ಮೀ ನಾರಾಯಣಾಚಾರ್ಯರು, ತಾಯಿ ಸೀತಮ್ಮ ಪಾಡಿಗಾರನವರೇ ಆದ ವೆಂಕಟರಮಣಾಚಾರ್ಯರ ಮಗಳು. ಉಭಯ

ಕುಲಗಳೂ ವಿದ್ವಾಂಸ ಮನೆತನಗಳು. ಆ ಕಾಲದ ಹೆಚ್ಚಿನ ಬ್ರಾಹ್ಮಣ ಮನೆತನಗಳು ಹಾಗೆ ಉಭಯ ಕುಲಗಳೂ ಮಠದ ಆಶ್ರಯದಲ್ಲಿದ್ದವು. ನಾನು ಹುಟ್ಟಿದ ಒಂದು ತಿಂಗಳಲ್ಲೇ ನನ್ನ ತಂದೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಸೋದೆ (ಸೊಂದಾ)ಯಲ್ಲಿದ್ದ ವಾದಿರಾಜಮಠಕ್ಕೆ ಪಾರು ಪತ್ಯಗಾರರಾಗಿ ಹೋದರು. ನನಗೆ ವರ್ಷವಾಗುತ್ತಲೇ ನನ್ನ ತಾಯಿಯನ್ನೂ ನನ್ನನ್ನೂ ಸೋದೆಗೆ ಕರೆದೊಯ್ದರು.

''ನಮ್ಮದು ಅನೇಕ ತಲೆಮಾರುಗಳಿಂದ (ಸಂಸ್ಕೃತ) ವಿದ್ಯಾವಂತ ಮನೆತನ ವಾದರೂ. ಸಂಕೋಚಶೀಲ ಅಂತರ್ಮುಖಿ ಗುಣದ್ದೆಂದು ಒಟ್ಟಾರೆ ಹೇಳಬಹುದು. ನನಗೂ ಈ ಗುಣ ಧಾರಾಳವಾಗಿ ಇದೆ. ತಂದೆ ಋಗ್ವೇದದ ಎಂಟು ಅಷ್ಟಕಗಳನ್ನು ಪುಸ್ತಕದ ನೆರವಿಲ್ಲದೆ. ಪಠಿಸಬಲ್ಲವರಾಗಿದ್ದರಂತೆ. ಆದರೂ ವೈದಿಕ ವಿದ್ಯೆ ಅವರನ್ನು ಜಡರಾಗಿ ಮಾಡಲಿಲ್ಲ. ಅವರು ಆ ಕಾಲದಲ್ಲಿ 'ರಸಿಕ' ಶಬ್ದಕ್ಕೆ ಇದ್ದ ಎಲ್ಲ ಅರ್ಥಗಳಲ್ಲಿ ರಸಿಕರಾಗಿದ್ದರು. ದಿಟ್ಟರೂ ಆಗಿದ್ದರು. ಅವರಿಗೆ ನಾಟಕ ಹರಿಕಥೆಗಳ ಹವ್ಯಾಸವಿತ್ತು. ಧಾರಾಳವಾಗಿ ಗಳಿಸಿದ್ದರೂ ನಮ್ಮನ್ನು ಬಡತನದಲ್ಲಿ ಬಿಟ್ಟು ಹೋಗಲು ಈ ರಸಿಕತೆ ಕಾರಣ ಎಂದು ನಮ್ಮ ತಾಯಿ ಹೇಳುತ್ತಿದ್ದರು. ನಾಲ್ಕು ಹೆಣ್ಣು ಮಕ್ಕಳು, ನಂತರ ಉಳಿದುಕೊಂಡ ಏಕಮಾತ್ರ ಪುತ್ರನಾದ ನನ್ನಿಂದ ಪಿತೃಗಳು ಲುಪ್ತ ಪಿಂಡೋದಕ ರಾಗುವುದು ತಪ್ಪಿತು. ಆದರೆ ನಾನು ಅವರಿಗೆ ಬಿಡುತ್ತ ಬಂದ ತರ್ಪಣದ ಉದಕ ನನ್ನ ತಾಯಿಯ ಕಣ್ಣೀರಿನಿಂದ ಕವೋಷ್ಣವಾಗಿರುತ್ತಿದ್ದಿತು. ಅವರ ರಸಿಕತೆ ನನಗೆ ಬರಲಿಲ್ಲ. ಆದರೆ ಏನೇನಾಗಿದ್ದೇನೋ ಅದರಲ್ಲಿ ಅವರು ದೊಡ್ಡ ಅಂಶವಾಗಿದ್ದಾರೆಂದೇ ನನಗೆ ತೋರುತ್ತದೆ.''

ಈ ಮಾತುಗಳು ಆಚಾರ್ಯರ ಬಾಲ್ಯಾವಸ್ಥೆಯಲ್ಲಿ ಅವರು ಬಳಲಿದ ಮನಃಸ್ಥಿತಿ, ಅಸಹಾಯಕತೆಯನ್ನು ಎತ್ತಿತೋರಿಸುತ್ತವೆ. ಆದರೆ ಅವರ ತರ್ಕಬುದ್ಧಿ ಕ್ರಮೇಣ ಬೇರೆ ಬೇರೆ ನೆಲೆಗಳಿಗೆ ಕೊಂಡೊಯ್ದು ಪಂಡಿತ ಪತ್ರಕರ್ತನನ್ನಾಗಿ ಅವರನ್ನು ಸಮಾಜದ ಮುಂದೆ ನಿಲ್ಲಿಸಿತು. ಅವರೇ ಹೇಳಿದಂತೆ ಸಂಧ್ಯಾವಂದನೆ, ಅಗ್ನಿ ಕಾರ್ಯದ ಆಚೆ ವೈದಿಕ ಶಿಕ್ಷಣ ಪ್ರಾಪ್ತವಾಗಲಿಲ್ಲ. ಅವರಿಗೆ ಅದರತ್ತ ಒಲವು ಇರಲಿಲ್ಲ. ಏಕೆಂದರೆ ಅವರು ಯಾವಾಗಲೂ ದೈವಭಕ್ತರಾಗಿರಲಿಲ್ಲ. ಯಾವತ್ತೂ ಆಗಲಿಲ್ಲ. ಸಮಸ್ಯೆಗಳಿಗೆ ಪರಿಹಾರ ದೊರೆಯದಿದ್ದ ಅಸಹಾಯಕ ಪ್ರಸಂಗಗಳಲ್ಲಿ ಅವರಿಗೆ ದೇವರು ನೆನಪಾಗಿದ್ದುಂಟು. ಅಲ್ಲಿ ಮನಸ್ಸು ನೆಲೆ ನಿಲ್ಲಲಿಲ್ಲ. ದೇವರ ಮೇಲೆ ಅವರ ಅಕ್ಷುಣ್ಣ ವಿಶ್ವಾಸ ಇರಲಿಲ್ಲ. ಅವರದು ತರ್ಕಬದ್ಧ. ಅವರ ದೃಷ್ಟಿಯಲ್ಲಿ 'ದೇವರು ತರ್ಕಬದ್ಧನಲ್ಲ'.

ಪಠ್ಯಪುಸ್ತಕಗಳನ್ನು ಒಮ್ಮೆ ಓದಿ ಒಗೆದರೆಂದರೆ ಮತ್ತೆ ಪುಟ ತಿರುವು ಹಾಕುತ್ತಿದ್ದುದು ಪರೀಕ್ಷೆ ಕಾಲಕ್ಕೆ. ಕಥೆ, ಕಾದಂಬರಿ ಪ್ರಾಚೀನ ಕಾವ್ಯ ಪತ್ತೇದಾರಿ ಕಾದಂಬರಿಗಳ ಭಕ್ತ ಅವರು.

ಆಚಾರ್ಯರ ಜೀವನ ಯಾತ್ರೆಗೆ ಹೋಲಿಸಿದರೆ ಪುಟ್ಟಪ್ಪನವರ ಜೀವನ, ಶಿಕ್ಷಣ, ವೃತ್ತಿ ತರಬೇತಿ ಎಲ್ಲವೂ ಕೂಡಿಬಂದವು. ಅವರು ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಕಲಿಯುವಷ್ಟು ಸುದೈವಿ ಆಗಿದ್ದರು. ನಂತರ ಬೆಳಗಾವಿಯ ಲಾ ಕಾಲೇಜಿನಿಂದ ಪದವಿ ಪಡೆದರು. ಮಗ ಪೋಲೀಸ ಸಬ್ ಇನ್ಸಪೆಕ್ಟರ್ ಆಗಬೇಕೆಂದು ದೊಡ್ಡಪ್ಪ ಬಯಸಿದರೆ ಪುಟ್ಟಪ್ಪ ಸಂದರ್ಶನಕ್ಕೆ ಬಂದ ಕರೆಯನ್ನು ಧಿಕ್ಕರಿಸಿದರು. ಅವರ ಒಲವು ಸಾಹಿತ್ಯ, ಕನ್ನಡ ನಾಡು ನುಡಿಯ ಔನ್ನತದ ಕಡೆಗೆ ಬಾಚಿಕೊಂಡಿತ್ತು. ಮುಂಬೈ ಹೈಕೋರ್ಟಿನಲ್ಲಿ ವಕೀಲ ಆಗಬೇಕೆಂದು ನಿರ್ಧರಿಸಿ, ಹೈಕೋರ್ಟಿನ ನಿವೃತ್ತನ್ಯಾಯಾಧೀಶ ಆರ್. ಎ. ಜಾಗೀರದಾರರಿಗೆ ಜ್ಯೂನಿಯರ್ ಆಗಿ ಕೆಲಸ ಮಾಡತೊಡಗಿದರು. ಅದಾಗಲೇ ಬರವಣಿಗೆಯನ್ನು ಸಿದ್ಧಿಸಿಕೊಂಡಿದ್ದ ಅವರು 'ಬಾಂಬೆ ಕ್ರಾನಿಕಲ್' ಹಾಗೂ 'ಫ್ರೀಪ್ರೆಸ್ ಜರ್ನರಲ್'ಗಳಿಗೆ ಕರ್ನಾಟಕಕ್ಕೆ ಸಂಬಂಧಿಸಿದ ಲೇಖನಗಳನ್ನು ಬರೆಯ ತೊಡಗಿದರು. ಅವರು 'ಫ್ರಿ ಪ್ರೆಸ್ ಜರ್ನಲ್' ಸಂಪಾದಕ ಕೆ. ಸದಾನಂದರಿಗೆ ಹತ್ತಿರದವರಾದರು. ಅವರು ಪುಟ್ಟಪ್ಪನವರನ್ನು ತಮ್ಮ ಪತ್ರಿಕೆಯಲ್ಲೇ ಭರ್ತಿ ಮಾಡಿಕೊಳ್ಳುವ ಇಚ್ಛೆಯನ್ನು ಹೊಂದಿದ್ದರು. ಒಂದು ದಿನ ಆಕಸ್ಮಿಕವಾಗಿ ಸರದಾರ ಪಟೇಲರ ದರ್ಶನಭಾಗ್ಯ ಲಭಿಸಿತು. ಪುಟ್ಟಪ್ಪನವರ ಭಾಷೆ ಪ್ರೌಢಿಮೆ, ಭರವಸೆಯ ಶಕ್ತಿಯ ಬಗೆಗೆ ಕೇಳಿ, ನಿಮ್ಮಂಥ ಬಿಸಿರಕ್ತದ, ಹರಿತವಾದ ಲೆಕ್ಕಣಿಕೆಯ ಜನರು ದೇಶಕ್ಕೆ ಬೇಕಾಗಿದೆ ಎಂದು ಹೇಳಿ, ಪಕ್ಷಕಾರರ ವಕಾಲತ್ತು ಬಿಟ್ಟು ಸಾರ್ವಜನಿಕರ ವಕಾಲತ್ತು ವಹಿಸಲು ಪಟೇಲರು ಪ್ರೇರೇಪಿಸಿದರು.

ಕನ್ನಡದ, ಕನ್ನಡಿಗರ ಸುದೈವ, ಪಾಪು ಕನ್ನಡಕ್ಕೆ ಲಭಿಸಿದರು. ಕನ್ನಡ ಪ್ರತಿಕೋದ್ಯಮಕ್ಕೆ 'ಪ್ರಪಂಚ' ಒಂದು ವಿರಳ ಹಾಗೂ ಯಶಸ್ವೀ ಪ್ರಯೋಗವಾಗಿ ಲಭಿಸಿತು. ಕರ್ನಾಟಕ ಪ್ರದೇಶ ಕಾಂಗ್ರೆಸ್ಸು ಸಮರ್ಥ ಸಂಘಟಕನನ್ನು ಪಡೆದುಕೊಂಡಿತು. ಆದರೆ ಪೋಲೀಸ ಸಬ್ ಇನ್ಸಸೆಕ್ಟರ್ ಆಗಿಯೋ ಯಶಸ್ವೀ ವಕೀಲನಾಗಿಯೂ ಸಮಾಜದಲ್ಲಿ ಗೌರವದಿಂದ ಬಾಳುತ್ತಾನೆಂದು ಮನೆಯ ಮಗನ ಮೇಲೆ ಭರವಸೆ ಇಟ್ಟುಕೊಂಡಿದ್ದ ತಾಯಿ, ದೊಡ್ಡಪ್ಪ, ಚಿಕ್ಕಪ್ಪಂದಿರು, ಅವರು ರಾಜಕಾರಣ, ಪತ್ರಿಕೋದ್ಯಮ, ಏಕೀಕರಣದಂಥ ಊರ ಉಸಾಬರಿಗೆ ಬಿದ್ದುದನ್ನು ಕಂಡು ಬೇಸರಪಟ್ಟರು.

ಪಾವೆಂ ಅವರಿಗೆ ಇಂಥ ಪರಿಸರವಾಗಲಿ, ಇಂಥ ಇಚ್ಛೆಗಳಾಗಲಿ ಇರಲಿಲ್ಲ. ಅವರು ಮೊದಲು ಅನ್ನಬ್ರಹ್ಮನ ಆರಾಧನೆಯಲ್ಲಿ ತೊಡಗಬೇಕಾಯಿತು. ಪಾಪು ಜನರನ್ನು ಸ್ನೇಹಿತರನ್ನು ಸಂಪಾದಿಸಿದರೆ. ಪಾವೆಂ ಅನ್ನ ಸಂಪಾದನೆಗೆ ತಮ್ಮನ್ನು ಅಣಿಗೊಳಿಸಿ ಕೊಳ್ಳುತ್ತಿದ್ದರು. ಆ ಕಾಲದಲ್ಲಿ ಪಾಪು, ಅಗ್ರಪಾತ್ರವಹಿಸದ ಯಾವ ಆಂದೋಲನವೂ ನಡೆಯುವಂತಿರಲಿಲ್ಲ. ಅಗ್ರಗಣ್ಯ ನಾಯಕರು, ಪುಟ್ಟಪ್ಪನವರ ಸಹವಾಸ ಇಲ್ಲದೆ ಪೂರ್ಣಾಕಾರ ಪಡೆಯುತ್ತಿರಲಿಲ್ಲ. ಕಲಬುರ್ಗಿಯಲ್ಲಿ ನಡೆದ ಅಖಿಲ ಕರ್ನಾಟಕ ಏಕೀಕರಣ ಪರಿಷತ್ತು ಮತ್ತು ದಾವಣಗೆರೆಯಲ್ಲಿ ಅವರೇ ಮುಂದಾಗಿ ಸಂಘಟಿಸಿದ

ಹಾಗೂ ಏಕೀಕರಣಕ್ಕಾಗಿ ಹೋರಾಡಲು ಯುವಕರನ್ನು ಸಜ್ಜುಗೊಳಿಸಿದ ಕರ್ನಾಟಕ ಯುವ ಪರಿಷತ್ತಿನ ಕಲಾಪಗಳ ಯಶಸ್ಸಿಗೆ ಪಾಪು ಕಾರಣ.

ಆಚಾರ್ಯರ ಪರಿಸರದಲ್ಲಿ ಕರ್ನಾಟಕ ಏಕೀಕರಣಕ್ಕಿಂತ ಸ್ವಾತಂತ್ರ್ಯ ಹೋರಾಟದ ಬಿಸಿಯೇ ಹೆಚ್ಚಾಗಿತ್ತು. ಆ ಬಿಸಿ ಅವರಿಗೂ ತಾಗಿತು ಉಪಾಧ್ಯಾಯ ಗಿರಿಗೆ ಶರಣು ಹೊಡೆದ ನಂತರ, ೧೯೩೩ರಲ್ಲಿ ಉಡುಪಿಯ ಪ್ರಸಿದ್ಧ ಕಾಂಗ್ರೆಸ್ ಮುಖಂಡ ಹಾಗೂ ಸ್ವದೇಶಿ ಆಂದೋಲನದ ಅಧ್ವರ್ಯು ಎಸ್. ಯು. ಪಣಿಯಾಡಿಯವರು ಆರಂಭಿಸಿದ ಭಾರತ ವಸ್ತು ಮಂದಿರದಲ್ಲಿ ಕೆಲಸಕ್ಕೆ ಸೇರಿದರು. ಪಣಿಯಾಡಿಯವರು ಅಸಾಧಾರಣ ವ್ಯಕ್ತಿ. ಬಡೋದೆಯ ಪ್ರಸಿದ್ಧ ಗ್ರಂಥಾಲಯದಲ್ಲಿ ಸಂಸ್ಕೃತ ವಿಭಾಗದ ಮುಖ್ಯಸ್ಥರಾಗಿದ್ದ ಅವರು ನೌಕರಿಬಿಟ್ಟು ಕಾಂಗ್ರೆಸ್ ಸೇರಿ ಸೆರೆಮನೆವಾಸ ಅನುಭವಿಸಿ ಬಂದಿದ್ದರು. ಸ್ವದೇಶಿ ಅಂಗಡಿಯೊಂದಿಗೆ ಅವರು ತುಳುನಾಡು ಪ್ರೆಸ್ ಎಂಬ ಹೆಸರಿನ ಮುದ್ರಣಾಲಯವನ್ನೂ ಸ್ಥಾಪಿಸಿದ್ದರು. ಮಣಿಪಾಲದಲ್ಲೂ ಅವರು ಪ್ರೆಸ್ ತೆರೆದರು, ಒಂದು ಬ್ಯಾಂಕನ್ನೂ ಆರಂಭಿಸಿದರು. ಈ ಎಲ್ಲ ಸಂಸ್ಥೆಗಳಲ್ಲಿ ಆಚಾರ್ಯರು ದುಡಿದರು. ಆದರೆ ಏಕಾಯೇಕಿ ಪಣಿಯಾಡಿ ಕಂಪನಿಗಳು ದಿವಾಳಿ ಎದ್ದ ಪ್ರಯುಕ್ತ ಅವುಗಳೊಂದಿಗಿದ್ದ ಜವಾಬ್ದಾರಿ, ಹಣಕಾಸಿನ ತಳಕುಗಳು ಆಚಾರ್ಯರನ್ನು ಊರಲ್ಲಿ ನಿಲ್ಲದ ಪರಿಸ್ಥಿತಿಗೆ ನೂಕಿದವು. ಸಂಬಂಧಿಕರ ಹಣವನ್ನು ಅವರು ಈ ಕಂಪನಿಗಳಲ್ಲಿ ತೊಡಗಿಸಿದ್ದರಿಂದ ಅವರಿಗೆ ಮುಖ ತೋರಿಸದಂತಾಯಿತು. ಆದರೆ ಆಚಾರ್ಯರು ಈ ಬಿಕ್ಕಟ್ಟಿನಲ್ಲಿಯೇ ಪಾಸಿಟಿವ್‌ಗಳನ್ನು ಹುಡುಕಿ ಸಂತೋಷಪಟ್ಟರು. ಅವರೇ ಒಂದೆಡೆ ಬರೆದಿರುವಂತೆ ತಾವು ಅಲ್ಲಿ ದುಡಿದ ಆರು ವರ್ಷಗಳು ಅವರಿಗೆ ಫಲಪ್ರದವಾಗಿಯೇ ಕಂಡವು.

ಕಂಪನಿ ದಿವಾಳಿ ತೆಗೆದ ನಂತರ ಊರಲ್ಲಿರಲು ಮನಸ್ಸಾಗದೆ ಹೋಟೆಲ್‌ನಲ್ಲಿ ದುಡಿಯಲು ಮದ್ರಾಸಿಗೆ ಹೋದರು. ಒಂದು ವರ್ಷವಾಗುವಷ್ಟರಲ್ಲಿ ಜಾಗತಿಕ ಯುದ್ಧದ ಭಯದ ಸುದ್ದಿಗಳು ಬರೊಡಗಿದವು. ಮದ್ರಾಸಿನ ಮೇಲೆ ಬಾಂಬ ದಾಳಿ ಆಗುವುದಾಗಿ ಸುದ್ದಿಗಳು ಬರುತ್ತಿದ್ದಾಗ, ಧಾರವಾಡದಲ್ಲಿ ಹೊಟೆಲ್ ಉದ್ದಿಮೆಯಲ್ಲಿ ತೊಡಗಿದ್ದ ಹೆಂಡತಿಯ ಅಣ್ಣಂದಿರು ಅವರನ್ನು ಅಲ್ಲಿಗೆ ಕರೆಸಿಕೊಂಡರು. ಆಚಾರ್ಯರ ಜೀವನಕ್ಕೆ ಸ್ಥಿರತೆ ಬಂದುದೇ ಈ ಹಂತದಲ್ಲಿ. ಪಣಿಯಾಡಿಯವರು ಊರು ಬಿಟ್ಟು ಕಣ್ಮರೆಯಾದರು. ಆಚಾರ್ಯರಿಗೆ ಅವರ ಬಗ್ಗೆ ಗೌರವ ಕಡಿಮೆ ಆಗಲಿಲ್ಲ. ಅವರ ಕ್ರಾಂತಿಕಾರಿ ಪ್ರವೃತ್ತಿಯಿಂದಾಗಿ ತಮ್ಮಲ್ಲಿ ಉಳಿದುಕೊಂಡಿದ್ದ ಸಾಂಪ್ರದಾಯಕ ನಂಬುಗೆಗಳು ಕಳಚಿ ಹೋದವೆಂಬುದು ಆಚಾರ್ಯರು ಕೃತಜ್ಞತೆಯಿಂದ ಸ್ಮರಿಸಿದ್ದಾರೆ. ತಮ್ಮಲ್ಲಿ ಹುದುಗಿದ್ದ ಅನೇಕ ಶಕ್ತಿಗಳನ್ನು ಪಣಿಯಾಡಿಯವರು ಹೊಡೆದೆಬ್ಬಿಸಿದ ಕಾರಣ ತಮ್ಮ ಬಹುಮುಖ ಅನುಭವಗಳು ಜೀವನದಲ್ಲಿ ಅವರಿಗೆ ಉಪಯೋಗಕ್ಕೆ ಬಂದವಂತೆ. ಕಂಪನಿಯ ಸಂಸ್ಥೆಯಲ್ಲಿದ್ದಾಗ ಅವರು ೧೪ ರಿಂದ ೧೬ ತಾಸು ದುಡಿಯಬೇಕಾಗಿತ್ತು.

ಬಹುಶಃ ಈ ದುಡಿತದ ಅಭ್ಯಾಸವೇ ಅವರಿಗೆ ಮುಂದಿನ ಜೀವನದಲ್ಲಿ ಅನುಕೂಲವಾಯಿತು.

ಆಚಾರ್ಯರ ಬಹುಮುಖ ಪ್ರತಿಭೆಯ ಒಂದೊಂದೇ ಅಂಶ ಹೊರಬೀಳ ತೊಡಗಿದ್ದು ಈ ಕಾಲದಲ್ಲೇ. ಅವರ ಸಾಹಿತ್ಯ ಶಕ್ತಿ ಪುಟಿದೆದ್ದು ಅವರಿಗೆ ಸಂತೋಷ ಹಾಗೂ ಸಮಾಧಾನ ನೀಡಿ, ಸಾಧನೆಯ ಹಾದಿಯಲ್ಲಿ ಅವರನ್ನು ಮುಂದೆ ತಂದಿತು. ಇನ್ನೊಂದು ಸಂಗತಿಯನ್ನು ಇಲ್ಲಿ ಪ್ರಸ್ತಾಪಿಸಬೇಕು. ಎಲ್ಲ ಪರೀಕ್ಷೆಗಳಲ್ಲಿ ನೂರಕ್ಕೆ ನೂರು ಗುಣಗಳನ್ನು ಗಳಿಸುತ್ತಿದ್ದ ತಾವೇ ತಮ್ಮ ಬಿಡುವಿಲ್ಲದ ದುಡಿತದ ನಡುವೆಯೇ ಯಾರ ನೆರವೂ ಇಲ್ಲದೆ ಫೀಲ್ಡಹೌಸ್‌ನ ಅಕೌಂಟನ್ಸಿ ಪುಸ್ತಕ ಓದಿ ಆಧುನಿಕ ಅಕೌಂಟನ್ಸಿಯನ್ನು ಅಭ್ಯಾಸ ಮಾಡಿದರು. ಪಣೆಯಾಡಿಯವರ ಪ್ರೆಸ್ಸಿನ ಲೆಕ್ಕಪತ್ರ ಬಹಳ ಗೊಂದಲದಲ್ಲಿ ಬಿದ್ದುದರಿಂದ ಅದನ್ನು ಹಸನು ಮಾಡಿದರು. ಕಂಪನಿಗಳ ಲೆಕ್ಕಪತ್ರ, ಸಭಾಕ್ರಮ, ಸೆಕ್ರೆಟರಿಯಲ್ ಪ್ರ್ಯಾಕ್ಟೀಸು, ಬ್ಯಾಲನ್ಸ್‌ಶೀಟುಗಳ ಸಿದ್ಧತೆ, ಕಂಪನಿ ಕಾನೂನುಗಳ ಅನ್ವಯ ಎಲ್ಲದರಲ್ಲೂ ಕೈಯಾಡಿಸಿ ತಮ್ಮ ಪ್ರತಿಭೆಯ ಇನ್ನೊಂದು, ತೀರ ಭಿನ್ನವಾದ ಮುಖವನ್ನು ತೋರಿಸಿದರು.

ಸಂಯುಕ್ತ ಕರ್ನಾಟಕ ಸೇರಿ ಅಂದರೆ ಕರ್ಮವೀರ ಸಾಪ್ತಾಹಿಕ ಹಾಗೂ ದಿನಪತ್ರಿಕೆಯ ವಾರಾಂತ್ಯದ ಆವೃತ್ತಿಯಲ್ಲಿ ದುಡಿಯಲು ಆರಂಭಿಸಿದಾಗ ಒಂದು ದೊಡ್ಡ ಹೊಣೆಯನ್ನು ಪಾವೆಂ ಹೊರಬೇಕಾಗಿ ಬಂತು. ಮೊಹರೆ ಹಣಮಂತರಾಯರು, ಯಾರಲ್ಲಿ ಯಾವ ತಾಕತ್ತು ಇದೆ. ಯಾರಿಂದ ಏನನ್ನು ದುಡಿಸಿಕೊಳ್ಳಬೇಕೆಂಬ ಜಾಣ್ಮೆಯನ್ನು ಅಂತರ್ಗತ ಮಾಡಿಕೊಂಡಿದ್ದರು. ಬ್ಯಾಂಕ್ ಆಫ್ ಕರ್ನಾಟಕದ ಮೆಮೊರ್ಯಾಂಡಮ್ ಆಫ್ ಆರ್ಟಿಕಲ್ಸನ್ನು ತಯಾರಿಸಿಕೊಡಲು ಕೇಳಿಕೊಂಡಾಗ ಆಚಾರ್ಯರು ಅದನ್ನು ಸಲೀಸಾಗಿ ಮಾಡಿಕೊಟ್ಟರು. ಆಗ ಹುಬ್ಬಳ್ಳಿಯಲ್ಲಿ ಕಂಪನಿ ಕಾನೂನು ಬಲ್ಲವರು ಕೆಲವರೇ ಇದ್ದರು. ಎಲ್ಲಿಯ ಸಾಹಿತ್ಯ, ಎಲ್ಲಿಯ ಪ್ರತಿಕೋದ್ಯಮ ಹಾಗೂ ಎಲ್ಲಿಯ ಅಕೌಂಟನ್ಸಿ ? ಆ ಭಗವಂತನೇ ಬಲ್ಲನು. ಈಗ ಈ ಕೆಲಸಕ್ಕೆ ತಜ್ಞರು ಲಕ್ಷಾವಧಿ ಹಣ ಕೇಳುತ್ತಾರೆ. 'ಕಸ್ತೂರಿ'ಯ ಕೆಲಸ ಆರಂಭವಾಗುವ ಮುನ್ನ ಹಾಗೂ ಮುಗಿದ ನಂತರ ಅವರು ಹೋ ಟೆಲ್‌ಗಳಿಗೆ ಅಚ್ಚುಕಟ್ಟಾಗಿ ಲೆಕ್ಕ ಪತ್ರ ಬರೆದು ಕೊಡುತ್ತಿದ್ದರು.

■■

## ೩. ಸಾಹಿತ್ಯ : ಓದು - ಬರಹ

ಪಾಪು ಹಾಗೂ ಪಾವೆಂ ಅವರ ಆರಂಭದ ಜೀವನವನ್ನು ಬೆಂಬತ್ತಿಹೋದಾಗ, ಉಭಯತರು ಹಿಡಿದ ವಿಭಿನ್ನ ಮಾರ್ಗಗಳು ಗೋಚರಿಸುತ್ತವೆ. ವಿಭಿನ್ನ ಪರಿಸ್ಥಿತಿ, ವಿಭಿನ್ನ ಆಸಕ್ತಿ ವಿಭಿನ್ನ ಪರಿಸರಗಳ ಹೊರತಾಗಿಯೂ ಅವರು ಕೊನೆಯಲ್ಲಿ ಸಮಭುಜರಾಗಿ, ಸಾಮಾನ್ಯ ಅಭಿರುಚಿಯಿಂದ ಅಸಾಮಾನ್ಯರಾಗಿ ಬೆಳೆದು ನಿಂತರು. ಅವರವರದೇ ರೀತಿಯಲ್ಲಿ ಕನ್ನಡದ ಸೇವೆಗೆ ಅಣಿಗೊಂಡರು. ಗೌಡರ ಮನೆತನದವರಾದರೂ ಪುಟ್ಟಪ್ಪನವರಿಗೆ ಜೀವನ ಸುಖದ ಸುಪ್ಪತ್ತಿಗೆ ಆಗಿರಲಿಲ್ಲ. ಆದರೆ ಆಚಾರ್ಯರಂತೆ ಅನ್ನಕ್ಕಾಗಿ ಅಹರ್ನಿಶಿ ಕಷ್ಟ ಪಡಬೇಕಾಗಿರಲಿಲ್ಲ. ಆದುದರಿಂದಲೇ ಇಬ್ಬರಿಗೂ ಜೀವನದ ಸತ್ಯ ಅಥವಾ ಮಿಥ್ಯೆ ಬಹುಬೇಗ ಅರ್ಥವಾಗಿತ್ತು. ಪಾಪು ಇಚ್ಛಾಪೂರ್ವಕ ಕಾರ್ಯಕ್ಷೇತ್ರವನ್ನು ವಿಶಾಲಗೊಳಿಸಿಕೊಂಡು ದುಡಿದರು. ಅವರು ತಮ್ಮ ಸುತ್ತಮುತ್ತಲಿನ ಆಗುಹೋಗುಗಳಿಂದ ಪ್ರಭಾವಿತರಾದರು. ಹೊಸಮನಿ ಸಿದ್ದಪ್ಪ, ಹಳ್ಳಿಕೇರಿ ಗುದ್ಲೆಪ್ಪ, ಮೈಲಾರ ಮಹಾದೇವ, ಅವರನ್ನು ಸಕ್ರೀಯ ಹೋರಾಟ ಹಾಗೂ ರಾಜಕೀಯಕ್ಕೆ ಸೆಳೆದುಕೊಂಡರು. ೧೯೩೦ರಷ್ಟು ಹಿಂದೆಯೇ, ಅಂದರೆ ಇನ್ನೂ ವಿದ್ಯಾರ್ಥಿ ದೆಸೆಯಲ್ಲಿ ಕಾಂಗ್ರೆಸ್ ಪರ ಚುನಾವಣೆ ಪ್ರಚಾರ ಕಾರ್ಯಕೈಕೊಂಡು, ಮುಂದೆ ಹಿರಿಯ ಧುರೀಣರಿಗೆ ಅಚ್ಚು ಮೆಚ್ಚಿನವರಾದರು. ಆಚಾರ್ಯರ ಮೇಲೆ ಕಾಂಗ್ರೆಸಿನ, ಮುಖ್ಯವಾಗಿ ಗಾಂಧೀಜಿಯ ಪ್ರಭಾವ ಇತ್ತು. ಆದರೆ ಸಕ್ರೀಯ ರಾಜಕಾರಣಕ್ಕೆ ಧುಮುಕುವ ದಾರ್ಢ್ಯವಾಗಲಿ ಮನಸ್ಸಾಗಲ್ಲಿ ಅವರಲ್ಲಿ ಹುಟ್ಟಲಿಲ್ಲ.

ಪುಟ್ಟಪ್ಪನವರು ತಮ್ಮ ಗುರಿಯನ್ನು ಗೊತ್ತು ಮಾಡಿಕೊಂಡಿದ್ದರು. ಆ ಗುರಿಯನ್ನು ಸಾಧಿಸುವ ದಾರಿಯನ್ನು ಗುರುತು ಮಾಡಿಕೊಂಡಿದ್ದರು. ಅದಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿಸಿಕೊಂಡಿದ್ದರು. ಮುಂಬಯಿ ಹೈಕೋರ್ಟಿನಲ್ಲಿ ವಕೀಲಿ ಮಾಡುವ ಆಕಾಂಕ್ಷೆ ಅವರದು. ಅದು ಅವರಿಗೆ ಸಾಧಿಸಲಾರದಂಥ ಗುರಿಯಾಗಿರಲಿಲ್ಲ. ಆದರೆ ಅವರ ಕರ್ನಾಟಕದ ಕಿಚ್ಚು ಮತ್ತು ಬರವಣಿಗೆಯ ಹುಚ್ಚು ಮುಂಬಯಿಯಲ್ಲಿ ಹಿರಿಯರಿಂದ ದೊರೆತ ಪ್ರೇರಣೆ ಅವರ ಗುರಿ–ದಾರಿ ಎರಡನ್ನೂ ಬದಲಿಸಿದವು. ಇದಕ್ಕೆ ಪ್ರತಿಯಾಗಿ ಆಚಾರ್ಯರಿಗೆ ದಾರಿ ಎಂಬುದೇನೂ ಕಂಡಿರಲಿಲ್ಲ. ಜೀವನ ಎಳೆದುಕೊಂಡು ಹೋದ ದಾರಿಯಲ್ಲಿ ಅವರ ಹೆಜ್ಜೆಗಳು ಬಿದ್ದವು. ಮಾಸ್ತರಿಕೆಯಲ್ಲಿ ಯಶಸ್ವಿಯಾಗಿದ್ದರೆ ಅದೇ ಅವರ ಜೀವನೋಪಾಯ ಆಗಬಹುದಿತ್ತು. ಅವರ ಅಪಾರ ನೆನಪಿನ ಶಕ್ತಿ, (ಪುಟ್ಟಪ್ಪನವರೂ ಅಷ್ಟೇ) ಯಾವ ಕೆಲಸ ಕೊಟ್ಟರೂ ಚಾಕಚಕ್ಯತೆಯಿಂದ ನಿರ್ವಹಿಸುವ ಚಿಕಿತ್ಸಕ ಬುದ್ಧಿ ಅವರಿಗೆ ಇತ್ತು. ಆದರೆ ಅವರ ಮನಸ್ಸನ್ನು ಗಟ್ಟಿಗೊಳಿಸಿ, ಬೆನ್ನು ತಟ್ಟುವವರು ಇರಲಿಲ್ಲ. ಅಲ್ಲದೆ ಎಷ್ಟೇ ಬುದ್ಧಿವಂತನಾದರೂ ಮೆಟ್ರಿಕ್ ಮಾತ್ರ ಪಾಸಾಗಿದ್ದ ಹುಡುಗನೊಬ್ಬ ಬಹಳವಾದರೆ ಪ್ರಾಥಮಿಕ ಶಾಲೆ ಶಿಕ್ಷಕ, ಸರಕಾರೀ ಗುಮಾಸ್ತ ಇಲ್ಲವೆ ಯಾವುದಾದರೂ ಖಾಸಗಿ ನೌಕರಿಯ ಆಚೆ ಕಣ್ಣು ಹಾಯಿಸಲು ಹೇಗೆ ಸಾಧ್ಯ ? ಹೇಗಾದರೂ ಮಾಡಿ ಕಾಲೇಜು ಕಟ್ಟೆಏರುವ ಅವಕಾಶ ಉಪಯೋಗಿಸಿಕೊಂಡಿದ್ದರೆ ಗುರಿ ಹಾಗೂ ದಾರಿ ಎರಡನ್ನೂ ಗುರುತಿಸಿಕೊಳ್ಳುವ ಮಹಾತ್ವಾಕಾಂಕ್ಷೆ ಅವರ ಬಡಕಲು ದೇಹದಲ್ಲಿ ಆವಿರ್ಭವಿಸ ಬಹುದಾಗಿತ್ತು. ಇನ್ನೊಂದು ದೃಷ್ಟಿಯಿಂದ ನೋಡಿದರೆ ಅವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವಿಫಲರಾದದ್ದೆ ಒಳ್ಳೆಯದಾಯಿತು. ಏಕೆಂದರೆ ಅವರ ದೈವದತ್ತವಾದ ಪೂರ್ಣ ಪ್ರತಿಭೆ ಅರಳುವ, ವಿದ್ವಾಂಸನೆಂದು ಮನ್ನಣೆ ಪಡೆಯುವ ಅವಕಾಶಗಳು ಮುಂದೆ ಬರಲಿದ್ದವು. ಪುಟ್ಟಪ್ಪನವರು ವಕೀಲಿ ಬಿಟ್ಟು ಹುಬ್ಬಳ್ಳಿಗೆ ಮರಳಿ ಬಂದುದಕ್ಕೆ ಸಮನಾದ ಸಂಗತಿ ಇದು. ಇಲ್ಲದೇ ಹೋಗಿದ್ದರೆ ಕರ್ನಾಟಕ ಹಾಗೂ ಕನ್ನಡ ಇಬ್ಬರು ಮೇಧಾವಿ ಪತ್ರಕರ್ತರನ್ನು ಕಳೆದುಕೊಳ್ಳುತ್ತಿದ್ದಿತು.

ಪಾಪು ಹಾಗೂ ಪಾವೆಂ ಬೇರೆ ಬೇರೆ ದಾರಿಗಳಲ್ಲಿ ಸಾಗಿಬಂದರಾದರೂ. ಅವರ ಸಮಾನ ಆಸಕ್ತಿ ಸಾಹಿತ್ಯದ ಓದು ಬರಹದಲ್ಲಿ ಸಫಲಗೊಂಡಿತು ; ಹುಬ್ಬಳ್ಳಿಯಲ್ಲಿ ಅವರನ್ನು ಒಂದುಗೂಡಿಸಿತು. ವಿಚಿತ್ರ ಏನೆಂದರೆ ಪಾವೆಂ ಹುಬ್ಬಳ್ಳಿಗೆ ಬಂದ ಮೇಲೆ ಅವರ ಜೀವಕ್ಕೂ ಸ್ವಲ್ಪ ಸ್ಥಿರತೆ ಮತ್ತು ನೆಮ್ಮದಿ ಪ್ರಾಪ್ತವಾದವು. ಪಾಪು ಮಾನಸಿಕ ಸ್ಥಿರತೆಯನ್ನು ಕಾಪಾಡಿಕೊಂಡು ಬಂದರು. ಅವರ ಸಾಹಸಗಳು ಅವರನ್ನು ಬಡತನಕ್ಕೆ ನೂಕಿದವು ಕಠಿಣ ದಿನಗಳ'ು. ಇಬ್ಬರೂ ತಮ್ಮ ಸಹಜ ಸಂಗಾತಿಯಾಗಿದ್ದ ಭಾಷಾ ಜ್ಞಾನ ಮತ್ತು ಕಲ್ಪನಾ ಶಕ್ತಿಯಿಂದ ಸಾಹಿತ್ಯ ರಚನೆಯತ್ತ ಸಾಗಿ ಹೋಗಿ ಕೊನೆಗೆ ಪತ್ರಿಕೋದ್ಯಮಕ್ಕೆ ಅಂಟಿಕೊಂಡರು ಆಚಾರ್ಯರು ನೌಕರಿಯನ್ನು ಆಯ್ದುಕೊಂಡರು. ಆದಾಯ ಎಷ್ಟೇ ಕಡಿಮೆ ಇರಲಿ ನೌಕರಿಗೆ ಅಂಟಿಕೊಂಡು ಓದುತ್ತ, ಬರೆಯುತ್ತ, ಹರಟೆಹೊಡೆಯುತ್ತ, ಇದ್ದುದರಲ್ಲಿಯೇ ಸಮಾಧಾನಪಟ್ಟುಕೊಂಡಿದ್ದರು.

ಪುಟ್ಟಪ್ಪನವರು ಪ್ರಪಂಚಕ್ಕಾಗಿ ಸಾಲ ಸೋಲ ಮಾಡಿದರು. ಮಾನಾಪಮಾನಗಳನ್ನು ಸಹಿಸಿಕೊಂಡರು. ಕಪ್ಪು ಮೋಡದಲ್ಲಿ ಬೆಳ್ಳಿ ಚುಕ್ಕೆಯಂತೆ ಕಂಡುಬಂದ ಸಹೃದಯಿ ಸ್ನೇಹಿತರ ನೆರವವನ್ನೂ ಪಡೆದರು.

ಪಾಪು ಹಾಗೂ ಪಾವೆಂ ಇಬ್ಬರು ಪತ್ರಕರ್ತರಾಗುವ ಮೊದಲು ಸಾಹಿತ್ಯ ರಚನಾಕಾರರು. ಬಹುಶಃ ಇದೇ ಕಾರಣವಿರಬೇಕು, ಅವರ ಭಾಷಾ ಶುದ್ಧಿ, ಪ್ರಭಾವಿ ನಿರೂಪಣೆ ಮತ್ತು ಅಗಾಧವಾದ ಶಬ್ದ ಸಂಪತ್ತಿಗೆ. ಇಬ್ಬರೂ ವಿದ್ಯಾರ್ಥಿ ದೆಸೆಯಲ್ಲಿಯೇ ಓದಿನತ್ತ ಆಕರ್ಷಿಸಲ್ಪಟ್ಟು ಬರವಣಿಗೆಯತ್ತ ಮನಸ್ಸು ಹಾಯಿಸಿದರು. ಆಗಿನ ಕಾಲದ ಪತ್ರಿಕೆಗಳು, ಎಲ್ಲವೂ ಒಂದಕ್ಕೊಂದು ರೀತಿಯಲ್ಲಿ ಪ್ರತಿಷ್ಠಿತವಾದವುಗಳೇ, ಅವರ ಬರಹಗಳನ್ನು ಆದ್ಯತೆ ಕೊಟ್ಟು ಪ್ರಕಟಿಸುತ್ತಿದ್ದವು. ಪುಟ್ಟಪ್ಪನವರು ಶಾಲೆಯಲ್ಲಿದ್ದಾಗ ಸವದತ್ತಿ ಮಾಸ್ತರರ ಮಾರ್ಗದರ್ಶನದಂತೆ ಬೇರೆ ಬೇರೆ ಗ್ರಂಥಗಳಿಂದ ಒಳ್ಳೆಯ ವಾಕ್ಯಗಳನ್ನು ಆಯ್ದು ಬರೆದಿಟ್ಟುಕೊಳ್ಳುತ್ತ ಸಾಹಿತ್ಯದ ಅಭಿರುಚಿ ಬೆಳೆಸಿಕೊಂಡರು. ೧೫ ವರ್ಷ ವಯಸ್ಸಿಗೆ ಅವರು ಗಳಗನಾಥರ, ಕೆರೂರ ವಾಸುದೇವಾಚಾರ್ಯರ, ಗುಳ್ವಾಡಿ ವೆಂಕಟರಾಯರ, ಬಿ. ವೆಂಕಟಾಚಾರ್ಯರ ಪುಸ್ತಕಗಳನ್ನು ಓದಿ ಅರಗಿಸಿ ಕೊಂಡಿದ್ದರು. ತಮ್ಮ ಸಂಪಾದಕತ್ವದಲ್ಲಿ 'ನಮ್ಮ ನಾಡು' ಎಂಬ ಹೆಸರಿಟ್ಟು ಕೈಬರಹದ ಪತ್ರಿಕೆಯನ್ನು ಅವರು ಹೊರಡಿಸುತ್ತಿದ್ದರು. ಅವರ ದೊಡ್ಡಪ್ಪ ಟೈಮ್ಸ್ ಆಫ್ ಇಂಡಿಯಾ ಮತ್ತು ಕಲಕತ್ತಾ ಪ್ರಕಟಣೆ ಮಾಡರ್ನ ರಿವ್ಯೂ ಪತ್ರಿಕೆಗಳನ್ನು ತರಿಸುತ್ತಿದ್ದರು. ಅವುಗಳಲ್ಲಿ ಪ್ರಕಟವಾಗಿದ್ದ ಒಳ್ಳೆಯ ಲೇಖನಗಳನ್ನು ಅವರು ಕನ್ನಡಕ್ಕೆ ಭಾಷಾಂತರಿಸುತ್ತ ಎರಡೂ ಭಾಷೆಗಳಲ್ಲಿ ಪ್ರೌಢಿಮೆ ಪಡೆಯುತ್ತ ಬಂದರು. ಅದೇ ರೀತಿ ೫೦–೬೦ ಕಥೆಗಳನ್ನು ಅವರು ಅನುವಾದಿಸಿ ಇಟ್ಟುಕೊಂಡರು. ಆಲೂರ ವೆಂಕಟರಾಯರ 'ಜಯ ಕರ್ನಾಟಕ'ವನ್ನು ತಪ್ಪದೇ ಓದುತ್ತಿದ್ದರು.

ಪಾಪು ಅವರಿಗೆ ಬೆಳಗಾವಿಯಲ್ಲಿದ್ದಾಗ ಅನೇಕ ಸಾಹಿತ್ಯಿಕ ಗೆಳೆಯರಿದ್ದರು. ಡಿ. ಎಸ್. ಕರ್ಕಿ, ಈಶ್ವರ ಸಣಕಲ್ಲ, ಎಸ್. ಡಿ. ಇಂಚಲ್, ಬ.ಗಂ, ತುರಮರಿ, ಮೊದಲಾದವರಿದ್ದ ಸಾಹಿತ್ಯಕೂಟ ನಾಡ ಹಬ್ಬದ ಆಚರಣೆಗೆ ನಾಂದಿಹಾಕಿತು. ಒಮ್ಮೆ ಮಾಸ್ತಿ ವೆಂಟಕೇಶ ಅಯ್ಯಂಗಾರ ಅವರು ಬೆಳಗಾವಿಗೆ ಬಂದಿದ್ದರು. ಪಾಪು ತಮ್ಮ ಬಗ್ಗೆ ಬರೆದಿದ್ದ ಲೇಖನವನ್ನು ಮಾಸ್ತಿ ತುಂಬ ಮೆಚ್ಚಿಕೊಂಡರು. ಸಂಯುಕ್ತ ಕರ್ನಾಟಕದ ರೂವಾರಿಗಳಲ್ಲಿ ಒಬ್ಬರಾಗಿದ್ದ ಅನಂತರಾವ ಚಿಕ್ಕೋಡಿಯವರ ಬರೆವಣಿಗೆಯ ಶೈಲಿ ಪುಟ್ಟಪ್ಪನವರಿಗೆ ತುಂಬ ಮೆಚ್ಚುಗೆಯಾಗಿತ್ತು. ಅನಕೃ ಹಾಗೂ ಬೆಟಗೇರಿ ಕೃಷ್ಣ ಶರ್ಮರ ನಿಕಟ ಸಾನಿಧ್ಯ ಅವರಿಗೆ ಇತ್ತು. ಜೊತೆಗೆ ಅಲ್ಲಿಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಕರ್ನಾಟಕ ವಾದಿಗಳ ಸತತ ಸಂಪರ್ಕ ಹೊಂದಿದ್ದರು.

೧೯೪೬ರ ಕೊನೆಯಲ್ಲಿ ಪಾಟೀಲ ಪುಟ್ಟಪ್ಪನವರು 'ವಿಶಾಲ ಕರ್ನಾಟಕ' ವಾರಪತ್ರಿಕೆಯ ಸಂಪಾದಕರಾದರು. ಬರೆಯುವವರು ಅವರು ಒಬ್ಬರೇ. ಶೇಕ್ಸಪಿಯರ್‌ನ ನಾಟಕಗಳನ್ನು ಅನುವಾದಿಸಿ ಅದರಲ್ಲಿ ಪ್ರಕಟಿಸುತ್ತಿದ್ದರು. ಸಾಹಿತ್ಯ ಸೇವೆ, ಪತ್ರಿಕಾ

ಸೇವೆ ಎರಡನ್ನೂ ಅವರು ಗಂಭೀರವಾಗಿ ತೆಗೆದುಕೊಂಡಿದ್ದರು. ೧೯೪೭ರ ಅಗಸ್ಟ್ ೬ ರಂದು 'ವಿಶಾಲ ಕರ್ನಾಟಕ' ದಿನಪತ್ರಿಕೆಯಾಯಿತು. ಅದನ್ನು ಒಂದು ಆದರ್ಶ ಪತ್ರಿಕೆಯನ್ನಾಗಿ ರೂಪಿಸುವ ಯತ್ನದಲ್ಲಿದ್ದಾಗ ಪತ್ರಿಕೆಯ ರೂವಾರಿಗಳಲ್ಲಿ ಒಬ್ಬರಾಗಿದ್ದ ಕೆ. ಎಫ್. ಪಾಟೀಲರೊಂದಿಗೆ ಮತಭೇದ ಉಂಟಾಗಿ ಪಾಪು ಅಲ್ಲಿಂದ ಹೊರಬಿದ್ದರು.

ಪಾಪು ಮುಂದೆ, ಸ್ನೇಹಿತರ ಸಹಾಯದಿಂದ ಅಮೇರಿಕೆಗೆ ಹೋಗಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮದಲ್ಲಿ ಎಂ.ಎಸ್.ಸಿ. ಮಾಡಿದರು ಅಲ್ಲಿ ಅವರು ಮಾನಸಿಕವಾಗಿ ಪ್ರಫುಲ್ಲರಾದರು. ಅವರ ಜ್ಞಾನದ ಕ್ಷಿತಿಜ ವಿಶಾಲವಾಯಿತು. ಅಲ್ಲಿ ಅವರು ಇತಿಹಾಸಕಾರ ಹಾಗೂ ಅದ್ವಿತೀಯ ತತ್ವಜ್ಞಾನಿ ವಿಲ್ ಡ್ಯುರಾಂಟರನ್ನು ಪರಿಚಯಿಸಿಕೊಂಡು ಅವರಿಂದ ಅಮೃತ ವಾಣಿಯನ್ನು ಕೇಳಿ ಅನುಭವ ಸಂಪತ್ತು ಹೆಚ್ಚಿಸಿಕೊಂಡರು. ಪಾಪು ಬರೆದ ಪ್ರೌಢ ಪ್ರಬಂಧವನ್ನು ಪ್ರೊ. ಬ್ರ್ಯಾಂಟ್, 'ನ್ಯೂಯಾರ್ಕ ಟೈಮ್ಸ್'ನ ರಿಚರ್ಡ್ಸ್ ಹಾಗೂ 'ಟೈಮ್' ಮ್ಯಾಗಝಿನ್ ಪ್ರತಿನಿಧಿ ಸೇರಿ ಹಿಂಜಿ ಹಿಂಜಿ ಪರಿಶೀಲಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದು ಸಣ್ಣಮಾತಲ್ಲ.

ಪಾಡಿಗಾರು ವೆಂಟಕರಮಣ ಆಚಾರ್ಯರಿಗೆ ಇಂಥ ಯಾವ ಸೌಲಭ್ಯಗಳೂ ಒದಗಿ ಬರಲಿಲ್ಲ. ಅವರ ಬುದ್ಧಿಮತ್ತೆಗೆ ಸರಿಸಾಟಿಯಾದ ಅವಕಾಶಗಳು ಅರಸಿಕೊಂಡು ಬಂದಿದ್ದರೆ ಪಾವೆಂ ತಾವು ಆದುದಕ್ಕಿಂತ ಹೆಚ್ಚಿನ ಇನ್ನಾವುದೋ ಆಗಿರುತ್ತಿದ್ದರು. ಯಾವುದು ತಮಗೆ ಸಿಗಲಿಲ್ಲ ಎಂಬುದು ಗೊತ್ತಾದಾಗ ಅವರು ಅದನ್ನು ತಮ್ಮ ಓದಿನ ಬಲದಿಂದ ಬಹಳಷ್ಟು ತುಂಬಿಕೊಂಡರು. ಬಹುಶಃ ಅವರು ತಮ್ಮನ್ನು ಸಣ್ಣವರೆಂದು ತಿಳಿದುಕೊಂಡಿದ್ದರೇನೋ! ಅವರು ತಮ್ಮ ಮಿತಿಯಲ್ಲೇ ಆಲೋಚಿಸುತ್ತಿದ್ದ ಕಾಲವೊಂದಿತ್ತು. ಅದನ್ನು ಭೇದಿಸಿ ದಾಟಿ ಹೋಗಲು ಉಡುಪಿಯ ಚಿಕ್ಕಪರಿಸರವೇ ಬಹುದೊಡ್ಡದಾಗಿ ಕಂಡಿತೇನೋ! ಅವರಿಗೆ ತಮ್ಮ ಅಧ್ಯಯನ ಮತ್ತು ಬರೆವಣಿಗೆಯಲ್ಲೇ ಸಮಾಧಾನ ಇತ್ತು. ಈ ಶಕ್ತಿ ತಮ್ಮನ್ನು ಬಹಳ ಎತ್ತರಕ್ಕೆ ಒಯ್ಯುಬಲ್ಲದೆಂಬ ಅರಿವು ಇರಲಿಲ್ಲ. ಕೊನೆಗೂ ಅದು 'ಕಸ್ತೂರಿ'ಗೆ ಮತ್ತು ಸ್ವಲ್ಪ ಮಟ್ಟಿಗೆ ಅಕೌಂಟೆನ್ಸಿಗೆ ಮಿತವಾಗಿ ಉಳಿದುಕೊಂಡದ್ದು ಅವರಿಗೆ ಮಾತ್ರವಲ್ಲ, ಇಡೀ ಕನ್ನಡಕ್ಕೆ ಒಂದು ದುರ್ದೈವದ ಸಂಗತಿ. ಅವರು ಕ್ರಮೇಣ ವಿದ್ವಾಂಸರಾಗಿ ವಿಕಸಿತರಾದರೂ ಕೂಡ ಅದಕ್ಕೆ ಔಪಚಾರಿಕವಾದ ಮನ್ನಣೆ– ಕನಿಷ್ಟ ಒಂದು ಪದವಿ – ಇರದಿದ್ದ ಕಾರಣ, ಪುಟ್ಟಪ್ಪನವರ ತೆರದಲ್ಲಿ ಎಲ್ಲ ಸ್ತರಗಳಲ್ಲಿ ಕನ್ನಡದ ಜನಮಾನಸವನ್ನು ಆಕ್ರಮಿಸಲಿಲ್ಲ. ಅವರಲ್ಲಿ ಹತ್ತು ಪಿಎಚ್.ಡಿಗಳನ್ನು ಮಾಡುವ ವಿದ್ವತ್ತು ಇದ್ದಿತು. ಆದರೆ ವಿಶ್ವವಿದ್ಯಾಲಯದ ಕದತಟ್ಟದ, ತಟ್ಟಲು ಆಗದ ಅವರಿಗೆ ವಿದ್ವಜ್ಜನರ ಪ್ರಶಂಸೆಯೊಂದೇ ಸಾಕೆನಿಸುವಂತಾಯಿತು. ಆಚಾರ್ಯರ ಆ ಸಣಕಲು ದೇಹದಲ್ಲಿ ಎಂಥ ಅದ್ಭುತ ವ್ಯಕ್ತಿತ್ವ ಅಡಗಿತ್ತು ಎಂದರೆ ಸ್ವತಃ ಅವರಿಗೇ ಅವರನ್ನು ಸಾಕ್ಷಾತ್ಕರಿಸಿಕೊಳ್ಳಲು ಆಗಲಿಲ್ಲ. ('ಕಸ್ತೂರಿ'ಯ ಕೈಂಕರ್ಯ ಕೈಕೊಂಡ ನಂತರ ಅವರದೇ ಆದ ವ್ಯಕ್ತಿತ್ವ ರೂಪುಗೊಂಡದ್ದು ಬೇರೆ ಕಥೆಯೇ! ಮುಂದೆ ಚರ್ಚಿಸೋಣ) ಮುಂದಾಳ್ತನ ಅವರ ರಕ್ತಕ್ಕೆ ಒಗ್ಗಿ ಬರಲಿಲ್ಲ.

'ಅಪ್ಪ ರಸಿಕನಾಗಿದ್ದ ಹಿನ್ನೆಲೆಯಲ್ಲಿ, ಮಗ ಕೆಟ್ಟು ಹೋಗದಿರಲಿ ಎಂದು ಹಿರಿಯರು ಮಾಡುತ್ತಾ ಬಂದ ಉಪದೇಶ, ಸ್ವಲ್ಪ ಮಟ್ಟಿಗೆ ಒಳ್ಳೆಯದನ್ನೇ ಮಾಡಿರಬಹುದು. ಆದರೆ ಅವರೇ ಬರೆದಂತೆ, ಅವು ನನಗೆ ಸರ್ವಾತ್ಮನಾ ಒಳ್ಳೆಯದೇ ಮಾಡಿವೆ ಎಂದು ಹೇಳುವುದು ಕಷ್ಟ. ಮೊದಲೇ ಅಂತರ್ಮುಖಿ ಪ್ರವೃತ್ತಿ, ಸಂಗಡ ಭಾವನಾವಶತೆಯಿಂದ ಸ್ವಲ್ಪ ಶೀತಲ (Cold) ಎನ್ನಬಹುದಾದ ಸ್ವಭಾವ ಇವುಗಳಿಗೆ ಒಂದು ರೀತಿಯ ನೆಲೆಗಟ್ಟನ್ನು ಒದಗಿಸಿ ಈ ಉಪದೇಶಗಳು ನನ್ನನ್ನು ಒಂದು ತರಹದ ಮಾನವ ವಿಮುಖಿ ಮನುಷ್ಯನಾಗಿ ಮಾಡಿದವೇನೋ ಎನ್ನುವ ಸಂಶಯ ನನಗಿದೆ. ಮನುಷ್ಯರಿಗಿಂತ ತತ್ವಗಳಿಗೆ, ವಾಸ್ತವತೆಗಿಂತ ಊಹಾತ್ಮಕ (abstract) ವಿಷಯಗಳಿಗೆ, ಕ್ರಿಯೆಗಿಂತ ಚಿಂತನೆಗೆ ಹೆಚ್ಚು ನಿಷ್ಠನಾಗಿ ನಾನು ರೂಪುಗೊಂಡೆ. ಇವೆಲ್ಲ ಕಲ್ಯಾಣಗುಣಗಳೇ ಇರಬಹುದು. ಆದರೆ ಅವುಗಳ ಹಿಂದೆ ಅನೇಕ ದೌರ್ಬಲ್ಯಗಳಿಗೆ ಅವಿತುಕೊಳ್ಳಲು ಅವಕಾಶವಿದೆ.' ಎಂದು ಆಚಾರ್ಯರೇ ಹೇಳಿದ್ದಾರೆ.

ಆಚಾರ್ಯರಂತೆ ನಿಚ್ಚಳವಾಗಿ ತಮ್ಮ ಅಂತರಂಗವನ್ನು ಬಹಿರಂಗವಾಗಿ ಬಿಚ್ಚಿಕೊಂಡ ನಿಸ್ಪೃಹ, ನಿಸ್ಸಹಾಯಕ ವ್ಯಕ್ತಿಯನ್ನು ನಾನು ಕಂಡಿಲ್ಲ. ಅವರ ಪ್ರಾಮಾಣಿಕತೆ ಒಂದು ಕ್ವಚಿತ್ತಾದ ಗುಣ. ತಮ್ಮಲ್ಲಿದ್ದ ಘನ ಅಂಶಗಳನ್ನು, ಅವು ಅವರಿಗೆ ಗೊತ್ತಿದ್ದರೂ, ಗುರುತಿಸಿಕೊಳ್ಳಲು ಸಾಧ್ಯವಾಗದಿದ್ದುದಕ್ಕೆ ಅವರ ಅಂತರ್ಮುಖತೆ ಕಾರಣ. ಬಡತನ, ತಂದೆಯನ್ನು ಬಾಲ್ಯದಲ್ಲೇ ಕಳೆದುಕೊಂಡ ವ್ಯಸನ, ತಾಯಿಯ ಅಸಹಾಯಕತೆ ಅವರ ಬಹಿರ್ಗಾಮಿ ವ್ಯಕ್ತಿತ್ವ ಹೊರಹೊಮ್ಮಲು ಬಿಡಲಿಲ್ಲ. ಓದಿನಲ್ಲಿ ಮತ್ತು ಬರಹದಲ್ಲಿ ಇಂಥ ಸ್ಥಿತಿಯಲ್ಲೂ, ಅವರ ಆಸಕ್ತಿ ಇನ್ನಿಲ್ಲದಂತೆ ಚಿಗುರಿದ್ದು ಗಮನಾರ್ಹ. ಪ್ರಾಥಮಿಕ ಶಾಲೆಯಲ್ಲಿದ್ದಾಗಲೇ ಅವರಿಗೆ ಕವಿತೆ ಬರೆಯುವ ಹವ್ಯಾಸ ಅಂಟಿಕೊಂಡಿತು. ನೆರೆಮನೆಯವರು ತರಿಸುತ್ತಿದ್ದ ಕಥೆ – ಕಾದಂಬರಿಗಳನ್ನು, ಕೈಗೆ ಸಿಕ್ಕ ಪ್ರಾಚೀನ ಕಾವ್ಯಗಳನ್ನು ಸಲೀಸಾಗಿ ಓದಿ ಅರ್ಥಮಾಡಿಕೊಳ್ಳುತ್ತಿದ್ದರು. ಭೀ. ಪ. ಕಾಳೆಯವರಿಂದ ಪ್ರಭಾವಿತರಾಗಿ ಪತ್ತೆದಾರಿ ಕಾದಂಬರಿಯ ರಚನೆಗೆ ತೊಡಗಿದರು, ಮುಗಿಸಲಿಲ್ಲ. ಹದಿನೇಳನೇ ವಯಸ್ಸಿಗಾಗಲೇ ರವೀಂದ್ರನಾಥ ಠಾಕೂರರ ಸಾಹಿತ್ಯ ಕುರಿತು ಅವರಿಗೆ ಮಾಹಿತಿ ಇತ್ತು. ಮೂಲ ಬಂಗಾಲಿಯಲ್ಲಿಯೇ ಓದಬೇಕೆಂಬ ಹಂಬಲ. ಆಕಸ್ಮಿಕವಾಗಿ ಬೀದಿಯಲ್ಲಿ ಅಲೆಟ್ರಿಸ್ ಕಾಡಿರ್ಯಲ್ ರಿಯೊ ಎಂಬ ಔಷಧ ಕಂಪನಿಯ ಬಹುಭಾಷಾ ಕ್ಯಾಟಲಾಗ್ ಅವರಿಗೆ ಸಿಕ್ಕಿತು. ಇದು ಅವರ ಓದಿನ ಗತಿಯನ್ನು ಮತ್ತು ಸತ್ವವನ್ನು ಹೆಚ್ಚಿಸಿತು. ಕ್ಯಾಟಲಾಗ್‌ನಲ್ಲಿದ್ದ ದೇವನಾಗರಿ ಮತ್ತು ಬಂಗಾಲಿ ಅಕ್ಷರಗಳ ಹೋಲಿಕೆಯಿಂದ ಬಂಗಾಲಿ ವರ್ಣಮಾಲೆಯನ್ನು ತಕ್ಕಷ್ಟು ಅಧ್ಯಯನ ಮಾಡಲು ಅವರಿಗೆ ಸಾಧ್ಯವಾಯಿತು. ಕಲಕತ್ತಾದಿಂದ ಬಂಗಾಲಿ ಬಾಲಬೋಧೆಯನ್ನು ತರಿಸಿಕೊಂಡು ಲಿಪಿ ಮತ್ತು ಆ ಭಾಷೆಯ ಮೂಲತತ್ವಗಳನ್ನು ಅರಿತುಕೊಂಡರು. ಮೆಟ್ರಿಕ್ ತರಗತಿಗೆ ಬಂದ ಮೇಲೆ 'ಗೀತಾಂಜಲಿ'ಯನ್ನು ತರಿಸಿಕೊಂಡು ಠಾಕೂರರು ರೂಪಿಸಿಕೊಂಡ ಛಂದಸ್ಸುಗಳಲ್ಲಿ ಬರೆಯುವ ಪ್ರಯತ್ನ ಮಾಡಿದರು. ಇದಕ್ಕಿಂತ ದೊಡ್ಡ ಅಕ್ಷರ ಸಾಹಸ ಬೇಕೆ ? ಅವರು

ಶಾಲಾ ಗುರುಗಳಿಂದ ಪರೀಕ್ಷೆಗೆ ಬೇಕಾದುದನ್ನು ಮಾತ್ರ ಕಲಿತರು. ತಮಗೆ ಬೇಕಾದುದನ್ನು ತಾವೇ ತಾವಾಗಿ ಕಲಿತುಕೊಂಡರು.

ಆಚಾರ್ಯರು ಪಣಿಯಾಡಿಯವರ ಮಣಿಪಾಲ ಪ್ರೆಸ್ಸಿನ ಮ್ಯಾನೇಜರ್ ಎಂದು ನೇಮಕಗೊಂಡಾಗ ಅವರು ತಮ್ಮ ಕಣ್ಣಗಲಿಸಿದ್ದರು. ಪಣಿಯಾಡಿಯವರು ತಮ್ಮ ಪ್ರೆಸ್ಸಿನಲ್ಲಿ ತಮ್ಮದೇ ಆದಾ ಜನಪ್ರಿಯ ಪತ್ರಿಕೆ 'ಅಂತರಂಗ'ವನ್ನು ಮುದ್ರಿಸಿ ಪ್ರಕಟಿಸುತ್ತಿದ್ದರು. ಆಚಾರ್ಯರು ಅದರ ಸಂಪಾದಕೀಯ ಮಂಡಲಿಯಲ್ಲಿದ್ದು ಜನಪ್ರಿಯ ಲೇಖನ ಬರವಣಿಗೆಯಲ್ಲಿ ದೀಕ್ಷೆ ಪಡೆದರು. ಅವರು ಪತ್ರಿಕೋದ್ಯಮಿಯಾಗಿ ರೂಪುಗೊಂಡಿದ್ದೂ 'ಅಂತರಂಗ'ದಿಂದಲೇ. ಪುಟ್ಟಪ್ಪನವರೂ ಈ ಪತ್ರಿಕೆಗೆ ಬರೆಯುತ್ತಿದ್ದರೆಂದು ಓದಿದ್ದೇನೆ. ಇಷ್ಟರಲ್ಲಿ ಪಾವೆಂ ಕವಿತೆಗಳು ಮತ್ತು ಒಂದೆರಡು ಕಥೆಗಳು 'ಜಯಕರ್ನಾಟಕ'ದಲ್ಲಿ ಪ್ರಕಟವಾಗಿದ್ದವು. 'ರಾಷ್ಟ್ರಬಂಧು'ವಿನಲ್ಲೂ ಅವರ ಕವಿತೆಗಳು ಕಾಣಿಸಿಕೊಂಡಿದ್ದವು. ಈ ವೇಳೆಗಾಗಲೆ ಅವರು ಉಡುಪಿಯಲ್ಲಿ ಕವಿಯಾಗಿ ಹೆಸರು ಮಾಡಿದ್ದರು. ಆಚಾರ್ಯರು ತಮ್ಮ ಮಾತೃಭಾಷೆ ತುಳುವಿನಲ್ಲಿ ಕವಿತೆಗಳನ್ನು ಬರೆದರು. ಅವುಗಳು ನವಯುಗದ ತುಳು ಪುರವಣಿಯಲ್ಲಿ ಬೆಳಕು ಕಂಡವು. ಹೊನ್ನಯ್ಯ ಶೆಟ್ಟರು ಯೋಜಿಸಿದ "ಮಧುವನ" ಎಂಬ ಪ್ರಾತಿನಿಧಿಕ ಕನ್ನಡ ಕಥಾಸಂಗ್ರಹಕ್ಕೆ ಅವರು ಸಹಸಂಪಾದಕರಾಗಿದ್ದರು. ಆ ವೇಳೆಗಾಗಲೇ ಬನ್ನಂಜೆ ರಾಮಾಚಾರ್ಯರು, ಜಯಕರ್ನಾಟಕ' ಬಳಗದವರಾಗಿದ್ದ ಪ್ರಹ್ಲಾದ ನರೇಗಲ್ಲ, ಶೇಷಗಿರಿ ಕುಲಕರ್ಣಿ, ದ.ಬಾ. ಕುಲಕರ್ಣಿ ಆಚಾರ್ಯರನ್ನು ಹುಡುಕಿಕೊಂಡು ಉಡುಪಿಗೆ ಬಂದು ಅವರ ಗೆಳೆಯರಾದರು. ಹುಬ್ಬಳ್ಳಿಯಲ್ಲಿ ಸ್ನೇಹ ಬಂಧನ ಇನ್ನೂ ಬಲಗೊಂಡಿತು. ಹಾಗೆಯೇ ಬೇಂದ್ರೆ ಜಡಭರತ, ಗೋಕಾಕ ಮೊದಲಾದವರ ಹಿತಕರ ಸಹವಾಸ ಅವರಿಗೆ ಲಭಿಸಿತು.

ಮತ್ತೆ ಪಾವು ಅವರತ್ತ ಹೊರಳೋಣ. ಅವರು ಒಟ್ಟು ೩೪ ಕೃತಿಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಕನ್ನಡವನ್ನು ಭಾರತವನ್ನು ಹಾಗೂ ಕರ್ನಾಟಕವನ್ನು ಕಟ್ಟುವ ಕೃತಿಗಳೇ ಹೆಚ್ಚು. ನನ್ನದು ಈ ಕನ್ನಡ ನಾಡು, ನನ್ನದು ಈ ಭರತಭೂಮಿ, ಭಾರತದ ಬೆಳಕು, ಕರ್ನಾಟಕದ ಕಥೆ, ಉಸಿರಾಗಲಿ ಕನ್ನಡ, ಕನ್ನಡ ಕಾವಲು, ಕನ್ನಡದ ಕಂಪು, ಚೆಲುವ ಕನ್ನಡ ನಾಡು, ಗೋಕಾಕ ವರದಿ, ಸುವರ್ಣ ಕರ್ನಾಟಕ ಇವು ಅವರ, ಕರ್ನಾಟಕದ ಬಗೆಗಿನ ಪ್ರಾಮಾಣಿಕ ಚಿಂತನೆಯ ಆಗರಗಳು. ಪುಟ್ಟಪ್ಪನವರಂತೆ ಕನ್ನಡ ಹಾಗೂ ಕರ್ನಾಟಕದ ಬಗೆಗೆ ಹೃದಯದಾಳದಿಂದ ಚಿಂತನೆ ಮಾಡಿದ, ಅಭಿಮಾನ ಪೂರ್ವಕ ಬರೆದು ದಾಖಲಿಸಿದ ಇನ್ನೊಬ್ಬ ಸಾಹಿತಿ ಹಾಗೂ ಪತ್ರಿಕೋದ್ಯಮಿ ಕಳೆದ ಅರ್ಧ ಶತಮಾನದಲ್ಲಿ ಯಾರೂ ಸಿಕ್ಕಲಾರರು. ಅವರು ಬದುಕನ್ನು ಒಂದು ವರ ಎಂಬಂತೆ ಪ್ರೀತಿಸಿದವರು. ದುಃಖ, ಕಷ್ಟ ಕೋಟಲೆಗಳ ನಡುವೆಯೂ ಜೀವನೋತ್ಸಾಹವನ್ನು ಅಚ್ಚಳಿಯದೇ ಉಳಿಸಿಕೊಂಡವರು. ಅವರ ಕೃತಿಗಳಲ್ಲೂ ಕೂಡ ಅವರು ಬದುಕಿನ ಬಗೆಗೆ ಆಶಾವಾದವನ್ನೇ ಪ್ರತಿಪಾದಿಸುತ್ತ ಬಂದಿದ್ದಾರೆ. 'ಸೋತೆ ಎನ್ನಬೇಡ, ಸೋಲಿನಲ್ಲೇ ಗೆಲುವು ಇದೆ' ಎನ್ನುವ ಅವರ ಪುಸ್ತಕ ಅವರ

ಆಶಾವಾದದ ಪ್ರತಿಬಿಂಬ. ಅವರು ಕಥೆಗಾರರೂ ಹೌದು. ಬಿಡಿ ಬರಹಗಳಲ್ಲಿ ಎದ್ದುಕಾಣುವಂಥವು ವ್ಯಕ್ತಿಚಿತ್ರಗಳು. ಅವರ ಸಾಹಿತ್ಯ ಜನಸಾಮಾನ್ಯರ ತಿಳಿವಳಿಕೆಗೆ ನಿಲುಕುವಂಥದು.

ಆಚಾರ್ಯರ ಆರಂಭದ ಸಾಹಿತ್ಯ ಕವನ ರಚನೆಗೆ, ಹಳಗನ್ನಡದ ಅಧ್ಯಯನಕ್ಕೆ ಆದ್ಯತೆ ಪಡೆದಿತ್ತು. ನಂತರ ಕೆಲವು ಕಥೆಗಳು ಬಂದವು 'ಕಸ್ತೂರಿ'ಯಲ್ಲಿ ಪ್ರಕಟವಾದ ಬಿಡಿ ಬರಹಗಳು ಆರು ನೂರು. 'ಪದಾರ್ಥ ಚಿಂತಾಮಣಿ' ಮಾಲಿಕೆ ಅವರ ಮೌಲಿಕ ಕಾಣಿಕೆ. ಕಸ್ತೂರಿಯಲ್ಲಿ ಮೊದಲು ಆರಂಭವಾದದ್ದು ನಿಮ್ಮ ಶಬ್ದ ಭಂಡಾರ ಬೆಳೆಯಲಿ ಎನ್ನುವ ಅಂಕಣ. ಪದ ಅರ್ಥ ಚಿಂತಾಮಣಿಯಲ್ಲಿ ಶಬ್ದದ ಪೂರ್ವಾಪರ, ಅದರ ಜ್ಞಾತಿಪದಗಳು, ಅದರಿಂದ ತಿಳಿದು ಬರುವ ಸಾಂಸ್ಕೃತಿಕ ಅಂಶಗಳು ಭಾಷಾಭ್ಯಾಸಿಗಳಿಗೆ ಒಂದು ವಿಸ್ಮಯಲೋಕವನ್ನೇ ತೆರೆದು ತೋರಿಸುತ್ತದೆ. ಇದರಲ್ಲಿ ಶಬ್ದಗಳ ಗಂಟನ್ನು ಬಿಚ್ಚುವುದಲ್ಲದೆ ಅನ್ಯಭಾಷಾ ಶಬ್ದಗಳ ನಂಟನ್ನು ಪಾವೆಂ ಎತ್ತಿತೋರಿಸಿದ್ದಾರೆ. ದಿವಂಗತ ಭಾಷಾ ಪಂಡಿತ ಶ್ರೀನಿವಾಸ ಹಾವನೂರರ ಪ್ರಕಾರ "ಈ ವೈದುಷ್ಯದ ಫಲವಾಗಿ ಪಾವೆಂ. ಆಚಾರ್ಯರಿಗೆ ಕಿಟೆಲ್, ಡಿ. ಎಲ್. ನರಸಿಂಹಾಚಾರ್ಯ ಹಾಗೂ ಜಿ. ವೆಂಕಟಸುಬ್ಬಯ್ಯನವರ ಸಾಲಿನಲ್ಲಿ ಸ್ಥಾನ ಸಿಗಬೇಕು. ಆಚಾರ್ಯರ ಕೃತಿ ರಚನೆಯ ಭೂಮಿಕೆಯನ್ನು ಡಾ. ಹಾವನೂರ ಐದು ಮುಖಗಳಲ್ಲಿ ಗುರುತಿಸಿದ್ದಾರೆ. ಕಲ್ಪಕತೆ, ಚಿಂತನ ಪರತೆ, ಶಬ್ದಾಸಕ್ತಿ, ಪತ್ರಿಕಾಧರ್ಮ ಹಾಗೂ ಅಣಕ ಪ್ರವೃತ್ತಿ

ಪಾವೆಂ ವಿಡಂಬನ ಶಕ್ತಿ ಅವರು, ಮಂಕುತಿಮ್ಮನ ಕಗ್ಗದ ಮಾದರಿಯಲ್ಲಿ ರಚಿಸಿದ ಪೆಂಗೋಪದೇಶದಲ್ಲಿ ಢಾಳವಾಗಿ ಒಡಮೂಡಿದೆ. ಉದಾಹರಣೆಗೆ ಈ ಒಂದು ಪಂದ್ಯ ಸಾಕು.

ಬದುಕು ಖಟರಾಬಸ್ಸು; ವಿಧಿಯದರ ಡ್ರೈವರನು
ಕುಡಿದು ಹೊಡೆಯುತ್ತಾನೆ ಎರಡು ಕಾಣುತ್ತ
ಗಟರವೊ ಮರವೊ ಸಂಕವೊ ಟ್ರಕ್ಕೊ ಗೋಡೆಯೊ
ಮಡಿವವನಿಗಾವುದೇನೋ ಎಲವೊ ಪೆಂಗೇ

ಆಚಾರ್ಯರ ವಿಶಿಷ್ಟಕೊಡುಗೆ ಎಂದರೆ ಸಂಸ್ಕೃತ ಸಾಹಿತ್ಯ, ಹಳೆಗನ್ನಡ ಮತ್ತು ಭಾಷಾ ಸಂಬಂಧಿತ ಲೇಖನಗಳು ಮತ್ತು ಅವುಗಳಲ್ಲಿರುವ ಮೌಲಿಕ ಅಂಶಗಳು. ಅದರಂತೆ ಸಂಸ್ಕೃತ ಕಾವ್ಯಗಳಲ್ಲಿಯ ಪ್ರಣಯ ವಿವೇಚನೆ ಗಮನಾರ್ಹ ಎಂದು ಡಾ. ಹಾವನೂರ ಬರೆದಿದ್ದಾರೆ. ಶಂ. ಭಾ. ಜೋಶಿ ಮತ್ತು ಶಿವರಾಮ ಕಾರಂತ್ ವ್ಯಕ್ತಿ ಚಿತ್ರ ಮತ್ತು ಅವರ ಕೃತಿಗಳ ಬಗ್ಗೆ ಬರೆದ ಪ್ರಬಂಧಗಳು ಆಚಾರ್ಯರ ಆಳವಾದ ಅಧ್ಯಯನಕ್ಕೆ ಕನ್ನಡಿ ಹಿಡಿದಿವೆ. ಪಾಪಪ್ರಜ್ಞೆ ಆಜ್ಞಾಪಾಲನೆ, ಆತ್ಮಸಾಕ್ಷಿ, ಜೀವನಕ್ಕೆ ಅರ್ಥವುಂಟೆ ? ಮೊದಲಾದವುಗಳಲ್ಲಿ ಮೌಲಿಕ ಚಿಂತನೆ ಇದೆ. ಆಚಾರ್ಯರ ೧೬ ಕೃತಿಗಳಲ್ಲಿ 'ಪದಾರ್ಥ ಚಿಂತಾಮಣಿ'ಯಂಥ ಅನರ್ಘ್ಯ ರತ್ನವಲ್ಲದೆ ಲಲಿತಪ್ರಬಂಧಗಳು,

ನಗೆಬರಹಗಳು, ವಿಜ್ಞಾನ ವಿಸ್ಮಯ, ಜೀವನ ಮಂಥನ, ಚಿತ್ರವಿಚಿತ್ರ ಈ ಜಗತ್ತು, ಇವರೇ ಲಾಂಗೂಲಾಚಾರ್ಯ, ಹೌಸಿಂಗ ಕಾಲನಿ (ಕವನ ಸಂಗ್ರಹ) ಹೊಸಗನ್ನಡದ ಹಿರಿಯರು, ಬ್ರಾಹ್ಮಣರೇನು ಮಾಡಬೇಕು, ಖ್ಯಾತವೆತ್ತ ಭಾರತೀಯರು, ಓದುಗರೊಡನೆ ಹರಟೆಗಳು ಮೊದಲಾದವುಗಳಿವೆ.

ಅವರ ವೈವಿಧ್ಯಪೂರ್ಣ ಆಸಕ್ತಿ ಜೀವಂತವಾಗಿತ್ತು. ಅವರ 'ಬಯ್ಯಮಲ್ಲಿಗೆ' ತುಳು ಗೀತಾಂಜಲಿ ಮಾತೃಭಾಷೆಗೆ ಸಲ್ಲಿಸಿದ ಕಾಣಿಕೆಯಾಗಿದೆ. ಆಚಾರ್ಯರ ೧೫ ಸಂಪುಟಗಳ ಪ್ರಕಟನೆಯ ಯೋಜನೆಗೆ ನೈತಿಕ ಆಸರೆ ಒದಗಿಸಿದವರಲ್ಲಿ ಪಾಟೀಲ ಪುಟ್ಟಪ್ಪನವರೂ ಒಬ್ಬರು. ಇಬ್ಬರಿಗೂ ಸಾಹಿತ್ಯ ಮೂಲ ನೆಲೆಯಾಗಿದ್ದರಿಂದ ಅವರ ನಡುವೆ ಅನೇಕ ಹಿತಕರವಾದ ಸಾಮ್ಯಗಳನ್ನು ಗುರುತಿಸಬಹುದು. ಪಾಪು ಅನೇಕ ಹೋರಾಟಗಳ ನಡುವೆಯೂ ಸಾಹಿತ್ಯ ಸೃಷ್ಟಿಗೆ ಸಮಯ ಕಂಡುಕೊಂಡರು. ಅವರೊಂದು ಶಕ್ತಿಪುಂಜ. ನಾಡು ನುಡಿ, ರಾಜಕೀಯ ಹೋರಾಟ, ಶಿಕ್ಷಣ ಹೀಗೆ ಹಲವು ಕಡೆಗೆ ಅವರ ಶಕ್ತಿ ಹರಿದುಹೋದರೂ ಅವರಲ್ಲಿ ಮಡುಗಟ್ಟಿದ ಸೃಜನಶೀಲತೆ ತನ್ನ ಪಾಲನ್ನೂ ಕೇಳಿತು. ಆಚಾರ್ಯರ ಸಾಹಿತ್ಯಶಕ್ತಿ ಸ್ಫುರಣಗೊಳ್ಳುತ್ತ ಬಂದ ಹಾಗೆ ಅವರ ಪ್ರತಿಭೆ ಅರಳತೊಡಗಿತ್ತು. ಅಂತರ್ಮುಖಿ, ಅಂತೆಯೇ ಆಲೋಚನೆ ಮತ್ತು ಚಿಂತನೆಗೆ ಹೆಚ್ಚು ಒತ್ತು ಕೊಟ್ಟರು.

■■

## ೪. ಪತ್ರಕರ್ತರಾಗಿ (i)

೧೯೬೦ ಮತ್ತು ತದನಂತರ ಪ್ರವರ್ಧಮಾನಕ್ಕೆ ಬಂದ ಪತ್ರಕರ್ತರೆಲ್ಲ 'ಪ್ರಪಂಚ'ದ ಪರಿಮಳ ಮತ್ತು 'ಕಸ್ತೂರಿ'ಯ ಕಂಪನ್ನು ಸವಿದವರೇ ! ಈ ಎರಡೂ ಅದ್ವಿತೀಯ ಪ್ರಕಟಣೆಗಳು ಆಗ ಪತ್ರಕರ್ತರಿಗೆ ಪಠ್ಯಪುಸ್ತಕಗಳೇ ಆಗಿದ್ದವು. ಆದುದರಿಂದ ಪಾಪು ಮತ್ತು ಪಾವೆಂ ಕನ್ನಡ ಪ್ರತಿಕೋದ್ಯಮದಲ್ಲಿ ಗುರುಸ್ಥಾನವನ್ನು ಅಲಂಕರಿಸಿದರು. ಪತ್ರಕರ್ತರಲ್ಲಿ ಅನೇಕರು ಅವರನ್ನು ಓದಿ ಸ್ಫೂರ್ತಿ ಪಡೆಯುತ್ತಿದ್ದರೆ ಇನ್ನು ಕೆಲವರು ಸುದ್ಯೆವಿಗಳು ಅವರ ನೇರ ಕಣ್ಣರಿಕೆಯಲ್ಲಿ ಮತ್ತು ಒಡನಾಟದಲ್ಲಿ ಇದ್ದು ವೃತ್ತಿಯ ಉತ್ತಮಾಂಶಗಳನ್ನು ಕರಗತ ಮಾಡಿಕೊಂಡರು. ಪ್ರಪಂಚ ಬಳಗದಲ್ಲಿ ಪ್ರಮುಖರಾದವರೆಂದರೆ ಸತ್ಯನಾರಾಯಣ ಹೆಗಡೆ, ಬಾಬು ಬೆಂಡಿಗೇರಿ (ಇವರು ನಂತರ ಕನ್ನಡ ಪ್ರಾಧ್ಯಾಪಕರಾಗಿ ಹೋದರು) ಎಸ್. ಜಿ. ಮೈಸೂರುಮಠ, ವಡ್ಡರಸೆ ರಘುರಾಮಶೆಟ್ಟಿ, ಆರ್. ಜಿ. ಚಕ್ರಮರ್ತಿ, ಕೋ. ಮ. ಕಾರಂತ (ಸಿಂಡಿಕೇಟ್ ಬ್ಯಾಂಕಿನ ಸಾರ್ವಜನಿಕ ಸಂಪರ್ಕ ಅಧಿಕಾರಿಯಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದಂತೆಯೇ ಕ್ಯಾನ್ಸರ್ ರೋಗಕ್ಕೆ ತುತ್ತಾದರು. ಈತ ಪ್ರಚಂಡ ಪ್ರತಿಭಾವಂತನಾಗಿದ್ದ) ಐ. ಜಿ. ಸನದಿ, ಸಿದ್ದರಾಮೇಶ ಮುಧೋಳ, ಜಿ. ಎಸ್. ಉಮದಿ, ಐ.ಕೆ. ಜಾಗೀರದಾರ ಮತ್ತು ನಾನು, ಈ ಕೃತಿಯ ಲೇಖಕ.

'ಪ್ರಪಂಚ' ಹಾಗೂ 'ವಿಶ್ವವಾಣಿ' ದಿನಪತ್ರಿಕೆಯಲ್ಲಿ ಅವರ ಶಿಷ್ಯತ್ವ ಸ್ವೀಕರಿಸಿದವರಲ್ಲಿ ಕೆಲವರು ಕರ್ನಾಟಕದ ಮಹತ್ವದ ಪತ್ರಿಕೆಗಳಲ್ಲಿ ಜವಾಬ್ದಾರಿ ಸ್ಥಾನ

ನಿರ್ವಹಿಸಿದ್ದಾರೆ. ಕೆಲವರು ಬೇರೆ ಬೇರೆ ಪತ್ರಿಕೆಗಳ ಸಂಪಾದಕರೂ ಆಗಿದ್ದಾರೆ. ನನಗೆ 'ಟಿಯೆಸ್ಸಾರ್' ಪ್ರಶಸ್ತಿ ಕೊಡಮಾಡುವ ಪ್ರಕಟನೆ ಬಂದಾಗ ಅವರ ಮನೆಗೆ ಹೋಗಿ ಅವರ ಆಶೀರ್ವಾದ ಪಡೆದಿದೆ. ಅವರು ನನಗೆ ಶಾಲು ಹೊದಿಸಿ. ಗಂಧದ ಮಾಲೆ ಹಾಕಿ ಪೇಢೇಕೊಟ್ಟು ತಮ್ಮ ಸಂತೋಷ ವ್ಯಕ್ತಮಾಡಿದರು. ಪುಟ್ಟಪ್ಪನವರ ಹೆಮ್ಮೆ ಅವರ ಮುಖದಲ್ಲಿ ರಾರಾಜಿಸಿತ್ತು. 'ಪ್ರಪಂಚ'ಕ್ಕೆ ಆರು ಟಿಯೆಸ್ಸಾರ್ ಪ್ರಶಸ್ತಿಗಳು, ಬೇರೆ ಯಾವ ಪತ್ರಿಕೆಗೆ ಈ ಗೌರವವಿದೆ' ಎಂದು ಉದ್ಗಾರ ತೆಗೆದರು. ಮೊದಲನೇ ಟಿಯೆಸ್ಸಾರ್ ಪ್ರಶಸ್ತಿ ವಿಜೇತರು ಪುಟ್ಟಪ್ಪನವರೇ. ನಂತರ ಈ ಗೌರವಕ್ಕೆ ಪಾತ್ರರಾದ ಪ್ರಪಂಚಿಕರೆಂದರೆ ಮೈಸೂರುಮಠ, ಪ. ಲೊ. ಬಂಕಾಪುರ, ಷಡಕ್ಷರಪ್ಪ, ಶಿವಾನಂದ ಜೋಶಿ ಹಾಗೂ ರಾಜಶೇಖರ ಕೋಟಿ. ಜಾಗೀರದಾರ ಹಾಗೂ ರಘುರಾಮಶೆಟ್ಟಿ ರಾಜ್ಯೋತ್ಸವ ಪ್ರಶಸ್ತಿ ವಿಜೇತರು.

(ನಾನು 'ಸಂಯುಕ್ತಕರ್ನಾಟಕ'ಕ್ಕೆ ಬಹು ವಿಧವಾದ ಮೌಲಿಕ ಸೇವೆ ಸಲ್ಲಿಸಿದ್ದರೂ, ಒಬ್ಬಿಬ್ಬರು ವ್ಯಕ್ತಿಗಳನ್ನು ಬಿಟ್ಟರೆ, ಪತ್ರಿಕೆ ನನ್ನನ್ನು ಕೊನೆಗೆ ದೂರವಾಣಿಯಲ್ಲಾದರೂ ಅಭಿನಂದನೆಯ ಎರಡೂ ಶಬ್ದಗಳನ್ನು ವ್ಯಯಿಸಲಿಲ್ಲ. ಸಂಸದ ಪ್ರಹ್ಲಾದ ಜೋಶಿ ಮನೆಗೆ ಬಂದು ಸತ್ಕರಿಸಿದರು. ಇನ್ನೊಬ್ಬ ಲೋಕ ಶಿಕ್ಷಣ ಟ್ರಸ್ಟಿ ಕೆ. ಬಿ. ದೇಸಾಯಿ ಅವರು ಅಭಿನಂದನ ಪರ ಪತ್ರ ಬರೆದು ತಮ್ಮ ಸಂತೋಷ ಸೂಚಿಸಿದರು. ಅವರೊಡನೆ ನನಗೆ ವೈಯಕ್ತಿಕ ಸಂಬಂಧ ಇರುವುದು ಇಲ್ಲಿ ಗಮನಾರ್ಹ)

ಪಾಪು ಅವರ ಬರವಣಿಗೆಯಿಂದ ಪ್ರಭಾವಿತರಾದವರೆಂದರೆ ದಿ. ಶಿವರಾಮ ಕಾರಂತ, ಡಿವಿಜಿ, ಮೊಹರೆ ಹಣ್ಮಂತರಾವ, ನಾಡಿಗ ಕೃಷ್ಣಮೂರ್ತಿ, ಎಚ್ಚೆಸ್ಕೆ, ಸುರೇಂದ್ರ ದಾನಿ, ಸಂತೋಷಕುಮಾರ ಗುಳ್ವಾಡಿ, ಖಾದ್ರಿ ಶ್ಯಾಮಣ್ಣ, ದಿ.ಟಿ. ಎಸ್. ರಾಮಚಂದ್ರರಾವ್, ಅಮ್ಮೆಂಬಳ ಆನಂದ, ಕೆ. ಶ್ರೀಧರ ಆಚಾರ, ಗೋಪಾಲ ವಾಜಪೇಯಿ, ನಾರಾಯಣ ಫಳಗಿ ಹಾಗೂ ಇನ್ನೂ ಅನೇಕರು ಪಾಪು, ಪಾವೆಂ ಅವರನ್ನು ಮುಕ್ತ ಮನಸ್ಸಿನಿಂದ ಮೆಚ್ಚಿಕೊಂಡಿದ್ದಾರೆಂಬುದನ್ನು ಇಲ್ಲಿ ಇನ್ನೊಮ್ಮೆ ಉಲ್ಲೇಖಿಸುತ್ತೇನೆ.

ಪ್ರಪಂಚ ಭೋರ್ಗರೆಯುತ್ತ ಹರಿಯುವ ಪ್ರಚಂಡ ಪ್ರವಾಹ ಆಗಿದ್ದುದರಿಂದ ಪುಟ್ಟಪ್ಪನರ ಸಾರ್ವಜನಿಕ ಸಂಪರ್ಕ ಬಹು ವ್ಯಾಪಕವಾಗಿ ಹೆಣೆದುಕೊಂಡಿತ್ತು. ಅವರಿಗೆ ವ್ಯಕ್ತಿ ಸಂಗತಿಗಳ ಜ್ಞಾನಮಾತ್ರವಲ್ಲದೆ ತಾವು ಬರೆದು ಮೆಚ್ಚುಗೆ ಸೂಚಿಸುವ ಹಾಗೂ ವಾಸ್ತವಿಕ ನೆಲೆಯಲ್ಲಿ ಝಾಡಿಸುವ, ಬೈಯ್ದು ಬುದ್ಧಿ ಹೇಳುವ ಸಲಿಗೆ ಮತ್ತು ಅಧಿಕಾರವನ್ನು ಪಡೆದುಕೊಂಡಿದ್ದರು. ಜತ್ತಿ ಮತ್ತು ದಿವಾಕರ ಅಂಥ ಕೆಲವರು ಮಹನೀಯರನ್ನು ಬಿಟ್ಟರೆ ಅವರಿಂದ ಟೀಕೆಗೊಳಗಾದವರು ಅದರ ಪರಮ ಸ್ನೇಹಿತರಾದರು. ಅವರ ಸಂಪರ್ಕದಿಂದಾಗಿ ಪಾಪು ನೆನಪಿನಲ್ಲಿ ಸಣ್ಣವರ ದೊಡ್ಡ ಕಥೆಗಳು. ದೊಡ್ಡವರ ಸಣ್ಣಕಥೆಗಳು ಹೇರಳವಾಗಿ ಬೀಡುಬಿಟ್ಟಿವೆ. ಅವರು ತಮ್ಮ

ಆತ್ಮಚರಿತ್ರೆಯಲ್ಲಿ ಒಂದೊಂದಾಗಿ ಬಿಚ್ಚಿಡುತ್ತಿದ್ದಾರೆ. ಅವರ ಆರಾಧ್ಯ ದೈವಗಳೆಂದರೆ ಧಾರವಾಡ ಮುರುಘಾಮಠದ ಮೃತ್ಯುಂಜಯಪ್ಪಗಳು, ಡಿ. ಸಿ. ಪಾವಟೆ, ಟಿ. ಎ. ಪೈ. ರಾಮಕೃಷ್ಣ ಹೆಗಡೆ, ನಿಜಲಿಂಗಪ್ಪ, ಮೋಹರೆ ಮೊದಲಾದವರು. ಕಾಲಕ್ರಮೇಣ ಅನೇಕರ ಬಗೆಗೆ ಅವರ ಅಭಿಪ್ರಾಯಗಳು ಬದಲಾಗಿರಬಹುದು. ಆದರೆ ಈ ಮಹನೀಯರು ಇಂದಿಗೂ ಅವರ ಮನದಲ್ಲಿ ಅಚ್ಚೊತ್ತಿದಂತೆ ನೆಲೆಗೊಂಡಿದ್ದಾರೆ. ಕರ್ನಾಟಕದ ಬಗೆಗೆ ಅವರಿಗೆ ಎಲ್ಲವೂ ಗೊತ್ತು. ಎಲ್ಲರೂ ಗೊತ್ತು. ಕರ್ನಾಟಕ ಸೀಮೆಯನ್ನು, ಜನರನ್ನು, ರಾಜಕಾರಣಿಗಳನ್ನು ಆಡಳಿತಗಾರರನ್ನು, ರಾಜಕೀಯ–ಸಾರ್ವಜನಿಕ, ಆರ್ಥಿಕ ಸ್ಥಿತಿಗತಿಗಳನ್ನು, ಅದರ ಆವಶ್ಯಕತೆಗಳನ್ನು ಅಲ್ಲದೆ ವಿವಾದಗಳನ್ನು ಬಲ್ಲವರೂ ಕಡಿಮೆ, ಬರೆದವರು ಇನ್ನೂ ಕಡಿಮೆ. ಕರ್ನಾಟಕವನ್ನು ಕುರಿತು ಯಾವ ಪ್ರಶ್ನೆ ಕೇಳಿದರೂ ಉತ್ತರ ಅವರಲ್ಲಿ ಸಿದ್ಧವಾಗಿರುತ್ತದೆ. ಅವರು ಕರ್ನಾಟಕವನ್ನು ಅವಚಿಕೊಂಡೇ ಅಡ್ಡಾಡುತ್ತಾರೆ. ಆದುದರಿಂದ ದೂರದವರು, ಅಪರಿಚಿತರು. ಅವರನ್ನು ಹುಡುಕಿಕೊಂಡು ಬಂದು ಭೆಟ್ಟಿ ಆಗುತ್ತಾರೆ. ಬೆಂಗಳೂರಿನಲ್ಲಿ ಉತ್ತರ ಕರ್ನಾಟಕದ, ಮುಖ್ಯವಾಗಿ ಹುಬ್ಬಳ್ಳಿಯ ಪತ್ರಕರ್ತರನ್ನು ಕಂಡರೆ, ಅಲ್ಲಿಯ ವೃತ್ತಿ ಬಾಂಧವರು ಮೂಗು ಮುರಿಯುತ್ತಿದ್ದ ಕಾಲವೂ ಒಂದಿತ್ತು; ಪುಟ್ಟಪ್ಪನವರನ್ನು ಕಂಡರೆ ಅವರು ಮುದುಡಿಕೊಂಡು ನಿಲ್ಲುತ್ತಿದ್ದರು. ದಿಲ್ಲಿಯಲ್ಲೂ ಅವರ ಸಂಗಾತಿಗಳು, ಸ್ನೇಹಿತರು, ಅಭಿಮಾನಿಗಳು ರಾಜಕೀಯದಲ್ಲಿ ದೊಡ್ಡವರಾದವರು ಇದ್ದಾರೆ. ಹನ್ನೆರಡು ವರ್ಷ ರಾಜ್ಯಸಭೆಯ ಸದಸ್ಯರಾಗಿದ್ದ ಪ್ರಯುಕ್ತ ಭಾರತದ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ರಾಜಕಾರಣದ ಗತ್ತುಗಳನ್ನು ಕರಗತ ಮಾಡಿಕೊಂಡಿದ್ದಾರೆ. ಅವರನ್ನು ಮನಮೋಹಸಿಂಗರು ಬಲ್ಲರು, ಸೋನಿಯಾ ಗಾಂಧಿಯವರೂ ಬಲ್ಲರು. ಪತ್ರಿಕೋದ್ಯಮವು ಅವರಿಗೆ ಸರ್ವವ್ಯಾಪಿತ್ವವನ್ನು ಕಲ್ಪಿಸಿಕೊಟ್ಟಿದೆ. ಕನ್ನಡ ಪತ್ರಿಕೋದ್ಯಮಕ್ಕೆ ಸರ್ವತ್ರ ಸಮ್ಮಾನ ತಂದುಕೊಟ್ಟಿದೆ.

ಆಚಾರ್ಯರದು, ಪುಟ್ಟಪ್ಪನವರಿಗಿಂತ ತೀರ ಭಿನ್ನವಾದ ಪ್ರಕೃತಿ. ಅವರು ಅಕ್ಷರದಾಸೋಹಿಗಳೇ ಹೊರತು ಸ್ವಭಾವದಿಂದ ಸಾಹಸಿ ಅಲ್ಲ. ಪುಟ್ಟಪ್ಪನವರು ಮಾಡಿದ ಸಾಹಸಗಳು ಅವರಿಗೆ ಅತೀತವಾಗಿದ್ದವು. ತಮ್ಮ ಬದುಕಿನ ದಾರಿ ಹೀಗೆಯೇ ಇರಬೇಕೆಂದು ಬಯಸಿದವರಲ್ಲ. ಮಾಸ್ತರಿಕೆ, ಕಾರಕೂನಕಿ, ಸ್ವದೇಶಿ ಅಂಗಡಿಯಲ್ಲಿ ಮಾರಾಟಗಾರ, ಮುದ್ರಣ ಕೆಲಸದ ವ್ಯವಸ್ಥಾಪನ ಹೀಗೆ ಕೈಗೆ ಬಂದ ಕೆಲಸಗಳನ್ನು ಒಪ್ಪಿಕೊಂಡರೇ ಹೊರತು ಅಲ್ಲಿ ನೆಲೆ ನಿಲ್ಲಲಿಲ್ಲ. ಸದಾ ಅವರೊಂದಿಗೆ ಇದ್ದುದೆಂದರೆ ಕವಿತೆ ಕಥೆ ಬರೆಯುವ ಹುಚ್ಚು. ಕೊಟ್ಟ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸುವ ಅವರ ಸಾಮರ್ಥ್ಯ ಪ್ರಶ್ನಾತೀತ. ಪ್ರತಿಭೆ ಇತ್ತು. ಆದರೆ ಅದಕ್ಕೆ ಆಳತೆಗೋಲಾಗಬೇಕಾದ ಉಚ್ಚ ಶಿಕ್ಷಣ (ಯಾವುದೇ ಒಂದು ಡಿಗ್ರಿ) ಅವರಿಗೆ ಇರಲಿಲ್ಲ. ಅವರು ಕಾಲೇಜಿಗೆ ಹೋಗಿದ್ದರೆ, ಯಾವುದೇ ಅಧ್ಯಯನ ಆಯ್ದುಕೊಂಡಿದ್ದರೂ ತಮ್ಮ ದೈವದತ್ತ ಪ್ರತಿಭೆಯಿಂದ

ಆದರಲ್ಲಿ ಗಣನೀಯ ಯಶಸ್ಸು ಸಂಪಾದಿಸುತ್ತಿದ್ದರೆಂದು ಹೇಳಬಹುದು. ಅವರ ಅಗಾಧವಾದ ಅಕೌಂಟನ್ಸಿ ಜ್ಞಾನ, ಕಾಮರ್ಸ್ ಪದವಿಯಿಂದ ಬಂದಿದ್ದರೆ ಅವರಿಗೆ ದೊಡ್ಡ ಹುದ್ದೆ, ಸಾಕಷ್ಟು ಹಣಗಳಿಸುವ ಅವಕಾಶಗಳು ಒದಗಿಬರಲು ಸಾಧ್ಯವಿತ್ತು. ಆಗ ಅವರು ಪತ್ರಿಕೋದ್ಯಮಿ ಆಗುತ್ತಿದ್ದರೇ ? ಈಗ ಇದು ಕೇವಲ ಊಹೆ ಅಷ್ಟೇ. ಆದರೆ ಬರೆಯುವ ಹವ್ಯಾಸ, ಮುದ್ರಣಾಲಯದ ಕೆಲಸ, ಅಂತರಂಗ ಪತ್ರಿಕೆಯ ಅನುಭವ, ಅವರನ್ನು ಅವರಿಗೆ ಅರಿವಿಲ್ಲದಂತೆಯೇ ಪತ್ರಿಕೋದ್ಯಮದತ್ತ ನೂಕಿದವು ಎಂದರೆ ತಪ್ಪಾಗಲಾರದು. ಸೃಜನಶೀಲ ಚೈತನ್ಯ ಇತ್ತು, ಭಾಷೆಯ ಬಲ ಇತ್ತು. ಕಲ್ಪಕತೆ ಇತ್ತು. ಒಲವು ಮನಸ್ಸು ಇದ್ದವು. ಪತ್ರಿಕೆಯ ಪ್ರಕಟಣೆ ಆದಾಯರಹಿತ ಸೇವೆ, ಹವ್ಯಾಸ ಮತ್ತು ಹಿರಿಮೆಗಾಗಿ ಮೀಸಲಾಗಿದ್ದ ಆ ದಿನಗಳಲ್ಲಿ ಅವರೊಬ್ಬ ವೃತ್ತಿನಿರತ ಪತ್ರಕರ್ತರಾಗಿ ರೂಪುಗೊಳ್ಳುವ ಅವಕಾಶ ಅವರಿಗೆ ಉಡುಪಿ ಇಲ್ಲವೆ ಮಂಗಳೂರಿನಲ್ಲಿ ಇರಲಿಲ್ಲ. ಅವರು ಉಡುಪಿಯನ್ನು ಬಿಡಬೇಕಾಗಿತ್ತು. ಹುಬ್ಬಳ್ಳಿಗೋ ಬೆಂಗಳೂರಿಗೋ ದಾರಿ ಸವೆಸಬೇಕಾಗಿತ್ತು. ಬಾಂಬ್ ದಾಳಿಯ ಬೆದರಿಕೆಯಿಂದ ಮದ್ರಾಸದಿಂದ ಉಡುಪಿಗೆ ಧಾವಿಸಿ ಬಂದ ಅವರಿಗೆ ಹೆಂಡತಿಯ ಸಹೋದರರಿಂದ, ಧಾರವಾಡಕ್ಕೆ ವಲಸೆ ಬಂದು ಬಿಡಲು ಕರೆಬಂತು.

ಧಾರವಾಡಕ್ಕೆ ಬಂದಾಗ ಈ ಸಂಬಂಧಿಕರ ಹೊಟೆಲ್‌ಗಳ ಲೆಕ್ಕ ಬರೆಯುವ ಮತ್ತು ಗಲ್ಲೆಯ ಮೇಲೆ ಕುಳಿತುಕೊಳ್ಳುವ ಕೆಲಸ ಮಾಡಿದ ಆಚಾರ್ಯರು, ಬಹುಬೇಗ ಸಾಹಿತ್ಯಿಕ ವಲಯದಲ್ಲಿ ಪರಿಚಿತರಾದರು. ಅಲ್ಲಿ ಅವರನ್ನು ಕರೆದು ಮಾತಾಡಿಸುವ ಜನರಿದ್ದರು. ಅವರ ಪ್ರಾಣ ಸ್ನೇಹಿಕ ದ.ಬಾ. ಕುಲಕರ್ಣಿ, ಸಹೃದಯಿಗಳಾಗಿ ಕಂಡು ಬಂದ ಪಾಟೀಲ ಪುಟ್ಟಪ್ಪನವರಿದ್ದರು. ಪುಷ್ಕಳ ಹರಟೆಗೆ 'ಶ್ರೀಮಾತಾ' (ಬೇಂದ್ರೆಯವರ ಮನೆ) ಇತ್ತು. ಅಲ್ಲಿ ಸಾಹಿತ್ಯಿಕ ಚರ್ಚೆಗೆ ಗೆಳೆಯರು ಬರುತ್ತಿದ್ದರು. ಅಕ್ಷರ ಕ್ಷೇತ್ರದಲ್ಲಿಯೇ ಉಳಿಯಬಹುದೆಂಬ ಆಸೆ ಚಿಗುರಿತು. ೧೯೪೪ರಲ್ಲಿ ಮುದ್ರಣಾಲಯ ಮೇಲ್ವಿಚಾರಕರಾಗಿ ಸಂಯುಕ್ತ ಕರ್ನಾಟಕ ಸೇರಿದರು. ನಂತರ 'ಕರ್ಮವೀರ'ದಲ್ಲಿ ಲಾಂಗೂಲಾಚಾರ್ಯರ ಆವಿರ್ಭಾವ ಆಯಿತು. ಅವರ ಲಾಂಗೂಲಚಾಲನೆ ಅನೇಕರು ಭಾವಿಸಿದಂತೆ ಹರಟೆಗಳಾಗಿರದೆ ವಿಡಂಬನೆಗಳಾಗಿದ್ದವು. ಅಣಕು ಆಟದ ಪ್ರತಿರೂಪವಾಗಿದ್ದವು. 'ಕರ್ಮವೀರ'ದಲ್ಲಿ ಅವರು ಕವನ, ವಿಶ್ಲೇಷಣೆ, ವಿಮರ್ಶೆ ಎಲ್ಲವನ್ನೂ ಬರೆದರು. ಆದರೆ ಹ. ರಾ. ಪುರೋಹಿತ ಸಂಪಾದಕತ್ವದ ಈ ವಾರಪತ್ರಿಕೆ ಅವರಿಗೆ ತಕ್ಕ ವೇದಿಕೆಯಾಗಿರಲಿಲ್ಲ. ಮುಂದೆ 'ಕರ್ಮವೀರ' ಸಂಯುಕ್ತ ಕರ್ನಾಟಕದ ಸಾಪ್ತಾಹಿಕ ಆವೃತ್ತಿಯಾಗಿ ಪ್ರಕಟವಾಗ ತೊಡಗಿದಾಗ 'ಸಂಯುಕ್ತ ಕರ್ನಾಟಕ'ದ ಭಾಗದಲ್ಲಿ ಸುದ್ದಿ ಮತ್ತು 'ಕರ್ಮವೀರ'ದ ಭಾಗದಲ್ಲಿ ಕಥೆ ಕವನ, ವಿಮರ್ಶೆ ವಿಡಂಬನೆ ವಿಶ್ಲೇಷಣೆಗಳು ಪ್ರಕಟವಾಗುತ್ತಿದ್ದವು. ದಿನಪತ್ರಿಕೆಯ ಸ್ವರೂಪದ ಕೆಲಸ ಅವರಿಗೆ ಒಂದು ಹೊಸ ಅವಕಾಶವಾಗಿತ್ತು. ಟೆಲೆಪ್ರಿಂಟರ್‌ನಲ್ಲಿ ಇಂಗ್ಲೀಷನಲ್ಲಿ

ಬರುತ್ತಿದ್ದ ದೇಶ-ವಿದೇಶ ಸುದ್ದಿಗಳ ಆಯ್ಕೆ, ಸಂಪಾದನೆ, ಭಾಷಾಂತರ ಹೆಚ್ಚು ರೋಚಕವಾದ ಕೆಲಸವಾಗಿತ್ತು. ಆದರೆ ಈ ಸುಸಂಧಿ ವಾರಕ್ಕೆ ಒಂದು ದಿನ ಮಾತ್ರ. ಅವರನ್ನು 'ಸಂಯುಕ್ತ ಕರ್ನಾಟಕ'ದ ಪೂರ್ಣಾವಧಿ ಉಪಸಂಪಾದಕ ಎಂದು ನೇಮಿಸುವ ವಿಚಾರ ಮ್ಯಾನೇಜಮೆಂಟಿಗೆ ಬೇಡವಾಗಿತ್ತೇನೋ! ಅಂದರೆ ಅಲ್ಲಿ ಆರ್. ಕೆ. ಜೋಶಿ, ರಾವಬಹಾದ್ದೂರ (ಆರ್. ಬಿ. ಕುಲಕರ್ಣಿ) ಅವರಂಥ ಅತಿರಥಿ ಮಹಾರಥಿಗಳಿದ್ದರು. ಹ. ರಾ ಪುರೋಹಿತರು ಸಹಸಂಪಾದಕರಾಗಿದ್ದರು. ಪುರೋಹಿತರೇನೋ ಯೋಗ್ಯತೆಗೆ ಮನ್ನಣೆ ಕೊಡುವ ವಿದ್ಯಾ ಪಕ್ಷಪಾತಿಗಳಾಗಿದ್ದರು. ಆದರೆ ಉಳಿದವರು ಆಚಾರ್ಯರನ್ನು ಹೇಗೆ ಸಹಿಸುತ್ತಿದ್ದರು ಎಂಬುದು ಅನುಮಾನಾಸ್ಪದ. ಆಚಾರ್ಯರು ವಿದ್ವಾಂಸರಾಗಿದ್ದರೆ ಉಳಿದವರು 'ಸಂಯುಕ್ತ ಕರ್ನಾಟಕ'ದ ಆವಶ್ಯಕತೆಗೆ ತಕ್ಕಷ್ಟಿದ್ದರು. ಆಗೇನಾದರೂ ಪಾವೆಂ ಅವರಿಗೆ 'ಸಂಯುಕ್ತ ಕರ್ನಾಟಕ'ದಲ್ಲಿ ಪ್ರವೇಶ ಸಿಕ್ಕಿದ್ದರೆ ಅದರ ಸ್ವರೂಪವೇ ಬದಲಾಗಲು ಸಾಧ್ಯವಿತ್ತು. ಬೇರೆ ಪತ್ರಿಕೆಗಳಲ್ಲಿ ಮುಖ್ಯವಾಗಿ ಇಂಗ್ಲೀಷ ಪತ್ರಿಕೆಗಳ ಅಗ್ರಲೇಖನಗಳನ್ನು ಅಸ್ತವ್ಯವಸ್ತವಾಗಿ ಭಾಷಾಂತರಿಸಿ, ಸ್ವಂತ ಕೃತಿ ಎಂಬಂತೆ ಅವುಗಳನ್ನು ಪ್ರಕಟಿಸುವದು ತಪ್ಪಬಹುದಾಗಿತ್ತು. ಪ್ರಾಮಾಣಿಕವಾಗಿ ಹಾಗೂ ನಿರ್ಭಿಡೆಯಿಂದ ಹೇಳಬಹುದಾದರೆ ಸುಸಂಬದ್ಧ ಸಂಪಾದಕೀಯ ಲೇಖನಗಳು, ಕರ್ನಾಟಕದ ಈ ಪ್ರಮುಖ ಪತ್ರಿಕೆಯಲ್ಲಿ ಪ್ರಕಟವಾಗಲು ಆರಂಭವಾದದ್ದು ಖಾದ್ರಿ ಶಾಮಣ್ಣನವರ ಆಗಮನದಿಂದ. 'ಸಂಯುಕ್ತ ಕರ್ನಾಟಕ'ದಲ್ಲಿ ಬಂದದ್ದೇ ಶ್ರೇಷ್ಠ, ಅದೇ ಸತ್ಯ ಎಂಬ ಭಾವನೆ ಜನರಲ್ಲಿತ್ತು. ಆಗಿನವರು ಅಗತ್ಯಕ್ಕಿಂತ ಹೆಚ್ಚಿನದೇನೂ ಬರೆಯುತ್ತಿರಲಿಲ್ಲ. ಹೊಸ ಹೊಸ ಪ್ರಯೋಗಗಳಂತೂ ದೂರದ ಮಾತು. ಆದುದರಿಂದ ಆ ಹಿರಿಯರೇ ಶ್ರೇಷ್ಠರು. ಬುದ್ಧಿವಂತರು, ಸಮರ್ಥರು ಎಂದು ಹೆಸರಾಗಿದ್ದರು. ಆಚಾರ್ಯರಿಗೆ ಖಂಡಿತವಾಗಿಯೂ ಹೆಚ್ಚಿನ ಸಾಮರ್ಥ್ಯವಿತ್ತು. 'ಕಸ್ತೂರಿ' ಬರುವವರೆಗೆ ಅವರು ಹತ್ತರ ನಂತರ ಇನ್ನೊಬ್ಬರಾಗಿಯೇ ಉಳಿದಿದ್ದರು. ಅವರಂತೆ ಓದಿದವರು, ಓದಿ ಆಲೋಚನೆ ಮಾಡುವವರು ಆಗ ಬೇಕಾಗಿಯೇ ಇರಲಿಲ್ಲವೇನೋ! 'ಸಂಯುಕ್ತ ಕರ್ನಾಟಕ'ದಲ್ಲಿ ಅವರಿಗೆ ದೇಶ-ವಿದೇಶಗಳ ಪತ್ರಿಕೆಗಳು ವಿಶ್ವಕೋಶಗಳು ಪ್ರಸಿದ್ಧ ಇಂಗ್ಲೀಷ ಮ್ಯಾಗಝಿನ್‌ಗಳು, ಆಗಿನ ಕಾಲದ ವಿಶಿಷ್ಟವಾದ ಪುಸ್ತಕಗಳು ಲಭ್ಯವಾದವು. ಆಚಾರ್ಯರಂತೆ ಸಂ.ಕ. ಗ್ರಂಥಾಲಯವನ್ನು ಪೂರ್ಣವಾಗಿ ಉಪಯೋಗಿಸಿ ಕೊಂಡವರೆಂದರೆ ಬಹುಶಃ ಅವರೊಬ್ಬರೇ. ಒಬ್ಬ ಮಹಾಶಯರಂತೂ ಬ್ರಿಟಾನಿಕಾ ಎನ್ ಸೈಕ್ಲೋಪಿಡಿಯಾಗಳನ್ನು ಗ್ರಂಥಾಲಯದಿಂದ ತರಿಸಿ ತಮ್ಮ ಚೇಂಬರಿನ ಕನ್ನಡಿ ಕಪಾಟಿನಲ್ಲಿ ಇರಿಸಿಕೊಂಡು ವಿದ್ವಾಂಸನ ಸೋಗುಹಾಕಿದರು. ಅವುಗಳನ್ನು ಉಪಯೋಗಿಸಲು ಅವರು ಸಿಬ್ಬಂದಿಗೂ ಬಿಡುತ್ತಿರಲಿಲ್ಲ. ಕೊನೆಗೊಂದು ದಿನ ಈ ಅಮೂಲ್ಯ ಗ್ರಂಥಗಳು ಗೆದ್ದಲು ತಿಂದು ಮಣ್ಣಾಗಿ ಹೋದವು.

ಪಾ. ವೆಂ. ಆಚಾರ್ಯರು ಚೆನ್ನಾಗಿ ಓದಿಕೊಂಡ ಪತ್ರಕರ್ತರಲ್ಲಿ ಒಬ್ಬರಾಗಿದ್ದರು. ಪಾಪು, ಖಾದ್ರಿ ಶಾಮಣ್ಣ, ವೈ. ಎನ್. ಕೆ ಹೀಗೆ ಕೆಲವರನ್ನು ಹೆಸರಿಸಬಹುದು. ಇದರಿಂದ ಆಚಾರ್ಯರು ಕೆಲವು ಸ್ತರಗಳನ್ನು ಮೇಲೇರಿದರು. 'ಕಸ್ತೂರಿ' ಜನ್ಮತಾಳುವ ಮೊದಲು ಅಂದರೆ ಅದು ಮೊಹರೆ ಹಣಮಂತರಾಯರ ಮೆದುಳಿನಲ್ಲಿ ಸುಳಿಯುವ ಬಹುಮೊದಲೇ ಆಚಾರ್ಯರು ಅದರ ತಯಾರಿ ನಡೆಸಿದಂತೆ ಇತ್ತು. ಈ ವೇಳೆಗಾಗಲೇ ಅವರು ಹುಬ್ಬಳ್ಳಿ ಧಾರವಾಡ ಸಾಹಿತಿಗಳ ಗುಂಪಿನಲ್ಲಿ ಗುರುತಿಸಿ ಕೊಂಡಿದ್ದರು. ಅವರು ಬೇಂದ್ರೆ ಮತ್ತು ಗೋಕಾಕರಿಗೆ ಅಚ್ಚುಮೆಚ್ಚಿನವರಾಗಿದ್ದರು. ಒಂದು ವೇಳೆ ಕಸ್ತೂರಿ ಬಾರದೇ ಹೋಗಿದ್ದರೆ ಆಚಾರ್ಯರು ಎಲ್ಲಿರುತ್ತಿದ್ದರು। ಮತ್ತೆ ಊಹೆ. ಈ ಕಾಲ್ಪನಿಕ ಪ್ರಶ್ನೆಗೆ ಕಾಲ್ಪನಿಕ ಉತ್ತರವನ್ನೇ ಹುಡುಕಬೇಕಾಗುತ್ತದೆ. ಲೋಕಶಿಕ್ಷಣ ಟ್ರಸ್ಟ್ ಸಂಪಾದಕೀಯದಲ್ಲಿ ಕಾಮನ್ ಸೀನಿಯಾರಿಟಿ ಇರಲ್ಲಿಲ. ಆಚಾರ್ಯರು ಅದರಲ್ಲಿ ಬಹಳ ಕೆಳಗಿದ್ದರು. ಯೋಗ್ಯತೆಯ ಆಧಾರದ ಮೇಲೆ ಬಡ್ತಿಕೊಡುವಂತಿದ್ದರೆ ಕೆಲವರು ಕೆಲಸ ಕಳೆದುಕೊಳ್ಳುವ ಸಂಭವ ಇತ್ತು. ಆಚಾರ್ಯರಿಗೆ ಆಗ ನೌಕರಿಯನ್ನು ಕಳೆದುಕೊಳ್ಳುವ ಭಯ ಇರಲಿಲ್ಲ. ಅವರಿಗೆ ಒಳ್ಳೆಯ ಹೆಸರು ಬಂದಿತ್ತು, ಹೊಸ ಹೊಸ ಪತ್ರಿಕೆಗಳು ಬರುತ್ತಿದ್ದ ಕಾಲದಲ್ಲಿ ಅವಕಾಶಗಳೂ ಇದ್ದುವು. ಆದರೆ ಯಾವುದೇ ಮ್ಯಾನೇಜ್‌ಮೆಂಟ್ ಬಹಳ ಜಾಣನಾದವನನ್ನು ತಮ್ಮ ಮೈ ಮೇಲೆ ಹೇರಿಕೊಳ್ಳುತ್ತಿರಲಿಲ್ಲ. ಪಾವೆಂ ಅವರಿಗೆ ಸ್ವಂತದ ಸಾಹಸ ಮಾಡುವ ಧೈರ್ಯವಾಗಲಿ ಸಂಪನ್ಮೂಲಗಳಾಗಲಿ ಇರಲಿಲ್ಲ. ತದ್ವಿರುದ್ಧವಾಗಿ ಪಾಪು ಅವರಿಗೆ ಸಂಪನ್ಮೂಲಗಳಿರದಿದ್ದರೂ ಧೈರ್ಯವಿತ್ತು. ಇಂಥದರಲ್ಲಿ ಈ ಇಬ್ಬರೂ ಮೇಧಾವಿಗಳು ಭಿನ್ನಪ್ರಕೃತಿಯವರು.

■■

# ೫. ಪತ್ರಕರ್ತರಾಗಿ (ii)

ಅಮೇರಿಕೆಯಿಂದ ಮರಳಿ ಬರುವಾಗ ಪುಟ್ಟಪ್ಪನವರು ಸ್ವಂತ ಪತ್ರಿಕೆಯನ್ನು ಮಾಡುವ ನಿರ್ಧಾರ ಕೈಕೊಂಡೇ ಬಂದಿದ್ದರು. 'ವಿಶಾಲ ಕರ್ನಾಟಕ'ದ ಅನುಭವ ಅವರಲ್ಲಿ ಹೇಸುಗೆ ಹುಟ್ಟಿಸಿತ್ತು ಮರಳಿ ಬಂದಾಗ ಅವರು ಅನೇಕ ತಿಂಗಳು ನಿರುದ್ಯೋಗಿಗಳಾಗಿಯೇ ಉಳಿದರು. ಇನ್ನೊಬ್ಬರ ಗುಲಾಮಗಿರಿ ಬೇಡ ಎಂದುಕೊಂಡಿದ್ದರೂ 'ನವಯುಗ'ದ ನಂಟು ಅವರಿಗೆ ಗಂಟುಬಿತ್ತು. ನಿಜಲಿಂಗಪ್ಪನವರು ಹುಬ್ಬಳ್ಳಿಗೆ ಬಂದಿದ್ದರು. ಅವರನ್ನು ಕಾಣಲು ಹೋದಾಗ ಅಲ್ಲಿ ಹಳ್ಳಿಕೇರಿ ಗುದ್ಲೆಪ್ಪ, ದೊಡ್ಡಮೇಟಿ ಅಂದಾನೆಪ್ಪ, ತಿ.ರು. ನೇಸ್ವಿ ಅಲ್ಲಿದ್ದರು. ಎಲ್ಲರೂ ಸೇರಿ ಅನುನಯದಿಂದ 'ನವಯುಗ'ದ ಸರ್ವಸ್ವ ನೀವೇ ಎಂದು ಹೇಳಿ ಅದರ ಸಂಪಾದಕತ್ವವನ್ನು ಪುಟ್ಟಪ್ಪನವರ ಕೊರಳಿಗೆ ಕಟ್ಟಿದರು.

ಈ ಮೊದಲು ಕೆ. ಎಫ್. ಪಾಟೀಲ, ಇಟಗಿ ವಕೀಲರು, ಹಂದಿಗನೂರಿನ ಶ್ರೀಮಂತ ದೇಸಾಯಿ ಮೊದಲಾದವರು, ಪುಟ್ಟಪ್ಪನವರಿಗೆ ಅಮೇರಿಕೆಗೆ ಕಳಿಸುವುದಾಗಿ ಹೇಳಿ ಧಾರವಾಡದಲ್ಲಿ ಆರಂಭವಾಗಿ ನಿಂತು ಹೋದ ಪತ್ರಿಕೆಯನ್ನು ಕೊಂಡು ಅದರಲ್ಲಿ ಅವರನ್ನು ತೊಡಗಿಸಿದ್ದರು. ೧೯೪೭ರ ಕೊನೆಯಲ್ಲಿ 'ವಿಶಾಲ ಕರ್ನಾಟಕ' ವಾರಪತ್ರಿಕೆಯಾಗಿ ಆರಂಭವಾಯಿತು. ಪುಟ್ಟಪ್ಪನವರು ಅದರ ಸಂಪಾದಕರಾದರು. ೧೯೪೭ರ ಆಗಸ್ಟ ೯ ರಂದು 'ವಿಶಾಲ ಕರ್ನಾಟಕ' ದಿನಪತ್ರಿಕೆಯಾಗಿ ಹೊರಬಂತು. ಎಲ್ಲ ನಾಲ್ಕು ಪುಟಗಳನ್ನು ಅವರೇ ಬರೆಯುತ್ತಿದ್ದರು. ಆದರೆ ಪಗಾರವಿರಲಿಲ್ಲ. ನಂತರ ಬಾಬು ಬೆಂಡಿಗೇರಿ ಮತ್ತು ಗದುಗಿನ 'ಗರ್ಜನೆ' ಸಂಪಾದಕ ಪ. ಲೋ. ಬಂಕಾಪುರ

ಅವರನ್ನು ಕೂಡಿಕೊಂಡರು ಎಲ್ಲವೂ ಸರಿಯಾಗಿ ನಡೆದಿದೆ ಎಂದುಕೊಳ್ಳುತ್ತಿದ್ದಾಗ ಕೆ. ಎಫ್. ಪಾಟೀಲರು ತಮ್ಮ ಪತ್ರಿಕೆಯಲ್ಲಿ ತಮಗೇ ಪ್ರಚಾರ ನಿರಾಕರಿಸಲಾಗುತ್ತಿದೆ ಎಂದು ಆರೋಪಿಸಿದಾಗ ಒಡಕು ಕಾಣಿಸಿಕೊಂಡಿತು. ಪಾಪು, ಅವರೊಡನೆ ಬಾಯಿಗೆ ಹತ್ತದೆ ತಾವೇ ಹೊರಬಿದ್ದು ಅಮೇರಿಕೆಯತ್ತ ಮುಖ ಮಾಡಿದರು ಅದು ಇತಿಹಾಸ.

ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಪುಟ್ಟಪ್ಪನವರು ತಮ್ಮ ಪ್ರೊಫೆಸರ್ ಜೊಸೆಫ್ ಬ್ರ್ಯಾಂಟ್‌ರ ಅಚ್ಚುಮೆಚ್ಚಿನ ವಿದ್ಯಾರ್ಥಿಯಾಗಿ ಅವರಿಂದ ಅಮೂಲ್ಯ ಪಾಠಗಳನ್ನು ಕಲಿತರು. ಪ್ರೊ. ಬ್ರ್ಯಾಂಟ್‌ರಿಂದಲೇ ಅವರಿಗೆ ವಿಲ್ ಡ್ಯುರಾಂಟ್‌ರ ಪರಿಚಯ ಆಯಿತು. ಅಮೇರಿಕೆಯ ಸಾರ್ವಜನಿಕ ಜೀವನದಲ್ಲಿ ಒಳ್ಳೆಯದು ಏನಿದೆ ಎಂಬುದನ್ನು ಮನನ ಮಾಡಿಕೊಂಡರು. ಪ್ರೊ. ಬ್ರ್ಯಾಂಟ್ ಒಮ್ಮೆ ಪುಟ್ಟಪ್ಪನವರಿಗೆ ಕಲಿಸಿದ ಅಮೋಘ ಪಾಠವನ್ನು ನಮ್ಮ ಕಿರಿಯ ಪತ್ರಕರ್ತರು ಕಲಿಯಲಿ ಎಂದು ಇಲ್ಲಿ ಉಲ್ಲೇಖಿಸಿದ್ದೇನೆ.

ಪುಟ್ಟಪ್ಪನವರು ಬರೆದ ಪ್ರೌಢ ಪ್ರಬಂಧದಲ್ಲಿ ಅವರು ರವೀಂದ್ರನಾಥ ಟಾಗೋರರ ಬಗ್ಗೆ ಬರೆಯುತ್ತ ಅವರನ್ನು 'ಭಾರತದ ಮಹಾನ್ ಕವಿ' ಎಂದು ವರ್ಣಿಸಿದ್ದರು. ಪ್ರೊ. ಬ್ರ್ಯಾಂಟ್ ಪ್ರಬಂಧವನ್ನು ಪರಿಶೀಲಿಸುತ್ತ, ಈ 'ಮಹಾನ್' ಶಬ್ದವೇಕೆ ? ವಿಶೇಷಣಗಳು ಬಹು ಗಂಡಾಂತರಕಾರಿ. ಅವುಗಳ ಮೋಹವನ್ನು ಹಚ್ಚಿಕೊಳ್ಳಬೇಡಿರಿ ಎಂದು ತಿಳಿ ಹೇಳಿದರು. ಅವರು ಮಹಾನ್ ಎಂಬ ಶಬ್ದ ತೆಗೆದುಹಾಕಿ ಭಾರತದ ಕವಿ ಎಂಬುದನ್ನಷ್ಟೇ ಉಳಿಸಿದರು. "ಅವರು ಮಹಾನ್ ಕವಿಯೇ ಆಗಿದ್ದರೆ 'ಮಹಾನ್' ಎಂಬ ಪದಪ್ರಯೋಗ ಮಾಡಲೇಬೇಕಾಗಿಲ್ಲ. ಅವರು 'ಮಹಾನ್' ಆಗಿರದಿದ್ದರೆ ಅವರನ್ನು 'ಮಹಾನ್' ಮಾಡಬೇಕೆನ್ನುವದು ಸರಿಯಲ್ಲ' ಎಂದು ಬ್ರ್ಯಾಂಟ್ ಹೇಳಿದ ಉಪದೇಶ ಎಲ್ಲ ಪತ್ರಕರ್ತರೂ ಅನುಸರಿಸಬೇಕಾದದ್ದು.

ಇನ್ನು 'ನವಯುಗ'ದ ಮಾತು. ಇದು ಕಾಂಗ್ರೆಸ್ ನಾಯಕ ತಿ. ರು. ನೇಸ್ವಿಯವರ ನೇತೃತ್ವದಲ್ಲಿ ಪ್ರಾರಂಭವಾದ ಪತ್ರಿಕೆ. 'ಸಂಯುಕ್ತ ಕರ್ನಾಟಕ'ಕ್ಕೆ ಪ್ರಬಲ ಎದುರಾಳಿಯಾಗುವ ಎಲ್ಲ ಲಕ್ಷಣಗಳನ್ನು ಹೊಂದಿತ್ತು. ಕಾಂಗ್ರೆಸ್ ಹಿರಿಯರ ಆಶಯದಂತೆ ಪುಟ್ಟಪ್ಪನವರು ಅದರ ಜವಾಬ್ದಾರಿ ಹೊತ್ತುಕೊಂಡು ಅದನ್ನು ಮುನ್ನಡೆಸಿದರು (ಈ ಪತ್ರಿಕೆಯ ಸಾಪ್ತಾಹಿಕ ಆವೃತ್ತಿಯಲ್ಲಿ ನನ್ನ ಕಥೆ 'ಸಿಂಧು' ಪ್ರಕಟವಾಗಿತ್ತು) ಪುಟ್ಟಪ್ಪನವರು ಪ್ರಧಾನ ಸಂಪಾದಕ ಎಂದು ಹೆಸರು ಹಾಕಿಕೊಂಡದ್ದೇ ತಡ ನೇಸ್ವಿಯವರು ಅಪಸ್ವರ ಎತ್ತಿದರು. ಆರೇಳು ವರ್ಷಗಳಿಂದ ಸಂಪಾದಕರಾಗಿ ಪತ್ರಿಕೆಯನ್ನು ನಡೆಸಿಕೊಂಡು ಬಂದಿದ್ದ ನೇಸ್ವಿಯವರ ಹೆಸರನ್ನು ಕೈ ಬಿಡುವುದು ಬೇಡ ಎಂಬ ಔದಾರ್ಯದಿಂದ ಪುಟ್ಟಪ್ಪನವರು ಕಾರ್ಯವಾಹಕ ಸಂಪಾದಕ (ಮ್ಯಾನೇಜಿಂಗ್ ಎಡಿಟರ್) ಎಂದು ನೇಸ್ವಿಯವರ ಹೆಸರು ಹಾಕಿದರು. ತಮ್ಮ ಸ್ಥಾನ ಕಡಿಮೆ ಆಯಿತೆಂದು ನೇಸ್ವಿ ತಕರಾರು ತೆಗೆದರು. ಕಾರ್ಯವಾಹಕ ಸಂಪಾದಕನ ಹುದ್ದೆಯೇ ದೊಡ್ಡದು

ಎಂದು ವಿವರಿಸಿದರೂ ಅವರು ಕೇಳಲಿಲ್ಲ. ಹುದ್ದೆಗಳನ್ನು ಅದಲು ಬದಲು ಮಾಡುವುದಕ್ಕೂ ಅವರು ಒಪ್ಪಲಿಲ್ಲ. ಆರಂಭದಲ್ಲಿಯೇ ಉಂಟಾದ ಈ ಅಸಮಾಧಾನ ಪುಟ್ಟಪ್ಪನವರಿಗೆ ಇರುಸುಮುರುಸು ಉಂಟು ಮಾಡಿತು.

ತಮಗೆ ಆಗದಿದ್ದ ಕಾಂಗ್ರೆಸ ನಾಯಕರಿಗೆ ಪ್ರಚಾರ ಕೊಡುವುದನ್ನು ನೇಸ್ವಿ ವಿರೋಧಿಸತೊಡಗಿದರು. ಪತ್ರಿಕೆಗೆ ಹಣದ ಸಹಾಯ ಮಾಡಿದವರಿಗೆ ಮಾತ್ರ ಪ್ರಚಾರ ನೀಡಬೇಕೆಂಬುದು ಅವರ ಹಠ. ಅದರಗುಂಚಿಯ ಶಂಕರಗೌಡರು ಕರ್ನಾಟಕ ಏಕೀಕರಣಕ್ಕೆ ಒತ್ತಾಯಿಸಿ ಅನಿರ್ದಿಷ್ಟ ಅವಧಿಯ ಉಪವಾಸ ಸತ್ಯಾಗ್ರಹ ಕೈಕೊಂಡಿದ್ದರು. 'ನವಯುಗ'ದಲ್ಲಿ ಇವರ ಸುದ್ದಿ ನಿತ್ಯ ಪ್ರಮುಖವಾಗಿ ಪ್ರಕಟವಾಗುತ್ತಿದ್ದಿತು. ಗೌಡರ ಉಪವಾಸದ ೨೩ನೇ ದಿನ ನಗರ ಭವನದಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿಯ ಸಭೆ ಸೇರಿತು. ಸಭೆ ಆರಂಭವಾಗುತ್ತಿದ್ದಂತೆಯೇ ಹೊರಗೆ ಸೇರಿದ್ದ ಶಂಕರಗೌಡರ ಉದ್ರಿಕ್ತ ಅಭಿಮಾನಿಗಳು ಸಭೆಗೆ ನುಗ್ಗಿದರು. ಹೊರಗಿನಿಂದ ಕಲ್ಲುಗಳು ಬೀಳತೊಡಗಿದವು. ಅನೇಕರು ಗಾಯಗೊಂಡರು. ಕಾಂಗ್ರೆಸ್ ಜೀಪಿಗೆ ಬೆಂಕಿ ಹಚ್ಚಲಾಯಿತು. ಲಾಠಿ ಪ್ರಹಾರಕ್ಕೆ ಬಗ್ಗದ ಜನಜಂಗುಳಿಯನ್ನು ಚದುರಿಸಲು ಗಾಳಿಯಲ್ಲಿ ಗೋಳೀಬಾರ್ ಮಾಡಲಾಯಿತು. ಕರ್ನಾಟಕ ಏಕೀಕರಣ ಕಾಂಗ್ರೆಸ್‌ನಿಂದ ಸಾಧ್ಯವಿಲ್ಲ ಎಂದು ಜನರು ಕಾಂಗ್ರೆಸ್ ಮುಖಂಡರ ರಾಜೀನಾಮೆ ಬೇಡಿದರು. ಈ ಸುದ್ದಿಯನ್ನು ಪುಟ್ಟಪ್ಪನವರು ಪಿಟಿಐಗೆ ಬರೆದುಕೊಟ್ಟರು. ಅದು 'ನ್ಯೂಯಾರ್ಕ ಟೈಮ್ಸ'ನಲ್ಲೂ ಪ್ರಕಟವಾಯಿತು. ಮುಂದೆ ವಿಧಾನಸಭೆಗೆ ನಡೆದ ಎರಡು ವಿಧಾನಸಭೆ ಚುನಾವಣೆಗಳಲ್ಲಿ ಪುಟ್ಟಪ್ಪನವರ ನಿರೀಕ್ಷೆಯಂತೆ ಕಾಂಗ್ರೆಸ್ ಪಕ್ಷ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ (ಅಕರಾನಿ) ಪರಿಷತ್ತನ ಅಭ್ಯರ್ಥಿಗಳಿಂದ ಪರಾಜಿತವಾಯಿತು. ನಂತರ ಸಂಪಾದಕೀಯದ ವಿಷಯದಲ್ಲಿ ಸರದಾರ ವೀರನಗೌಡರು ತಮ್ಮ ಹಠವನ್ನೇ ಸಾಧಿಸಿ ಪುಟ್ಟಪ್ಪನವರ ಸಂಪಾದಕೀಯ ತೆಗೆದು ಹಾಕಿ ತಮ್ಮ ಲೇಖನವನ್ನು ಅದರ ಸ್ಥಾನದಲ್ಲಿ ಹಾಕಿಕೊಂಡರು. ಪತ್ರಿಕೆಯನ್ನು ವಿಶಿಷ್ಟ ರೀತಿಯಲ್ಲಿ ರೂಪಿಸಲು ಯತ್ನಿಸುತ್ತಿದ್ದ ಪುಟ್ಟಪ್ಪನವರಿಗೆ ನೇಸ್ವಿ ಮತ್ತು ಅವರ ಮಗ ಶಿವಯೋಗಿ ಅಡ್ಡಗಾಲು ಹಾಕುತ್ತಿದ್ದರು. ೬ ತಿಂಗಳು ೧೩ ದಿನಗಳ ಕೆಲಸದ ನಂತರ ಪಾಪು 'ನವಯುಗ'ದಿಂದ ಹೊರಬಿದ್ದರು. (ಅಲ್ಲಿ ಅವರ ಕೆಲಸ ಸುಗಮವಾಗಿ ಸಾಗಿದ್ದರೆ 'ಪ್ರಪಂಚ' ಹುಟ್ಟುತ್ತಿದ್ದಿತೋ ಇಲ್ಲವೋ ಆ ಭಗವಂತನಿಗೇ ಗೊತ್ತು) ಅಂದಿನಿಂದ ಅವರ ಉಪವಾಸದ ದಿನಗಳು ಆರಂಭವಾದವು.

'ಸಂಯುಕ್ತ ಕರ್ನಾಟಕ'ದ ಸಂಪಾದಕರಾಗಿದ್ದ ಮೊಹರೆ ಹಣಮಂತ ರಾಯರೊಂದಿಗೆ ಪುಟ್ಟಪ್ಪನವರಿಗೆ ಆತ್ಮೀಯ ಸಂಬಂಧ ಇತ್ತು. ಅವರಿಗೆ ಪುಟ್ಟಪ್ಪನವರ ಯೋಗ್ಯತೆಯಲ್ಲಿ ಅಪಾರ ವಿಶ್ವಾಸ ಇತ್ತು. ಮೊಹರೆಯವರು ಒಂದು ದಿನ ಇದ್ದಕ್ಕಿದ್ದ ಹಾಗೆ ''ಪುಟ್ಟಪ್ಪ ಒಂದು ವಾರಪತ್ರಿಕೆ ಮಾಡು, ಹೊಡತ ಆಗತೈತಿ'' ಎಂದು ಹುರಿದುಂಬಿಸಿದರು. 'ಸಂಯುಕ್ತಕರ್ನಾಟಕ'ದಲ್ಲಿ ಪ್ರಕಟನೆಗಳನ್ನು ಕೊಟ್ಟು ಸಹಕರಿಸಿದರು.

ಕಷ್ಟಪಟ್ಟು ಹಣಕೂಡಿಸಿ ಹಾಳುಗೊಡವೆಯಾಗಿದ್ದ ವಾಗ್ವಿಲಾಸ ಮುದ್ರಣಾಲಯವನ್ನು ಸುಧಾರಿಸಿಕೊಂಡು ಅವರು ತಮ್ಮ 'ಪ್ರಪಂಚ'ವನ್ನು ಕಟ್ಟಿಕೊಂಡರು. ೧೯೫೪, ಮಾರ್ಚ ೧೦ ರಂದು 'ಪ್ರಪಂಚ' ಕೊನೆಗೂ ಹೊರಬಿದ್ದಿತು. ಪುಟ್ಟಪ್ಪನವರು 'ಪ್ರಪಂಚ'ವನ್ನು ಕಟ್ಟಿದರು ; 'ಪ್ರಪಂಚ' ಪುಟ್ಟಪ್ಪ ಅವರ ಸಮಗ್ರ ವ್ಯಕ್ತಿತ್ವವನ್ನು ಕಟ್ಟಿತು. ಅವರು ವಿವಿಧ ಕ್ಷೇತ್ರಗಳಲ್ಲಿ ಮನಮುಟ್ಟಿ ದುಡಿದರೂ 'ಪ್ರಪಂಚ'ವೇ ಅವರ ಸಾಧನೆಗಳ ಹೆಗ್ಗುರುತು ಆಗಿದ್ದು ಸೋಜಿಗವಲ್ಲ.

ಇಲ್ಲಿಂದ ಮುಂದುವರಿಯುವ ಮೊದಲು ಪಾಡಿಗಾರು ವೆಂಕಟರಮಣ ಆಚಾರ್ಯರು ಮತ್ತು ಅವರು ಸಾಕಿ ಬೆಳೆಸಿದ 'ಕಸ್ತೂರಿ'ಯತ್ತ ಸ್ವಲ್ಪ ಕಣ್ಣು ಹೊರಳಿಸೋಣ. 'ಕಸ್ತೂರಿ' ಮೊಹರೆ ಹಣಮಂತರಾಯರ ಕಲ್ಪನೆಯ ಕೂಸು, ಅದನ್ನು ಅವರು ಆಚಾರ್ಯರ ಉಡಿಗೆ ಹಾಕಿದರು. 'ಕಸ್ತೂರಿ' ಗಿಂತ ಮೊದಲು ಪಾಟೀಲ ಪುಟ್ಟಪ್ಪನವರು, ಕನ್ನಡದ ಮೊದಲನೇ ಡೈಜೆಸ್ಟ್ ಆಗಿ 'ಸಂಗಮ'ದ ಪ್ರಕಟನೆಯನ್ನು ಆರಂಭಿಸಿದ್ದರು. ಆದರೆ ಕನ್ನಡದ ಏಕಮೇವ ಡೈಜೆಸ್ಟ್ ಆಗಿ ೧೯೫೬ರ ಸಪ್ಟಂಬರ್‌ದಿಂದ ಇಂದಿಗೂ ಉಳಿದುಕೊಂಡು ಬಂದದ್ದು 'ಕಸ್ತೂರಿ' ಮಾತ್ರ. ಪಂಡಿತ ಪಂಢರಿನಾಥ ಗಲಗಲಿಯವರ 'ಪಂಚಾಮೃತ' ಕೆಲವು ವರ್ಷಗಳ ಕಾಲ ತನ್ನದೇ ಆದ ವೈಶಿಷ್ಟ್ಯದಿಂದ ಪ್ರಸಿದ್ಧವಾದರೂ ಬದುಕಲಿಲ್ಲ. ಮಣಿಪಾಲದ 'ತುಷಾರ' ಇದೇ ಕಾಲದಲ್ಲಿ ಆರಂಭವಾದರೂ ಡೈಜೆಸ್ಟ್‌ರೂಪ ಧರಿಸದೆ ಮಾಸ ಪತ್ರಿಕೆಯಾಗಿ ಇಂದಿಗೂ ಮುಂದುವರೆದಿದೆ 'ಪ್ರಜಾವಾಣಿ' ಗುಂಪಿನ 'ಮಯೂರ'ಕ್ಕೆ ಡೈಜೆಸ್ಟ್ ಆಗುವ ಹಂಬಲ ಇದ್ದಂತೆ ಕಾಣುತ್ತದೆ. ಅದೂ ಸಹ ಒಂದು ಒಳ್ಳೆಯ ಮಾಸಪತ್ರಿಕೆಯಾಗಿ ಪ್ರಸಿದ್ಧವಾಗಿದೆ.

'ಕಸ್ತೂರಿ' ಪ್ರಕಟನೆಯ ಯೋಜನೆಯನ್ನು ಕಾರ್ಯರೂಪಕ್ಕೆ ತರುವಾಗ ರಂಗನಾಥ ದಿವಾಕರ ಅವರು ಸಂಪಾದಕನನ್ನು ಹುಡುಕುವ ಆಲೋಚನೆಯಲ್ಲಿ ತೊಡಗಿದರು. ಕೈಯಲ್ಲಿ ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕಾಗಿ ಅಲೆದಾಡಬೇಕೆ ಎಂಬ ಪ್ರಶ್ನೆಯನ್ನು ಮೊಹರೆ ಮುಂದಿಟ್ಟರು. ''ನಮ್ಮ ಪಾ. ವೆಂ. ಆಚಾರ್ಯರೇ ಇದ್ದಾರಲ್ಲ, ಬೇರೆ ಯಾರು ಬೇಕು'' ಎಂದು ಮೊಹರೆಯವರು ಸೂಚಿಸಿದಾಗ ದಿವಾಕರ ಒಪ್ಪಿದರು. ಆಚಾರ್ಯರಂಥ ಯೋಗ್ಯತಾವಾನರು ಆಗ ಇಡೀ ಕರ್ನಾಟಕದಲ್ಲಿ ಬೇರೆ ಯಾರೂ ಇರಲಿಲ್ಲವೆಂಬುದು ಕಟು ಸತ್ಯ.

ಪುಟ್ಟಪ್ಪ ಹಾಗೂ ಆಚಾರ್ಯ ಇಬ್ಬರನ್ನೂ ಕೆಲವು ವಿಷಯಗಳಲ್ಲಿ ದಿಟ್ಟಿಸಿ ನೋಡಿದಾಗ, ಒಬ್ಬರಿಗೊಬ್ಬರನ್ನು ಹೋಲಿಕೆ ಮಾಡಬಹುದು. ಆದರೆ 'ಕಸ್ತೂರಿ' ಮತ್ತು 'ಪ್ರಪಂಚ'ದ ನಡುವೆ ಯಾವ ಹೋಲಿಕೆಯೂ ಕಂಡು ಬರಲಾರದು. ಎರಡೂ ಪ್ರಕಟನೆಗಳ ಕಾರ್ಯವೈಖರಿ ಹಾಗೂ ಸ್ವರೂಪ ಬೇರೆಬೇರೆ. ಆದರೆ ಎರಡಕ್ಕೂ ಅವುಗಳ ಸಂಪಾದಕರು ತಮ್ಮ ವಿದ್ವತ್ತಿನ ಬಲದಿಂದ ಒಂದು ವಿಶಿಷ್ಟ ವ್ಯಕ್ತಿತ್ವವನ್ನು ಕಟ್ಟಿಕೊಟ್ಟರು. ಪುಟ್ಟಪ್ಪನವರದು ಸ್ವತಂತ್ರ ಪ್ರವೃತ್ತಿ. ಅವರು ಪ್ರಶ್ನಾತೀತರು, ಆಚಾರ್ಯರದ್ದು

ನೌಕರಿ. ದಿವಾಕರರಾಗಲಿ ಮೊಹರೆಯವರೇ ಆಗಲಿ ಅವರ ಕೆಲಸದಲ್ಲಿ ಹಸ್ತಕ್ಷೇಪ ಮಾಡದಿದ್ದರೂ ಸರ್ವತಂತ್ರ ಸ್ವತಂತ್ರರಾಗಿರಲಿಲ್ಲ. ಅವರು ಕ್ರಮೇಣ ತಮ್ಮ ಉತ್ಕೃಷ್ಟ ಕೆಲಸದಿಂದ 'ಕಸ್ತೂರಿ'ಯ ಕೆಲಸದಲ್ಲಿ ಸಂಪೂರ್ಣ ಸ್ವಾತಂತ್ರ್ಯಗಳಿಸಿಕೊಂಡರು. ಆದರೂ ಅವರು ಕೆಲಸದಲ್ಲಿ ಮಾತ್ರ ಸಂಪಾದಕರು, ಕೀರ್ತಿಯಲ್ಲಿ ಅಲ್ಲ. ಮೊಹರೆಯವರು ಗುಣಗ್ರಾಹಿಗಳಾಗಿದ್ದರೂ ಆಚಾರ್ಯರನ್ನು 'ಸಂಪಾದಕ' ಎಂದು ಹೆಸರಿಸಲಿಲ್ಲ. ಅವರ ಓದುಗರು ಅಭಿಮಾನಿಗಳು ಆಚಾರ್ಯರನ್ನು ಸಂಪಾದಕರೆಂದೇ ಗುರುತಿಸುತ್ತ ಬಂದರು. ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡುತ್ತಿದ್ದವರಿಗೆ ಪೂರ್ಣಪ್ರಮಾಣದ ಸಂಪಾದಕ ಎನ್ನುವ ಹುದ್ದೆಗೆ ಅವರನ್ನು ಏರಿಸಲಿಲ್ಲ. ಸಂಪಾದಕರು ಎಂದು ಹೆಸರು ಹಾಕಿಕೊಂಡವರು ಖಾದ್ರಿ ಶಾಮಣ್ಣನವರು. ಅವರು 'ಕಸ್ತೂರಿ'ಯ ಉಸಾಬರಿಗೇ ಹೋಗುತ್ತಿರಲಿಲ್ಲ. ಒಂದೂವರೆ ಸಾವಿರ ಸಂಬಳಕ್ಕೆ ನಿವೃತ್ತರಾದ ಆಚಾರ್ಯರಿಗೆ ಕಚೇರಿಯಿಂದ ಯೋಗ್ಯ ಮಾನ ಹಾಗೂ ಪುರಸ್ಕಾರ ದೊರೆಯಲಿಲ್ಲ. ಅಂಥ ಮನಸ್ಸನ್ನು ವ್ಯವಸ್ಥಾಪಕರು ಹೊಂದಿರಲಿಲ್ಲ. ಇಂದು ಕೂಡ 'ಕಸ್ತೂರಿ' ಆಚಾರ್ಯರ ನೆನಪಿನಲ್ಲೇ ಬದುಕಿದೆ.

ಪುಟ್ಟಪ್ಪನವರು ತಮ್ಮ ಮನಸ್ಸಿನ ಮಾಲಿಕರಾಗಿದ್ದರು. ತಮಗೆ ಸರಿ ಕಂಡಂತೆ 'ಪ್ರಪಂಚ'ವನ್ನು ರೂಪಿಸಿದರು. ಅದು ನವನವೋನ್ಮೇಶಾಲಿ ಪ್ರಯೋಗ ಆಗಿತ್ತು. ಕನ್ನಡದ ಓದುಗರಿಗೆ ಅದು ಹೊಸದಾಗಿತ್ತು. ಅಚ್ಚರಿಯನ್ನುಂಟು ಮಾಡುವ ಜ್ಞಾನವಾಹಿನಿಯಾಗಿತ್ತು. ಓದು ರುಚಿಕಟ್ಟಾಗಿತ್ತು. ಪಾಪು ಅವರ ಅನುಭವಸಿದ್ಧ ಮಸಾಲೆಯ ರಹಸ್ಯ ಅವರ ಭಾಷೆಯಲ್ಲಿ ನಿರೂಪಣೆಯಲ್ಲಿ, ವಿಷಯ ಆಯ್ಕೆಯಲ್ಲಿ ಬರವಣಿಗೆಯ ಚುರುಕಿನಲ್ಲಿ ಅಡಗಿತ್ತು. ಮೊದಲ ಸಂಚಿಕೆಯಿಂದಲೇ ಅದು ಜನಾನುರಾಗಿ ವಸ್ತುವಾಯಿತು. ಓದುಗರನ್ನು ಬಿಡಿರಿ 'ಪ್ರಪಂಚ' ಪತ್ರಕರ್ತರಲ್ಲೂ ಕೂತೂಹಲ ಕೆರಳಿಸಿತ್ತು. ಅದನ್ನು ಅವರು ಕನ್ನಡ ಪತ್ರಿಕೋದ್ಯಮದ ವಿನೂತನ ಪ್ರಯೋಗವಾಗಿ ಕಂಡರು. ಅದು ಪತ್ರಿಕೋದ್ಯಮದ ದೀಕ್ಷೆ ತೊಟ್ಟವರಿಗೆ ಪಠ್ಯಪುಸ್ತಕವಾಯಿತು. ಕರ್ನಾಟಕದ ಕಥೆ, ಭಾರತ ದರ್ಶನ ಮತ್ತು ಪ್ರಪಂಚ ಪ್ರದಕ್ಷಿಣೆ ವಿಶಿಷ್ಟ ಅಂಕಣಗಳಾಗಿ ಕಂಗೊಳಿಸಿದವು. ರುಚಿ–ಶುಚಿ ಎರಡೂ ಅವುಗಳ ಹೆಗ್ಗುರುತು. ಸುದ್ದಿಗಳ ಜಾಡು ಹಿಡಿದು ಅವುಗಳಲ್ಲಿ ಅಡಗಿದ ಸತ್ಯವನ್ನು ಸತ್ವವನ್ನು ಪುಟ್ಟಪ್ಪನವರು ವ್ಯಕ್ತಿ ಸಂಗತಿಗಳ ರೂಪದಲ್ಲಿ ಸಾದರಪಡಿಸುತ್ತಿದ್ದರು. ಅಲ್ಲಿ ವಿಶ್ಲೇಷಣೆ ಟೀಕೆ–ಟಿಪ್ಪಣಿ, ಮೆಚ್ಚುಗೆ, ಆ ಚಿಕ್ಕ ಚಿಕ್ಕ ವಾಕ್ಯ ವೃಂದಗಳಲ್ಲಿ ರಾರಾಜಿಸುತ್ತಿದ್ದವು. ಅವರು ಹೊಗಳಿದರೂ ಪ್ರಚಾರ, ಟೀಕಿಸಿದರೂ ಪ್ರಚಾರ. ತಾವು 'ಪ್ರಪಂಚ'ದಲ್ಲಿ ಕಾಣಿಸಿಕೊಂಡ ಸಂಭ್ರಮ ಈ ಎರಡಕ್ಕೂ ಸಿಲುಕಿದವರಲ್ಲಿ ಇರುತ್ತಿತ್ತು. ಆದುದರಿಂದ ಟೀಕೆಗೊಳಗಾದವರು ಪುಟ್ಟಪ್ಪನವರನ್ನು ತಡವಿ ತಾಪತ್ರಯ ಪಡುತ್ತಿರಲಿಲ್ಲ.

ಪುಟ್ಟಪ್ಪನವರು ಆವಶ್ಯಕತೆಗಿಂತ ಒಂದು ಶಬ್ದವನ್ನು ಹೆಚ್ಚಿಗೆ ಬರೆಯಲಾರರು. ಒಂದು ಶಬ್ದವನ್ನು ಕಡಿಮೆ ಮಾಡಲಾರರು. ವಿಷಯಾನುಸಾರ ಅವರ ಭಾಷಾ ಶೈಲಿ ತಂತಾನೇ ವಿಕಾಸವಾಗುತ್ತಿರುತ್ತಿತ್ತು ಆ ಚುರುಕು ಆ ಪರಿಶ್ರಮ ಇಂದಿಗೂ ಅವರ ಬರಹದಲ್ಲಿ ಉಳಿದಿದೆ. 'ಅನುಭವ ಇರುವಲ್ಲಿ ಅಮೃತತ್ವ ಇದೆ, ನೀವು ಈ ಸಂಗತಿಯನ್ನು ತಿಳಿದಿರಬೇಕು' ಎಂಬ ಎರಡು ಅಂಕಣಗಳಲ್ಲಿ ಲೋಕಜ್ಞಾನ ತುಂಬಿ ತುಳುಕುತ್ತಿದ್ದರೆ ಓದುಗರು ಅವುಗಳನ್ನು ಬಾಯಿಚಪ್ಪರಿಸುತ್ತ ಓದುತ್ತಿದ್ದರು. ನನ್ನ ಹೃದಯದಿಂದ ನಿಮ್ಮ ಹೃದಯಕ್ಕೆ ಎನ್ನುವ ಅಂಕಣದಲ್ಲಿ ಅವರು ತಮ್ಮ ವಿಚಾರಗಳನ್ನು ಅಭಿಪ್ರಾಯಗಳನ್ನು ಓದುಗರೊಂದಿಗೆ ಹಂಚಿಕೊಳ್ಳುತ್ತಿದ್ದರು. ಉಳಿದಂತೆ ಕಥೆ, ವಿಷಯಾಧಾರಿತ ಲೇಖನ, ಸಿನೇಮಾ, ಕ್ರೀಡೆ ಎಲ್ಲವೂ ತಮ್ಮದೇ ಆದ ವಿಶಿಷ್ಟ ರೂಪದಲ್ಲಿ ಪ್ರಕಟವಾಗುತ್ತಿದ್ದವು. ಒಟ್ಟಿನಲ್ಲಿ 'ಪ್ರಪಂಚ' ಸಂಪಾದಕರ ಸ್ವಭಾವ ದರ್ಶನ ಆಗಿತ್ತು. ಪುಟ್ಟಪ್ಪನವರ ಕಾರ್ಯವೈಖರಿ ವಿಚಿತ್ರವಾಗಿತ್ತು. ಮನಸ್ಸು ಮಾಡಿದರೆ ಪ್ರಪಂಚದ ಮೂರೂ ಅಂಕಣಗಳನ್ನು ಒಂದು ಗಂಟೆಯಲ್ಲಿ ಬರೆದು ಮುಗಿಸುತ್ತಿದ್ದರೆ, ಯಾರಾದರೂ ಸ್ನೇಹಿತರು ಬಂದರೆ ಏನೂ ಕೆಲಸವಿಲ್ಲದವರ ಹಾಗೆ ಹರಟೆ ಹೊಡೆಯುತ್ತ ಕುಳಿತು ಬಿಡುತ್ತಿದ್ದರು. ಆದರೆ ಮಧ್ಯರಾತ್ರಿಯಾದರೂ ಸರಿ, ಬರೆದುಕೊಟ್ಟೇ ಹೋದಾರು ! ಪ್ರವಾಸದಲ್ಲೂ ಅವರು ಬರೆಯುತ್ತಿದ್ದರು. ತುಂಡು ಹಾಳೆಗಳಾದರೂ ಸರಿಯೇ ಬಸ್ಸಿನಲ್ಲಿ, ಟ್ರೇನಿನಲ್ಲಿ ಎಲ್ಲೇ ಹೊರಟಿರಲಿ ಸಲೀಸಾಗಿ ಬರೆಯುತ್ತಿದ್ದರು. ಬರೆಯಲು ಕುಳಿತರೆ ಮುಗಿಸಿಯೇ ಎದ್ದಾರು ! ಓದುವಾಗ ಅವರದು ಏಕಾಗ್ರಚಿತ್ತ.

ಇನ್ನು ವಿಶ್ವವಾಣಿಯ ಬಗೆಗೆ ಒಂದೆರಡು ಮಾತುಗಳಲ್ಲಿ ಹೇಳಬೇಕು. ಒಂದು ಆದರ್ಶ ಪತ್ರಿಕೆಯಾಗುವ ಎಲ್ಲ ಗುಣಗಳನ್ನು ಹೊಂದಿತ್ತು. ನನಗೆ ಅದರ ಕಾರ್ಯ ನಿರ್ವಹಣೆಯಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ಪುಟ್ಟಪ್ಪನವರು ಬಾಯಿಬಿಟ್ಟು ಹೇಳದೆ ನನ್ನ ಮೇಲೆ ಹೊರಿಸಿದ್ದರು. ಅದರ ಸಂಪಾದಕೀಯ ಲೇಖಗಳು ಕಟು ಸತ್ಯವನ್ನು ಸಂಬಂಧಪಟ್ಟವರಿಗೆ ಮನವರಿಕೆ ಮಾಡಿಕೊಡುವಂತಿದ್ದವು. ಹೊಸದಾಗಿ ವೃತ್ತಿಯಲ್ಲಿ ಸೇರಲು ಬಂದವರಿಗೆ 'ವಿಶ್ವವಾಣಿ' ಒಂದು ಪಠ್ಯಕ್ರಮವಾಗಿತ್ತು.

'ರೀಡರ್ಸ ಡೈಜೆಸ್ಟ್'ನ ಪ್ರತಿರೂಪವಾಗಿದ್ದ 'ಕಸ್ತೂರಿ' ಸಹ ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಒಂದು ವಿನೂತನ ಪ್ರಯೋಗವೇ. ಮುದ್ರಿಸಲು ಅರ್ಹವಾದುದೆಲ್ಲ ಅದರಲ್ಲಿ ಮುದ್ರಣಗೊಳ್ಳುತ್ತಿದ್ದಿತು. ಆಚಾರ್ಯರೇ, ಹೇಗೆ ಏನು ಮತ್ತು ಎಷ್ಟು ಬರೆಯಬೇಕೆಂಬುದಕ್ಕೆ ಮೇಲ್ಪಂಕ್ತಿ ಹಾಕಿಕೊಡುತ್ತಿದ್ದರು. ಅವರು ರಾಶಿ ರಾಶಿ ಓದಿ ರಾಶಿ ರಾಶಿ ಬರೆದರು. ಅವರಲ್ಲಿ ಏನೆಂದರೆ ನಾಲ್ಕು ಸಂಚಿಕೆಗಳಿಗೆ ಸಾಲುವಷ್ಟು ವಿಷಯ ಸಿದ್ಧವಾಗಿರುತ್ತಿದ್ದಿತು. ನಾಟಕಕಾರನಾಗಿಯೂ ಹೆಸರು ಮಾಡಿದ್ದ ಗಂಗಾಧರ ಹೆಗಡೆಯವರನ್ನು ಅವರೇ ಇಷ್ಟಪಟ್ಟು ಆಯ್ದುಕೊಂಡಿದ್ದರು. ನಂತರ ಶ್ರೀನಿವಾಸ ಕುಲಕರ್ಣಿ ಮತ್ತು ಮಾಧವ ಮಹಿಷಿ (ಕರ್ಮವೀರ) ಅವರ ಕೈಬಲಪಡಿಸಿದರು.

'ಕಸ್ತೂರಿ'ಯಿಂದ ಅವರ ಓದುಗರು ಏನನ್ನು ನಿರೀಕ್ಷಿಸುತ್ತಾರೆ ಎಂಬುದನ್ನು ಆಚಾರ್ಯರು ಅರಿತುಕೊಂಡಿದ್ದರು. ಅವರು ಇಂಗ್ಲೀಷ, ಕನ್ನಡ, ಹಿಂದಿ, ಬಂಗಾಲಿ ಮತ್ತು ಮರಾಠಿ ಭಾಷೆಗಳ ಪ್ರಕಟನೆಗಳಿಂದ ವೈವಿಧ್ಯಪೂರ್ಣ ವಿಷಯಗಳನ್ನು ಆಯ್ದುಕೊಳ್ಳುತ್ತಿದ್ದರು. ಪ್ರಸಿದ್ಧ ಸಾಹಿತ್ಯ ಕೃತಿಗಳನ್ನು ಮತ್ತು ಬೇರೆ ಕೃತಿಗಳನ್ನು ಓದಿ ನೋಡಿ ಅವುಗಳನ್ನು ಸಂಕ್ಷೇಪಿಸಿ ಪುಸ್ತಕ ವಿಭಾಗದಲ್ಲಿ ಪ್ರಕಟಿಸುತ್ತಿದ್ದರು. ಮೂಲ ಕೃತಿಗಳನ್ನು ಓದದಿದ್ದ, ಬೇರೆ ಭಾಷೆಗಳನ್ನು ಅರಿಯದಿದ್ದ ಓದುಗರಿಗೆ ಜಾಗತಿಕಮಟ್ಟದ ಸಾಹಿತ್ಯ ದೊರಕಿಸುವ ಈ ಉದ್ದೇಶ ಬಹುಮಟ್ಟಿಗೆ ಸಫಲ ಹಾಗೂ ಸಾರ್ಥಕವಾಗಿದೆ. ಭಾಷಾಂತರವನ್ನು ಒಂದು ಕಲೆಯಾಗಿ ರೂಪಿಸಿದ ಶ್ರೇಯಸ್ಸು ಆಚಾರ್ಯರಿಗೆ ಸಲ್ಲುತ್ತದೆ. ಬೇರೆಯವರೇ ಬರೆದಿರಲಿ ಅಥವಾ ತಾವೇ ಬರೆದಿರಲಿ ಅವರೆಂದೂ ಮೊದಲ ಓದಿನಲ್ಲಿ ಅಂಥ ಲೇಖನವನ್ನು ಅನುಮೋದಿಸುತ್ತಿರಲಿಲ್ಲ. ಅದಕ್ಕೆ ಇನ್ನಷ್ಟು ಸೇರಿಸಬೇಕಾದ ವಿಷಯ ಅವರ ಸಂಗ್ರಹದಲ್ಲಿ ಇದ್ದೇ ಇರುತ್ತಿದ್ದಿತು. ಬಿಡುವು ದೊರೆತಾಗೆಲ್ಲ ಅವರು ಮಾಡುತ್ತ ಬಂದ ಕೆಲಸ ಎಂದರೆ ಹೊಸದಾದ ಏನನ್ನಾದರೂ ಓದುವುದು. ಸರಿ ಎನಿಸಿದರೆ ಅದನ್ನು 'ಕಸ್ತೂರಿ'ಗಾಗಿ ಬರೆಸಿ ಸಿದ್ಧಮಾಡಿ ಇಟ್ಟುಕೊಳ್ಳುತ್ತಿದ್ದರು. ಅವರ ಕೈಯಲ್ಲಿ ಯಾವಾಗಲೂ ನಾವು ಕಾಣುತ್ತಿದ್ದ ಪ್ರಕಟನೆಗಳೆಂದರೆ ನ್ಯಾಚರಲ್ ಜಿಯಾಗ್ರಫಿ, ರೀಡರ್ಸ್ ಡೈಜೆಸ್ಟ್, ಕಾದಂಬಿನಿ ಹಾಗೂ ಇತ್ತೀಚಿನ ಹೊಸ ಪುಸ್ತಕಗಳು. ನೂರುಪಟ್ಟು ಓದಿ ಐವತ್ತುಪಟ್ಟು ಬರೆಯುತ್ತಿದ್ದರು. ಅವರ ಗ್ರಹಣ ಶಕ್ತಿ ಅಪಾರ, ಅಂತೆಯೇ ಸ್ಮರಣ ಶಕ್ತಿಯೂ ಕೂಡ. ಅವರು ಬರೆಯಲು ಕುಳಿತರೆ ಲೆಕ್ಕಣಿಕೆಯನ್ನು ಮೇಲೆತ್ತುತ್ತಿರಲಿಲ್ಲ. ಅದು ಸರಾಗವಾಗಿ ಸಾಗುತ್ತಿದ್ದಿತು. ಪುಟ್ಟಪ್ಪ ಅವರಂತೆ ಅವರದೂ ಶುದ್ಧಬರಹ. ಒಮ್ಮೆ ಆರಂಭಿಸಿದರೆ ಮುಗಿಸಿಯೇ ಏಳತಕ್ಕವರು. ತಾವು ಓದಿದ್ದರ ಬಗ್ಗೆ ಅವರಿಗೆ ನಿಶ್ಚಿತ ಅಭಿಪ್ರಾಯ ಇರುತ್ತಿದ್ದಿತು. ಅವರದು ಅಚಲ ನಿಲುವು, ಅದನ್ನು ಬದಲಿಸಿದವರೇ ಅಲ್ಲ. ಒಂದೆರಡು ಸಲ ಚಹಕ್ಕೆ ಹೋಗಿಬಂದರೆ ಕುರ್ಚಿ ಬಿಟ್ಟು ಎದ್ದವರಲ್ಲ. ಯಾವುದೇ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿದ ಉದಾಹರಣೆಗಳಿಲ್ಲ. ಆಸಕ್ತಿ ಇದ್ದವರೊಡನೆ ಯಾವುದೇ ವಿಷಯವನ್ನು ಚರ್ಚಿಸುವ ಮುನ್ನ ಅದನ್ನು ಪೂರ್ಣ ಅರ್ಥ ಮಾಡಿಕೊಂಡು, ತಮ್ಮದೇ ಆದ ಖಚಿತ ಅಭಿಪ್ರಾಯ ರೂಪಿಸಿಕೊಂಡು ಕುಳಿತುಕೊಳ್ಳುವ ಜಾಯಮಾನ ಅವರದು. ಅರ್ಥಹೀನ ಮಾತುಗಳಿಗೆ ಆಸ್ಪದ ಕೊಟ್ಟವರಲ್ಲ.

ಆಚಾರ್ಯರಿಗೆ ಇಂಥದ್ದು ಓದಬೇಕು, ಇಂಥದನ್ನು ಓದಬಾರದು ಎಂಬ ಭಾವನೆ ಇರಲಿಲ್ಲ ಅಥವಾ 'ಕಸ್ತೂರಿ'ಗಾಗಿಯೇ ಓದುತ್ತಾರೆ ಎಂಬುದೇನೂ ಇರಲಿಲ್ಲ. ಅವರು 'ಕಸ್ತೂರಿ'ಯ ಆವಶ್ಯಕತೆಗಿಂತಲೂ ಬಹಳ ಓದಿದ್ದರು. 'ಕಸ್ತೂರಿ'ಯಲ್ಲಿ ದೇಶ ವಿದೇಶಗಳ ಪರಿಚಯ, ವಿಜ್ಞಾನ ಜಗತ್ತಿನ ವಿವಿಧ ಅಭ್ಯಾಸಪೂರ್ಣ ಲೇಖಗಳು, ಇತಿಹಾಸದ ಭೂಗೋಳದ ಪಾಠಗಳು, ಸಿನೇಮಾ, ಕ್ರೀಡೆ, ವೈವಿಧ್ಯಪೂರ್ಣ ವ್ಯಕ್ತಿ

ಚಿತ್ರಗಳು, ಸಂಸ್ಥೆಗಳ ಪರಿಚಯ, ಜೀವನದ ಅನುಭವಗಳು, ತಿಳಿಹಾಸ್ಯದ ಬುಗ್ಗೆಗಳು, ವಿಡಂಬನೆಗಳು, ಲಲಿತ ಕಲೆಗಳಿಗೆ ಸಂಬಂಧಿಸಿದ ವ್ಯಕ್ತಿಸಂಗತಿಗಳು, ಒಟ್ಟಿನಲ್ಲಿ ಬದುಕನ್ನು ಆವರಿಸಿರುವ ಎಲ್ಲ ಸಂಗತಿಗಳೂ ಸೇರಿ ಅದು ಡೈಜೆಸ್ಟ್ ಆಗುತ್ತಿದ್ದಿತು. ಓದುಗರಿಗೂ ಡೈಜೆಸ್ಟ್ ಆಗುವಂತೆ ಇರುತ್ತಿದ್ದಿತು. 'ಕಸ್ತೂರಿ'ಯ ಭಕ್ತರು ಅದರಲ್ಲಿ ಬಂದಿರುವ ಎಲ್ಲವನ್ನೂ ಓದುತ್ತಿದ್ದರು. ಈಗ ಮೊದಲಿನ ವೈವಿಧ್ಯವಾಗಲಿ, ಆಸಕ್ತಿತಣಿಸುವ ಗುಣವಾಗಲಿ 'ಕಸ್ತೂರಿ'ಯಲ್ಲಿ ಇಲ್ಲ. 'ಕಸ್ತೂರಿ' ಆವಶ್ಯಕತೆಗೆ ಅನುಗುಣವಾಗಿ ಬರೆಯುವವರು ಕಡಿಮೆ. ಮೊದಲಿನ ವಿದ್ವತ್ತಾಗಲೀ ಶ್ರೀಮಂತಿಕೆಯಾಗಲಿ ಕ್ರಮೇಣ ಕಡಿಮೆಯಾಗುತ್ತಿದೆ. ಒಂದು ಮಾತು ಈಗಿನ ಸಂಪಾದಕರು ಖಂಡಿತವಾಗಿಯೂ ಕಾರಣವಾಗಲಾರರು. ಆಚಾರ್ಯರು ಓದುಗರ ಬಳಗವನ್ನು ನಿರ್ಮಿಸಿದಂತೆ ಲೇಖಕರ ಬಳಗವನ್ನೂ ಕಟ್ಟಿದರು. ಹೊಸ ಲೇಖಕರಲ್ಲಿ ಹಿಂದಿನವರ ಮಿಂಚು ಇಲ್ಲ. ಆಚಾರ್ಯರು ತಮ್ಮ ಕಾಲದಲ್ಲಿ ಸಮರ್ಥರನ್ನು ಹುಡುಕಿ ವಿಷಯ ಕೊಟ್ಟು ಬರೆಸುತ್ತಿದ್ದರು. ಈಗ ಅಂಥ ಸಮರ್ಥರು ಕಡಿಮೆ. ಹಿಂದಿನ ಲೇಖಕರಲ್ಲಿ ಕೆಲವರು ಜೀವನ ಯಾತ್ರೆ ಮುಗಿಸಿದ್ದಾರೆ. ಬದುಕಿರುವವರಿಗೆ ಆಸ್ಥೆ ಇಲ್ಲ.

ಆಚಾರ್ಯರು ಲೇಖಕರನ್ನು ತಯಾರುಮಾಡಿದರೆ ಪುಟ್ಟಪ್ಪನವರು ಪತ್ರಕರ್ತರನ್ನು ಸಿದ್ಧಗೊಳಿಸಿದರು. ಈ ಇಬ್ಬರು ಆಚಾರ ಪುರುಷರಿಗೆ ಕೃತಜ್ಞರಾಗಿರುವ ಪತ್ರಕರ್ತರು ಮತ್ತು ಲೇಖಕರು ಇನ್ನೂ ಅವರನ್ನು ಸ್ಮರಿಸುತ್ತಾರೆ. ಪ್ರಪಂಚ ಹಾಗೂ ಕಸ್ತೂರಿ ಕನ್ನಡ ಸಾರಸ್ವತ ಲೋಕದಲ್ಲಿ ಒಂದೊಂದು ಯುಗವನ್ನೇ ಆರಂಭಿಸಿವೆ. ಪ್ರಪಂಚದ ಹಾಗೂ 'ಕಸ್ತೂರಿ'ಯ ಹಳೆಯ ಸಂಚಿಕೆಗಳು ಯಾವ ಕಾಲಕ್ಕೂ ಸಾಂದರ್ಭಿಕ ಎನಿಸುವ ವಿಶ್ವಕೋಶದಂತೆ ಇದೆ. ಆದರೆ ಅವುಗಳನ್ನು ಉಪಯೋಗಿಸಿಕೊಳ್ಳುವವರು ಎಲ್ಲಿದ್ದಾರೆ ? ಅವುಗಳಲ್ಲಿ ಪಾಪು–ಪಾವೆಂ ಅವರ ಅಧ್ಯಯನಾನುಭವ, ಬದುಕನ್ನು ಹಸನಗೊಳಿಸುವ ಹದವಿದೆ. ಪುಟ್ಟಪ್ಪನವರ ಒಂದು ವಿಶೇಷ ಎಂದರೆ ತಮ್ಮ ಶಿಷ್ಯರ ಬಗೆಗೂ ಬರೆದ ಉದಾರಿ ಅವರು. 'ಪ್ರಪಂಚ' ಸಾರ್ವಜನಿಕರ ಮೇಲೆ ಪ್ರಭಾವ ಬೀರಿದರೆ 'ಕಸ್ತೂರಿ' ಬುದ್ಧಿಜೀವಿಗಳನ್ನು ಕೆಣಕಿದೆ, ಅವರಲ್ಲಿ ಮಿಂಚಿನ ಸಂಚಾರ ಉಂಟುಮಾಡಿದೆ.

ಪುಟ್ಟಪ್ಪನವರು ಜನಪರ ಹೋರಾಟಗಾರರು; ಆಚಾರ್ಯರು ಅಂಥ ಎಲ್ಲ ಹೋರಾಟಗಳ ಇತಿಹಾಸಕಾರರು ಮತ್ತು ವಿಶ್ಲೇಷಣಕಾರರು. ದೇಶ ಎದುರಿಸಿ, ಬಳಲಿದ ಐವತ್ತು ವರ್ಷಗಳ ಹಿಂದಿನ ಸಮಸ್ಯೆಗಳನ್ನು ಅವರು ದಾಖಲಿಸಿದ್ದಾರೆ. ಅವುಗಳಲ್ಲಿ ಅನೇಕ ಸಂಗತಿಗಳು ಇಂದಿಗೂ ಸಾಂದರ್ಭಿಕ. ಹಿಮದುಂಡೆಯಂತೆ ದಶಕಗಳ ಕಾಲ ಬೆಳೆಯುತ್ತ ಬೆಳೆಯುತ್ತ ಇಂದಿಗೂ, ಘೋರ ಪರಿಣಾಮ ಬೀರುವಂಥ ಕಗ್ಗಂಟುಗಳಾಗಿವೆ. ಭಾಷಾವಾರು ಪ್ರಾಂತಗಳ ಕಲ್ಪನೆ ಚಿಗುರಿದ್ದು ಆಂಧ್ರದಲ್ಲಿ ಎಂಬುದು ಎಷ್ಟು ಜನರಿಗೆ, ಅಷ್ಟೇ ಏಕೆ, ಎಷ್ಟು ಮಂದಿ ಅಭ್ಯಾಸಿಗಳಿಗೆ ಗೊತ್ತಿದೆ ? ಅಥವಾ ಅಂಥವರ ನೆನಪಿನಲ್ಲಿ ಉಳಿದಿದೆ. ೧೯೧೧ ರಷ್ಟು ಹಿಂದೆಯೇ ಪ್ರತ್ಯೇಕ ತೆಲುಗು ಭಾಷಾ ಪ್ರಾಂತದ ಬೇಡಿಕೆ ಕೇಳಿಬಂದಿತು. ಅದರಲ್ಲಿಯೇ ಇಂದು ಉಲ್ಬಣಗೊಂಡಿರುವ ತೆಲಂಗಾಣ ಬೇಡಿಕೆಯ

ಬೀಜಗಳಿವೆ ಎಂಬುದನ್ನು ಆಚಾರ್ಯರು ನಾಲ್ಕು ದಶಕಗಳ ಹಿಂದೆ, 'ಕಸ್ತೂರಿ'ಯಲ್ಲಿ ಬರೆದ ತಮ್ಮ ಲೇಖದಲ್ಲಿ ಎತ್ತಿ ತೋರಿಸಿದ್ದಾರೆ. ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ಚಿಗುರೊಡೆದು ಬಂದ ಇಂದಿಗೂ ಬಗೆಹರಿಯದ ಕರ್ನಾಟಕ-ಮಹಾರಾಷ್ಟ್ರ ಗಡಿ ತಂಟೆಯ ಇತಿಹಾಸವನ್ನು ಅವರು ೧೯೭೩ರಲ್ಲಿಯೇ ಬರೆದು ಅದರ ಹಿನ್ನೆಲೆಯ ಅರಿವನ್ನು ಓದುಗರಿಗೆ ಮಾಡಿಕೊಟ್ಟಿದ್ದಾರೆ. ನ್ಯಾಯಾಂಗ ಕಾರ್ಯಾಂಗಗಳ ನಡುವಿನ ತಿಕ್ಕಾಟದ ಮೇಲೆ ೩೮ ವರ್ಷಗಳಷ್ಟು ಹಿಂದೆಯೇ ಬೆಳಕು ಚೆಲ್ಲಿದ್ದಾರೆ. ಭಾರತದ ನೆರೆ-ಹೊರೆ ಲೇಖನದಲ್ಲಿ ಭಾರತ - ಪಾಕಿಸ್ತಾನ ತಂಟೆ, ಚೀನದ ಧೂರ್ತ ವಿದೇಶ ನೀತಿ, ಅದರ ಆಕ್ರಮಣಶೀಲ ಪ್ರವೃತ್ತಿಯನ್ನು ೧೯೭೦ರಲ್ಲಿ ಕೂಲಂಕಷವಾಗಿ ಪರಿಶೀಲಿಸಿದ್ದಾರೆ. ಕಾಶ್ಮೀರದಲ್ಲಿ ನಾವೇಕೆ ಹೋರಾಡುತ್ತಿದ್ದೇವೆ ಎಂಬ ಪ್ರಶ್ನೆಗೆ ಆಚಾರ್ಯರು ೧೯೭೫ರಷ್ಟು ಹಿಂದೆಯೇ ಉತ್ತರ ಕೊಟ್ಟಿದ್ದಾರೆ. ಹಿಂದು-ಮುಸಲ್ಮಾನ ವೈಮನಸ್ಸು ಬೇರೆ ಬೇರೆ ಪಕ್ಷಗಳಿಗೆ ರಾಜಕೀಯ ಅಸ್ತ್ರವಾಗಿ ಚುನಾವಣೆಗಳಲ್ಲಿ ಬಳಕೆಯಾಗುತ್ತಿದ್ದುದನ್ನು ಅವರು ಬಹಳ ಹಿಂದೆಯೇ ಮನವರಿಕೆ ಮಾಡಿಕೊಟ್ಟಿದ್ದಾರೆ. ಹಿಂದಿಯ ಬಗ್ಗೆ ಗೊಂದಲ ಏಕೆ ಎನ್ನುವುದನ್ನು ೧೯೭೫ರಷ್ಟು ಹಿಂದೆಯೇ ವಿಶ್ಲೇಷಿಸಿ ಓದುಗರಿಗೆ ಉಪಕಾರ ಮಾಡಿದ್ದಾರೆ.

ಬೆಲೆ ಏರಿಕೆ ಹೇಗೆ ಅಧಃಪತನಕ್ಕೆ ಕಾರಣವಾಗುತ್ತಿದೆ ಎಂಬುದನ್ನು ಓದುಗರ ಗಮನಕ್ಕೆ ತಂದು ದೇಶದ ಅರ್ಥವ್ಯವಸ್ಥೆಯ ಮೇಲೆ ಅದು ಮಾಡುತ್ತಿರುವ ಪರಿಣಾಮವನ್ನು ಅವರು ವೈಜ್ಞಾನಿಕವಾಗಿ ವಿವರಿಸಿದ್ದು ೧೯೭೪ರಲ್ಲಿ . ರಾಜಕಾರಣವು ಒಂದು ವೃತ್ತಿ ಏಕಾಗಬಾರದು ಎಂಬುದಕ್ಕೆ ಅವರು ಕೊಟ್ಟ ಕಾರಣಗಳನ್ನು ಇಂದಿಗೂ ನಾವು ವಿವೇಚಿಸಬೇಕಾಗಿದೆ. ಭ್ರಷ್ಟಾಚಾರದ ವಿವಿಧ ಮುಖಗಳನ್ನು ಕುರಿತು ಅವರಂತೆ, ವಾಸ್ತವಿಕ ಹಿನ್ನೆಲೆಯಲ್ಲಿ ದೀರ್ಘವಾಗಿ ಚರ್ಚಿಸಿದವರು ಬೇರೆ ಯಾರಾದರೂ ಇದ್ದಿರಬಹುದೇ ಎಂದು ಪ್ರಶ್ನಿಸಬೇಕಾಗುತ್ತದೆ. ಭ್ರಷ್ಟಾಚಾರ ಸ್ವಾಭಾವಿಕ ದೌರ್ಬಲ್ಯ ಎಂಬುದನ್ನು ತೋರಿಸಿಕೊಟ್ಟ ಆಚಾರ್ಯರು ಭ್ರಷ್ಟಾಚಾರ ಕೊಡತಕ್ಕೊಳ್ಳುವ ವ್ಯವಹಾರ ಆಗಿರುವುದರಿಂದ ಅದಕ್ಕೆ ಒಂದು ಆಚಾರ ಸಂಹಿತೆ ಬೇಕು ಎಂದು ಛೇಡಿಸಿದ್ದಾರೆ. ಚಾಣಕ್ಯನ ಕಾಲದಲ್ಲೂ ಭ್ರಷ್ಟಾಚಾರ ಇದ್ದಿತೆಂದರೆ ಯಾರಿಗಾದರೂ ಆಶ್ಚರ್ಯವಾಗಬೇಕು.

ಆಚಾರ್ಯರು ಇಂಥ ಅನೇಕ ಪ್ರಶ್ನೆಗಳನ್ನು ಎತ್ತಿ ಅಂದು ಬರೆದ ಸಂಗತಿಗಳು ಇಂದಿಗೂ ಸಾಂದರ್ಭಿಕ ಅಷ್ಟೇ ಅಲ್ಲ, ಅವುಗಳು ಜಟಿಲ ಪ್ರಶ್ನೆಗಳಾಗಿ ದೇಶವನ್ನು ಕಾಡುತ್ತವೆ ಎಂಬುದು ಆಚಾರ್ಯರ ಆ ಕಾಲದ ಚಿಂತನೆಗೆ ಸಾಕ್ಷಿ. ಪುಟ್ಟಪ್ಪನವರೂ ಇಂಥ ಅನೇಕ ಪ್ರಶ್ನೆಗಳನ್ನು ಎತ್ತಿಕೊಂಡು ಬರೆದಿದ್ದಾರೆ. ಆದರೆ ವೈಖರಿಯಲ್ಲಿ ಪಾಪು ವ್ಯಾಖ್ಯಾನಕಾರರಾದರೆ ಪಾವೆಂ ವಿಶ್ಲೇಷಕರು.

ಜಗತ್ತಿನಲ್ಲಿ ಜರುಗಿದ ಆಶ್ಚರ್ಯಕರ ಘಟನೆಗಳ ಬಗ್ಗೆ ಆಚಾರ್ಯರ ಆಸಕ್ತಿ ಅಪಾರ. ಅಂಥ ಘಟನೆಗಳನ್ನು 'ಕಸ್ತೂರಿ'ಯಲ್ಲಿ ಪ್ರಕಟಿಸಬೇಕೆಂದು ಅವರು ಆರಂಭದಿಂದ ಯೋಚಿಸುತ್ತ ಬಂದವರು. ಪ್ರತಿಯೊಂದು ಸಂಚಿಕೆಯಲ್ಲಿ ಅಂಥ ಒಂದೆರಡು ಘಟನೆಗಳನ್ನು ಕೊಡುತ್ತ ಬಂದರು. ಈ ಘಟನೆಗಳೇನೋ ವಿಸ್ಮಯಕರ. ಇನ್ನೂ ಹೆಚ್ಚು ವಿಸ್ಮಯಕರ ಸಂಗತಿ ಎಂದರೆ ಆಚಾರ್ಯರು ಅವುಗಳನ್ನು ಎಲ್ಲಿಂದ ಹುಡುಕಿ ತಂದರೆಂಬುದು. ಈ ಲೇಖನಗಳ ರಂಜನೆ ಮತ್ತು ಕೌತುಕಗಳಿಂದಾಗಿ ಓದು ರಮ್ಯ ಎನಿಸಿದ್ದು ಸಹಜವೇ. 'ಕಸ್ತೂರಿ'ಯ ವಿಷಯ ಸಂಗ್ರಹದ ಹರವು ಬಹು ದೊಡ್ಡದು. ಸೈಪ್ರಸ್ ದೇಶದ ಮದುವೆ ಪದ್ಧತಿಯ ಬಗೆಗೆ ಬರೆದಿರುವಷ್ಟೇ ಸಲೀಸಾಗಿ ಮೊಹೆಂಜೋದಾರೋದ ಸತ್ತವರ ದಿಬ್ಬದ ಬಗ್ಗೆ ಬರೆದಿದ್ದಾರೆ. ಗ್ರೀನವಿಚ್ ಕಾಲಮಾನ ಪದ್ಧತಿ, ಕ್ರೂಗರ್ ಎಂಬವನ ನಯವಂಚಕತನ, ಮೆಡಿಕಲ್ ಕಾಲೇಜುಗಳಿಗೆ ಹೆಣ ಒದಗಿಸುವ ಭಂಡರು. ಪೇಚಿನಲ್ಲಿ ಸಿಲುಕಿದ ಸಮಾಜ ಸುಧಾರಕರು, ಪ್ರೇಮಿಯನ್ನು ಕೊಂದ ಪ್ರಣಯಿನಿಗಳು, ಸುಳ್ಳು ನೋಟಿನ ಸರದಾರರು, ವಿಶ್ವ ಪರ್ಯಟನ ಮಾಡಲು ಹೊರಟ ಧೀರರು, ಕೊಡುಗೈ ದೊರೆಗಳು, ನದಿಯ ಮೂಲ ಶೋಧಿಸಲು ಹೊರಟ ಸಾಹಸಿಗರು, ಹಿಮಶಿಖರದ ಜರೆತ, ಜ್ವಾಲಾಮುಖಿಯ ಮಾರುತಗಳು ಹೀಗಿತ್ತು ಅವರ ಜ್ಞಾನಸಂಪನ್ನ ವೈವಿಧ್ಯಮಯ ಬರವಣಿಗೆ.

ಕಳೆದ ದಶಕದಲ್ಲಿ ಚಲನಚಿತ್ರವಾಗಿ ಗಲ್ಲಾಪೆಟ್ಟಿಗೆಯಲ್ಲಿ ಕೊಳ್ಳೆ ಹೊಡೆದ ಟೈಟಾನಿಕ್ ಹಡಗಿನ ದುರಂತದ ಬಗ್ಗೆ ಆಚಾರ್ಯರು ೯೬೦ರಷ್ಟು ಹಿಂದೆಯೇ ಬರೆದಿದ್ದರು. ಬಾವಲಿಗಳಿಗೆ ಅವುಗಳಷ್ಟೇ ತೂಕದ ಸಿಡಿಬಾಂಬುಗಳನ್ನು ಕಟ್ಟಿ ಟೋಕ್ಯೊ ನಗರವನ್ನು ಭಸ್ಮಗೊಳಿಸಬೇಕೆಂದುಕೊಂಡಿದ್ದ ಅಮೇರಿಕೆಯ ಡಾ|| ಅಡಾಮ್ಸ್‌ನಿಗೆ ಹೇಗೆ ತಿರುಗೇಟು ಬಿದ್ದಿತೆಂಬ ಲೇಖನ ತುಂಬ ರೋಚಕ ಹಾಗೂ ರೋಮಾಂಚಕ. ಸೇನಾ ಪಡೆಯವರು ಎಸಗಿದ ತಾಂತ್ರಿಕ ದೋಷದಿಂದ ಬಾವಲಿಬಾಂಬ್‌ಗಳು ಅಮೇರಿಕೆಯ ಒಂದು ಪಟ್ಟಣವನ್ನು ನಾಶ ಮಾಡಿದವು. ಇಂಥ ಒಂದು ಲೇಖ ಬೇರೆಯಾವ ಕನ್ನಡ ಪತ್ರಿಕೆಯಲ್ಲಿ ಬಂದಿದೆಯೋ ನಾನರಿಯೆ. ಅದೇ ರೀತಿ ಜಗತ್ತಿನ ಪ್ರಸಿದ್ಧ ವ್ಯಕ್ತಿಗಳನ್ನು ಕುರಿತು ಚಿತ್ರವಿಚಿತ್ರ ಘಟನೆಗಳನ್ನು ವಿಡಂಬನೆಯಲ್ಲಿ ಲಾಂಗುಲಾಚಾರ್ಯರು ಉಪಯೋಗಿಸಿಕೊಂಡಿದ್ದರು. ಪ್ರತಿಯೊಂದು ಸಂಚಿಕೆಯಲ್ಲಿ ವಿಜ್ಞಾನ ವಿಷಯಕ ಲೇಖ ಬರಬೇಕೆಂಬುದು ಅವರ ಮನಿಷೆಯಾಗಿತ್ತು. ಆದರೆ ೫೦ ವರ್ಷಗಳ ಹಿಂದೆ ಬರೆಯುವವರು ಎಲ್ಲಿದ್ದರು ? ತಾವೇ ಮುಂದಾಗಿ ಅಂಥ ಸಾಹಸವನ್ನು ಕೈಕೊಂಡರು. ಮಾಧ್ಯಮಿಕ ಶಾಲೆಯಲ್ಲಿ ತಾವು ಓದಿದ ವಿಜ್ಞಾನ ವಿಷಯ ತೀರ ಪ್ರಾಥಮಿಕ ಸ್ವರೂಪದ್ದು. ಗಹನವಾದ ಸಂಗತಿಗಳನ್ನು ಕನ್ನಡದಲ್ಲಿ ಸಾಮಾನ್ಯರಿಗೂ ತಿಳಿಯುವಂತೆ ಸ್ಪಷ್ಟವಾಗಿ ಬರೆಯುವುದು ಸುಲಭದ ಕೆಲಸವಾಗಿರಲಿಲ್ಲ. ಬರೆದರೆ ಅದಕ್ಕೆ ಪೂರ್ಣತೆ ಪ್ರಾಪ್ತವಾಗಬೇಕೆಂದು ಆಚಾರ್ಯರು ತಾವು ಓದಿದ್ದನ್ನು ಅದರಲ್ಲಿ ಅರ್ಥವಾಗದಿದ್ದುದನ್ನು

ವಿಶ್ವವಿದ್ಯಾಲಯಕ್ಕೆ ಹೋಗಿ ಚರ್ಚಿಸಿ ತಪ್ಪಾಗದ ಹಾಗೆ ಎಚ್ಚರಿಕೆ ವಹಿಸುತ್ತಿದ್ದರು. ಕೆಲವರು ವಿಜ್ಞಾನ ಲೇಖಕರನ್ನು ಅವರೇ ತಯಾರು ಮಾಡಿದರು. ಅದರಲ್ಲಿ ಜಿ. ಟಿ. ನಾರಾಯಣರಾವ್ ಹಾಗೂ ರಾಜಶೇಖರ ಭೂಸನೂರಮಠ ಮುಖ್ಯರು.

ಆಚಾರ್ಯರು ಬಹುಮುಖ ಪ್ರತಿಭೆಯುಳ್ಳ ಅಪರೂಪದ ಲೇಖಕರಾಗಿದ್ದರೂ ಅವರಿಗೆ ಕೀರ್ತಿ ತಂದದ್ದು ಮತ್ತು ಅವರ ವ್ಯಕ್ತಿತ್ವ ಗಟ್ಟಿಗೊಳಿಸಿದ್ದು 'ಕಸ್ತೂರಿ'. ಆದರೆ ಅವರಿಗೆ 'ಕಸ್ತೂರಿ'ಯ ಕೆಲಸ ಅಷ್ಟೊಂದು ತೃಪ್ತಿ ತಂದಿರಲಿಲ್ಲ ಎಂದು ಹೇಳಿದರೆ ಯಾರಿಗಾದರೂ ಆಶ್ಚರ್ಯ ಆಗಬಹುದು. 'ಕಸ್ತೂರಿ'ಗಾಗಿ ಮಾಡಬೇಕಾಗಿದ್ದ ಅಪಾರವಾದ ಓದಿನ ದೆಸೆಯಿಂದ ನನ್ನ ಸಾಹಿತ್ಯ ವ್ಯಾಸಂಗವೂ ಸಾಹಿತ್ಯ ರಚನೆಯೂ ಮೂಲೆಗುಂಪಾದವು ಎಂದು ಅವರು ಹೇಳುತ್ತಿದ್ದರು. ಇದಕ್ಕೂ ಮೊದಲಿನ ''ಕರ್ಮವೀರ'' ಕೆಲಸ ಅವರಿಗೆ ಹೆಚ್ಚು ಖುಷಿ ಕೊಟ್ಟಿದ್ದಿತಂತೆ ''ಕರ್ಮವೀರ''ದ ಲೇಖನಾದಿ ಕೆಲಸಗಳಲ್ಲಿ ಸ್ವಂತಿಕೆ ಮತ್ತು ಸೃಜನಶೀಲತೆಗೆ ಅವಕಾಶವಿತ್ತು ಎಂದು ಅವರು ಭಾವಿಸಿದ್ದಾಗಿ ಡಾ|| ಶ್ರೀನಿವಾಸ ಹಾವನೂರ ಅವರು ತಮ್ಮ ಒಂದು ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಅವರೇ ಬರೆದಂತೆ 'ಕಸ್ತೂರಿ'ಯು ನಾಡಿನಲ್ಲಿ ಒಂದು ಹೊಸ ಪ್ರಜ್ಞಾವಂತಿಕೆಯ ಹೊಸ ಪರಂಪರೆಯನ್ನು ಆರಂಭಿಸಿತು. ಕನ್ನಡದ ಗದ್ಯಕ್ಕೆ ಸುಭಗತೆಯನ್ನು ತಂದುಕೊಟ್ಟಿತು. ಆಚಾರ್ಯರು ಗದ್ಯವನ್ನು ತಿದ್ದಿ–ತೀಡಿ ರಾಜಮಾರ್ಗದಲ್ಲಿ ಕೊಂಡೊಯ್ಯುವ ಕೆಲಸ ಮಾಡಿದವರಲ್ಲಿ ಒಬ್ಬರು. ಉತ್ತರ ಕರ್ನಾಟಕದ ಗದ್ಯ ಶೈಲಿಯನ್ನು ಸಾರ್ವತ್ರಿಕವಾದ ಶಿಷ್ಟ ಕನ್ನಡಕ್ಕೆ ಪರಿವರ್ತಿಸಿದಂತೆ ಆಗಿದೆ. ಕನ್ನಡದ ಗದ್ಯಕ್ಕೆ ಶೈಲಿಯನ್ನೂ ಶಿಷ್ಟತೆಯನ್ನೂ ತಂದುಕೊಟ್ಟವರಲ್ಲಿ ಪಾಟೀಲ ಪುಟ್ಟಪ್ಪನವರು ಅಗ್ರಗಣ್ಯರು. ''ಕರ್ಮವೀರ''ದ ಕೆಲಸದಿಂದ ಆಚಾರ್ಯರು ಸಂತೋಷಪಟ್ಟು ಕೊಂಡಿದ್ದು ಸಹಜವೇ ಆಗಿದೆ. ವಾರಪತ್ರಿಕೆಯ ಕೆಲಸದಲ್ಲಿ ಸೃಜನಶೀಲತೆ ಇದೆ ಎಂಬುದನ್ನು ಪಾಟೀಲ ಪುಟ್ಟಪ್ಪನವರು ಸಿದ್ಧಮಾಡಿಕೊಟ್ಟಿದ್ದಾರೆ. ಅದರಿಂದ ಅವರೂ ಆನಂದ ಅನುಭವಿಸಿದ್ದಾರೆ. ಇಬ್ಬರಲ್ಲೂ ಸಾಮಾನ್ಯವಾಗಿರುವ ಭಾಷಾಪ್ರೌಢಿಮೆ ಸೃಜನಶೀಲತೆಗೆ ಒತ್ತುಕೊಡುವಂಥದ್ದು. ಅವರ ಭಾಷೆಯಲ್ಲಿ ದೇಸೀತನದ ಸೊಗಡು ಇದ್ದರೆ ಆಚಾರ್ಯರ ಬರಹದಲ್ಲಿ ಭಾಷೆಯ ಗತ್ತು ಇದ್ದಿತು.

ಆಚಾರ್ಯರ ಮೂಲಪ್ರಜ್ಞೆ ಓರ್ವ ಕವಿಯದು. ಅವರ ಶಬ್ದಾಸಕ್ತಿ ಮತ್ತು ಪರಿಣತಿ ಅವರ ಸಾಹಿತ್ಯ ರಚನೆಗೆ ಪರಿಣಾಮಕಾರಿಯಾಗಿದ್ದ ಪರಿಕರಗಳು. ಅವರು ಸುಭಾಷಿತಗಳನ್ನು ಕೂಡ ಕನ್ನಡಕ್ಕೆ ಮೂಲಕ್ಕಿಂತ ಕಡಿಮೆ ಶಬ್ದಗಳಲ್ಲಿ ಅನುವಾದಿಸಿದ್ದಾರೆ. ಮನಸ್ಸಿಗೆ ಕಚಗುಳಿ ಇಡುವಂಥ ಸುಮಾರು ೪೦೦ ಸುಭಾಷಿತಗಳನ್ನು ಅವರು ಕನ್ನಡಕ್ಕೆ ಭಟ್ಟಿ ಇಳಿಸಿದ್ದಾರೆ. ಕೇಂದ್ರ ಸಾಹಿತ್ಯ ಅಕ್ಯಾಡಮಿಯು ಹೊರತಂದ ಒಂದು ಪ್ರಾತಿನಿಧಿ ಸಂಗ್ರಹದಲ್ಲಿ ಅವರ ಒಂದು ಕವಿತೆ ಪ್ರಕಟವಾಗಿದೆ. ಅದನ್ನು ಅವರೇ ಹಿಂದಿಗೆ ಭಾಷಾಂತರಿಸಿ ಕೊಟ್ಟಿದ್ದಾರೆ. ಅದು ಇಲ್ಲಿದೆ:

ಪ್ರತಿಯೊಬ್ಬ ಗೋಪಿಯೂ
ಏಕಾಂತದಲ್ಲಿ
ಸೀರೆಯನು ಬಿಚ್ಚಿಟ್ಟು
ಇಳಿಯುವಳು ಕಾಳಿಂದಿಯಲ್ಲಿ
ಕ್ಷಣಕ್ಕೊಮ್ಮೆ ಹಾರುವುದು
ದಡದ ಕದಂಬದತ್ತ
ದೃಷ್ಟಿ ಪಕ್ಷಿ
ಯಾವ ಗೋಪಾಲ ಯ್ಯಾವಾಗ ಬರುವನೋ ಎಂದು
ಬೆಚ್ಚಿ ಬೆಚ್ಚಿ
ಆದರೂ
ತೋರ ಮೊಲೆಗಳ ಮೇಲೆ
ನೀರಮಣಿಗಳ ಮಾಲೆ
ಮಿನುಗಿಸುತ ಮೇಲೆ ಬಂದು
ಸೀರೆ ಕುಪ್ಪಸವ ಇದ್ದಲ್ಲೇ ಕಂಡು
ಸೂಸುವಳು ತನಗೂ ಕೇಳಿಸದಂತೆ
ನಸು ನಿರಾಸೆಯ ನಿಟ್ಟುಸಿರನೊಂದು

ಆಚಾರ್ಯರು ಬೇರೆ ಏನನ್ನೂ ಮಾಡಿರದೆ ಇದ್ದರೆ ಅವರೊಬ್ಬ ರಾಷ್ಟ್ರಮಟ್ಟದ ಕವಿಯಾಗಿ ರೂಪುಗೊಳ್ಳುತ್ತಿದ್ದರೇನೋ ! ಕೃಷ್ಣ ಬರಲಿಲ್ಲ, ತನ್ನ ಸೀರೆ–ಕುಪ್ಪಸ ಕದ್ದೊಯ್ಯಲಿಲ್ಲವೆಂದು ಗೋಪಿಗಾದ ನಿರಾಸೆಯನ್ನು ತಾವೇ ಅನುಭವಿಸಿದವರಂತೆ ಅವರು ಚಿತ್ರಿಸಿದ್ದಾರೆ. ಅವರ ಸಾತ್ವಿಕ ರಸಿಕತೆ ಇಲ್ಲಿ ಎದ್ದುಕಾಣುತ್ತದೆ. ಅವರ "ಹೌಸಿಂಗ ಕಾಲನಿ" ಕವನ ಸಂಗ್ರಹ ಅವರ ಕವಿತ್ವಕ್ಕೆ, ಅದರ ಮಾಧುರ್ಯಕ್ಕೆ ಸಾಕ್ಷಿಯಾಗಿದೆ. ಸಾಹಿತ್ಯ ರಚನೆಗೆ ಕೈಹಾಕುವವರಲ್ಲಿ ಹೆಚ್ಚಿನವರು ಮೊದಲು ಬರೆಯುವುದು ಕವನಗಳನ್ನೆ ! ಪಾಟೀಲ ಪುಟ್ಟಪ್ಪನವರ ಸಾಹಿತ್ಯ ಕೃಷಿಯ ಮೊದಲನೇ ಕೃತಿ ಒಂದು ಕವನವೇ. ಇವರಿಬ್ಬರೂ ಕವಿಗಳಾಗಿಯೇ ಉಳಿದಿದ್ದರೆ, ಪತ್ರಿಕೋದ್ಯಮಕ್ಕೆ ಬಾರದೇ ಹೋಗಿದ್ದರೆ ಕನ್ನಡ ಗದ್ಯ ಶೈಲಿ ಮತ್ತು ಸತ್ವ ಎರಡರಲ್ಲೂ ಸೊರಗಿ ಹೋಗುತ್ತಿದ್ದಿತೆಂದು ಅನಿಸುತ್ತದೆ. ಆದರೂ ಆಚಾರ್ಯರು ಕವಿತ್ವವನ್ನು ಗಟ್ಟಿಗೊಳಿಸಿ ಕೊಂಡೇ ಗದ್ಯಕ್ಕೆ ಕೈ ಹಾಕಿದರು. ಹೆಂಡತಿಯ ಕಾಗದಕ್ಕೆ ಕವನದಲ್ಲಿಯೇ ಉತ್ತರಿಸಿದ ಕವಿ ಬಹುಶಃ ಅವರೊಬ್ಬರೇ ! ಅವರನ್ನು ಕವಿ ಎಂದು ಸಾಮಾನ್ಯ ಓದುಗರು ಕೊನೆಯವರೆಗೂ ಗುರುತಿಸಲಿಲ್ಲ.

■■

## ೬. ವಿದ್ವಾಂಸರು, ಪತ್ರಕರ್ತರು ಕಂಡಂತೆ

ಪಾಪು ಮತ್ತು ಪಾವೆಂ ಇಬ್ಬರೂ ಓದುಗರನ್ನು ಮಾತ್ರ ಮೆಚ್ಚಿಸಲಿಲ್ಲ. ಅವರ ಹಾಗೆ ಬೇರೆ ಯಾವ ಪತ್ರಕರ್ತರೂ ವೃತ್ತಿ ಬಾಂಧವರ ಮೆಚ್ಚುಗೆಗೆ ಪಾತ್ರರಾದ ಉದಾಹರಣೆ ಇಲ್ಲ. ಉಭಯತರನ್ನು ಮೆಚ್ಚಿಕೊಂಡ ಹಿರಿ–ಕಿರಿಯ ಪತ್ರಕರ್ತರು ಅವರನ್ನು ಗುರುಪೀಠದಲ್ಲಿ ಪ್ರತಿಷ್ಠಾಪಿಸಿ ಏಕಲವ್ಯನ ಹಾಗೆ ಕಲಿತಿದ್ದಾರೆ. ಅವರಲ್ಲಿ ಅನೇಕರು ತಮ್ಮ ಭಾವನೆಗಳನ್ನು ಶಬ್ದರೂಪಕ್ಕಿಳಿಸಿದ್ದಾರೆ. ಪಾಪು ಹಾಗೂ ಪಾವೆಂ ಅವರಿಗಿಂತ ಹಿರಿಯರಾಗಿದ್ದ ಡಿ.ವಿ. ಗುಂಡಪ್ಪನವರು ಪುಟ್ಟಪ್ಪನವರ 'ಮಿಂಚಿನಂಥ' ಬರಹವನ್ನು ಪಾವೆಂ ಅವರ ಸತ್ವಪೂರ್ಣ ಬರಹವನ್ನು ಕೊಂಡಾಡಿದ್ದಾರೆ.

ಪುಟ್ಟಪ್ಪನವರನ್ನು ಮೆಚ್ಚಿ ಗೌರವಿಸಿದವರು ಆಚಾರ್ಯರನ್ನು ಮೆಚ್ಚಿ ಗೌರವಿಸಿದ್ದಾರೆ. ಅವರು ಇವರಿಗೆ, ಇವರು ಅವರಿಗೆ ಸಾಟಿಯಾದುದರಿಂದ ಓದುಗರಿಂದ ಅಭಿಮಾನಿಗಳಿಂದ ಮತ್ತು ವೃತ್ತಿಬಾಂಧವರಿಂದ ಸನ್ಮಾನ ಗೌರವ ದೊರೆತಿದೆ. ಇಬ್ಬರೂ ಬೇರೆ ಬೇರೆ ಹಿನ್ನೆಲೆಯಿಂದ ಬೆಳೆದು ಬಂದವರು. ಪಾಪು ಅವಕಾಶಗಳನ್ನು ಕಲ್ಪಿಸಿಕೊಂಡರು; ಕೆಲವು ಅವಕಾಶಗಳು ಅವರನ್ನು ಹುಡುಕಿಕೊಂಡು ಬಂದವು. ಆಚಾರ್ಯರು ಹುಟ್ಟಿ ಬೆಳೆದ ಪರಿಸರದಲ್ಲಿ ಅವರು ಮೊದಲು ಅನ್ನದ ಬಗ್ಗೆ ಆಲೋಚಿಸಬೇಕಾಗಿತ್ತು. ಅವರು ಶೂನ್ಯದಿಂದ ಬದುಕು ಹಾಗೂ ವ್ಯಕ್ತಿತ್ವ ಕಟ್ಟಿಕೊಂಡವರು. ಪಾಪು ವಿಶಾಲ ಹಾಗೂ ವೈವಿಧ್ಯಮಯ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಭವಿಷ್ಯವನ್ನು ಬರೆದುಕೊಂಡರು. ಆಗಿನ ಕಾಲದ ಸಾರ್ವಜನಿಕ,

ರಾಜಕೀಯ ಹಾಗೂ ಸಾಹಿತ್ಯಕ್ಷೇತ್ರಗಳ ಮುಖಂಡರು ಮೆಚ್ಚುವಂತೆ ದುಡಿದರು. ಆಚಾರ್ಯರು ಬೆಳೆದಂತೆ, ಬರೆ ದಂತೆ ಅವರ ಯೋಗ್ಯತೆ ಬೆಳಕಿಗೆ ಬಂತು. ಹುಬ್ಬಳ್ಳಿಗೆ ಬಂದ ಮೇಲೆ ಅವರ ಸಂಪರ್ಕ ಹಿಗ್ಗತೊಡಗಿತು. ಪೇಜಾವರ ಶ್ರೀಗಳು, ಗೋವಿಂದ ಪೈಗಳು, ಶಿವರಾಮ ಕಾರಂತರು, ಡಾ. ಟಿ. ಮಾಧವ ಪೈ, ತೊನ್ಸೆ ಅನಂತ ಪೈ, ಎಂ. ಮಧ್ವರಾಜರು, ಕು.ಶಿ. ಹರಿದಾಸಭಟ್ಟರು, ಧಾರವಾಡದಲ್ಲಿ ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ಆಲೂರ ವೆಂಕಟರಾಯರು, ಗೀತಾ ಕುಲಕರ್ಣಿ ಅವರೊಂದಿಗೆ ಆಚಾರ್ಯರಿಗೆ ನಿಕಟ ಹಾಗೂ ಸ್ನೇಹಪರ ಸಂಬಂಧವಿತ್ತು. ಕು.ಶಿ. ಅವರಂತೂ ಸಂಬಂಧಿಕರು, ಅವರಿಗೆ ಪಾಠ ಹೇಳಿದ್ದೂ ಇದೆ. ಪಾಪು ಅವರಿಗೆ ಕೂಡ ಇವರಲ್ಲಿ ಅನೇಕರೊಡನೆ ಸಂಪರ್ಕ ಇತ್ತು. ಅವರು ಮಾಡಿದಂತೆ ಚಳವಳಿ, ಹೋರಾಟ, ಸಾರ್ವಜನಿಕ ಭಾಷಣ ಮೊದಲಾದವುಗಳಿಂದ ಆಚಾರ್ಯರು ದೂರವೇ ಇದ್ದರು. ಆದುದರಿಂದ ಅಂತಮುರ್ಖಿಗಳಾದ ಅವರಿಗೆ ಹೊರಗಿನ ಸಂಪರ್ಕ ಹೆಚ್ಚಾಗಿ ಬರಲಿಲ್ಲ, ಆದರೆ ಚಳವಳಿ, ಹೋರಾಟ, ಏಕೀಕರಣ, ಸ್ವಾತಂತ್ರ್ಯ ಹೊರಾಟಗಳಿಂದ ಅವರು ವಿಮುಖರಾಗಿದ್ದರೆಂದು ಇದರ ಅರ್ಥವಲ್ಲ. ಅವುಗಳ ಅಭ್ಯಾಸದಿಂದ ಲೇಖನಗಳನ್ನು, ವಿಶ್ಲೇಷಣೆಗಳನ್ನು ಬರೆದರು. ಅವರು ಪ್ರತ್ಯಕ್ಷದಲ್ಲಿ ಭಾಗವಹಿಸದಿದ್ದರೂ ರಾಜಕೀಯವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಪುಟ್ಟಪ್ಪನವರ ಪ್ರತ್ಯಕ್ಷ ಪಾಲುಗೊಳ್ಳುವಿಕೆ ಮುಂದೆ ಪ್ರಪಂಚದ ಬಂಡವಾಳವಾಯಿತು. ಧುರೀಣರಲ್ಲಿ ಯಾರು ಹೇಗೆ ಎಂಬುದನ್ನವರು ಚೆನ್ನಾಗಿ ಅರಿತುಕೊಂಡಿದ್ದರು.

ಇನ್ನು ಪತ್ರಕರ್ತರು–ಸಮಕಾಲೀನರು ಮತ್ತು ಕಿರಿಯರು ಅವರ ಬಗ್ಗೆ ಏನು ಹೇಳಿದ್ದಾರೆ ಎಂಬುದನ್ನು ನೋಡೋಣ. ಮೊದಲು ಪಾಪು ಬಗೆಗೆ.

ಖಾದ್ರಿ ಶಾಮಣ್ಣ: "ಪುಟ್ಟಪ್ಪ ಒಬ್ಬ ಪರಿಪೂರ್ಣ ಪತ್ರಕರ್ತರು. ಅರ್ಹತೆ ಉಂಟು. ಅನುಭವಕ್ಕೆ ಅಭಾವ ಇಲ್ಲ. ಸ್ಫೂರ್ತಿ ಆವೇಶ ತುಂಬಿಕೊಂಡಿದ್ದಾರೆ. ಕಳಕಳಿಯ ಪತ್ರಿಕಾ ವೃತ್ತಿ ಒಂದು ಸಾಹಸವೇ ಆಗಿದೆ. ಸುದೀರ್ಘ ಕಾಲ ಪತ್ರಿಕಾವೃತ್ತಿಯನ್ನು ನಡೆಸಿಕೊಂಡು ಬಂದವರು ಅನೇಕರು. ಅವರಲ್ಲಿ ಎಷ್ಟೋಮಂದಿ ನಿಂತ ನೀರು, ಪುಟ್ಟಪ್ಪ ಹಾಗಲ್ಲ. ಭೋರ್ಗರೆಯುತ್ತ ಹರಿಯುವ ಪ್ರಚಂಡ ಪ್ರವಾಹ ಇದ್ದಂತೆ. ವಿಚಾರಗಳಂತೂ ದಭೆ ದಭೆ."

ಎಚ್ಚೆಸ್ ಕೃಷ್ಣಸ್ವಾಮಿ : "ಪಾಪುವಿನ ಪತ್ರಿಕೋದ್ಯಮ ಏಕಾಂಗ ಸಾಹಸ. ಅವರಿಗೆ ಅವರೇ ಸೇವಕ, ಅವರೇ ಯಜಮಾನ. ತಮಗೆ ತೋಚಿದ್ದನ್ನು ನಿರ್ಭಯವಾಗಿ ಬರೆಯುವುದು ಅವರ ಜಾಯಮಾನ. ಅದಕ್ಕೆ ತಕ್ಕ ಚುರುಕಿನ ಗದ್ಯ, ಹಾಸ್ಯ, ವ್ಯಂಗ್ಯ ಟೀಕೆ, ಕ್ರೋಧ, ವೈಚಾರಿಕತೆ, ಬಂಡಾಯ, ಕಾಂತದರ್ಶನ ಎಲ್ಲವೂ ಪೂರ. ತನಗೆ ಸರಿಯೆನಿಸಿದ್ದನ್ನು ಹೇಳುವಾಗ ಅವರು ಯಾರ ಮುಲಾಜನ್ನೂ ನೋಡುವುದಿಲ್ಲ. ಅವರ

ಮಾತನ್ನು ನೀವು ಒಪ್ಪಬಹುದು, ಒಪ್ಪದಿರಬಹುದು. ಆದರೆ ಅದರಲ್ಲಿ ಲವಲೇಶವೂ ಕಿಲುಬಿಲ್ಲ.

"ಪಾಟೀಲ ಪುಟ್ಟಪ್ಪ ಗುಂಪುಕಟ್ಟುವವರಲ್ಲ. ಗುಂಪೇ ಅವರಿಗೆ ಬೇಕಾಗಿಲ್ಲ. ಏಕೆಂದರೆ ಅವರೇ ಒಂದು ಗುಂಪು. ಪಾಪು ಹಲವು ಕಾಳಗಗಳ ಸುಳಿ. ಕರ್ನಾಟಕ ಏಕೀಕರಣ, ಪ್ರಗತಿಶೀಲ ಚಳವಳಿ ಎಲ್ಲಕ್ಕೂ ಅವರು ಹೋರಾಡಿದವರು."

ದಿ. ಸುರೇಂದ್ರ ದಾನಿ : "ಪಾಟೀಲ ಪುಟ್ಟಪ್ಪವರು ಕರ್ನಾಟಕ ಪತ್ರಿಕಾ ಪ್ರಪಂಚದ ಉಜ್ವಲ ತಾರೆ; ಸ್ವಯಂ ಪ್ರಕಾಶಿಸುವ ಶಕ್ತಿಯನ್ನು ಹೊಂದಿದ್ದ ತಾರೆ. ಪುಟ್ಟಪ್ಪನವರು ತಮ್ಮ ಲೇಖನ ಶೈಲಿ, ಬರಹದ ಬಿನ್ನಾಣ, ವ್ಯಕ್ತಿಚಿತ್ರ, ನಿರೂಪಣೆಯ ವೈಶಿಷ್ಟ್ಯ ಮತ್ತು ಶೀರ್ಷಿಕೆಗಳ ಮೋಡಿಯಿಂದ ವಾಚಕ ವರ್ಗವನ್ನೂ ಸಂಮ್ಮೋಹ ಗೊಳಿಸಿದವರು. ಅವರು 'ಪ್ರಪಂಚ' ಆರಂಭಿಸಿದಾಗ ಕನ್ನಡ ಪತ್ರಿಕಾರಂಗದಲ್ಲಿ ಅವರು ಪರಮಾಣು ಸ್ಫೋಟವನ್ನೇ ನಡೆಸಿದರೇನೋ ಅನ್ನಿಸಿತು."

ದಿ. ಸಂತೋಷಕುಮಾರ ಗುಲ್ವಾಡಿ : "ಪಾಪು ಅವರ 'ಪ್ರಪಂಚ' ನನ್ನ ಪ್ರಯೋಗಶಾಲೆ. ಅದರಲ್ಲಿ ಪ್ರಕಟವಾದ ಒಂದೊಂದು ಲೇಖನವೂ ಪತ್ರಿಕೋದ್ಯಮದಲ್ಲಿ ನನಗೆ ಪಾಠ ಕಲಿಸಿತು. ಪಾಪು ಮತ್ತು 'ಪ್ರಪಂಚ' ನನಗೆ ಪರೋಕ್ಷ-ಪ್ರತ್ಯಕ್ಷಗುರು."

ಶಿವಾನಂದ ಜೋಶಿ : "ಒಬ್ಬ ನಿಷ್ಠಾವಂತ ಪತ್ರಕರ್ತ ಸಮಾಜದ ಶಿಕ್ಷಕನಾಗಬಲ್ಲ. ಅವನ ಹೊಣೆ ಆರು ತಾಸುಗಳಿಗೆ, ವೇತನ ಮಂಡಳಿ ನಿಗದಿಪಡಿಸಿದ ವೇತನಕ್ಕೆ ಸೀಮಿತವಲ್ಲ. ನಿರಂತರ ಚಿಂತನಶೀಲನಾದ ಪತ್ರಕರ್ತನಿಗೆ ನಿವೃತ್ತಿ ಎಂಬುದು ಇಲ್ಲ. ಬೇಕಾದರೆ ಕನ್ನಡ ಪತ್ರಿಕಾ ಪ್ರಪಂಚದ 'ದೊಡ್ಡಪ್ಪ' ಪಾಟೀಲ ಪುಟ್ಟಪ್ಪನವರನ್ನು ಕೇಳಿ ನೋಡಿರಿ.

ದಿ. ಐ. ಕೆ. ಜಾಗೀರದಾರ : "ನಾವು ಒಬ್ಬೊಬ್ಬರೂ ಎತ್ತರದಿಂದ ಎತ್ತರಕ್ಕೆ ಹಾರಿ ಹೋಗಲು ಪಾಟೀಲ ಪುಟ್ಟಪ್ಪನವರು ನಮಗೆಲ್ಲ ಏಣಿಯಾಗಿದ್ದರು. ಹಾಗೆ ಏಣಿ ಆಗಿ ಬಳಸಿಕೊಂಡವರಲ್ಲಿ ಪುಟ್ಟಪ್ಪನವರನ್ನು ಮರೆತವರೇ ಹೆಚ್ಚು. ನೆನಪಿಸಿಕೊಳ್ಳುವವರು ತೀರ ಕಮ್ಮಿ."

ಇನ್ನು ಆಚಾರ್ಯರ ಬಗೆಗೆ ಯಾರು ಏನು ಹೇಳಿದ್ದಾರೆ ಎಂಬುದನ್ನು, ಆಯ್ದ ಬರಹಗಳಲ್ಲಿ ಕೊಡಲಾಗಿದೆ. (ಆಚಾರ್ಯರು ಅನೇಕ ವಿದ್ವತ್ಪೂರ್ಣ ಲೇಖನಗಳನ್ನು, ಗ್ರಂಥಗಳನ್ನು ಬರೆದರು. ಅವುಗಳಲ್ಲಿ ಇಂಗ್ಲೀಷಿನಲ್ಲಿ ಹೇಳುವಂತೆ ಮಾಸ್ಟರ್‌ಪೀಸ್ ಎಂದರೆ 'ಪದಾರ್ಥ ಚಿಂತಾಮಣಿ'. ಸಂಶೋಧನೆ, ಅವರ ಚಿಂತನೆ, ಅಧ್ಯಯನದ ಅಗಾಧ ಪರಿಣಾಮವನ್ನು ಈ ಗ್ರಂಥದಲ್ಲಿ ಗುರುತಿಸಬಹುದು. ಅನೇಕ ವಿದ್ವಾಂಸರು ಅದರ ಮೇಲ್ಮೆಯನ್ನು ಎತ್ತಿ ತೋರಿಸಿದ್ದಾರೆ. ಪಾವೆಂ ಅವರಿಗೆ ಅಖಿಲ ಭಾರತ ಮಹತ್ವದ ಬಿ.ಡಿ. ಗೊಯೇಂಕಾ ಪ್ರಶಸ್ತಿ ಬಂದುದೇ ಈ ಕೃತಿಗಾಗಿ. 'ಕಸ್ತೂರಿ'ಯ ಮೌಲ್ಯ ಹೆಚ್ಚಿಸಿದ ಅಪರೂಪದ ಅಂಕಣ).

ದಿ. ಹಾ. ಮಾ. ನಾಯಕ : "ಪದಾರ್ಥ ಚಿಂತಾಮಣಿ" ಪದ ಮತ್ತು ಅರ್ಥಗಳನ್ನು ಕುರಿತ ಜಿಜ್ಞಾಸೆ. ಇದು ಕನ್ನಡ 'ವರ್ಡಲೋರ್' (ಪಥ್ಯ ಪರಂಪರೆ)ಗೆ ಸಂಬಂಧಿಸಿದ ಮೊಟ್ಟಮೊದಲಿನ ವಿವೇಚನೆ.

"ಪ್ರತಿಯೊಂದು ಪದಕ್ಕೂ ಅದರದೇ ಆದ ಚರಿತ್ರೆಯುಂಟು, ಐತಿಹ್ಯ ಉಂಟು, ಕಥೆಯುಂಟು. ಆಚಾರ್ಯರ ದೃಷ್ಟಿ ಉದ್ದೇಶ ಚರಿತ್ರೆಯ ನಿರೂಪಣೆ ಅಲ್ಲ, ಸ್ವಾರಸ್ಯಕಥನ. ಆದರೆ ಇಲ್ಲಿ ನಂಬಲರ್ಹವಾದ ವಿವೇಚನೆ ಇದೆ. ಪದಪ್ರಪಂಚ ಸ್ವಾರಸ್ಯಪೂರ್ಣವಾಗಿದ್ದರೂ ಜಟಿಲವಾಗಿದೆ ಎಂದರೆ ಪ್ರತಿ ಶಬ್ದಕ್ಕೂ ಕಾರಣ ಹಾಗೂ ವಿವರಣೆ ಕೊಡಲು ಸಾಧ್ಯವಿಲ್ಲ. ಪದ ಮತ್ತು ಅರ್ಥ ಬೆಳೆಯುತ್ತವೆ; ಬದಲಾಗುತ್ತವೆ. ತಾರ್ಕಿಕವಾಗಿ ಉತ್ತರ ಸಾಧ್ಯವಿಲ್ಲದಾಗ ಕಲ್ಪನೆ ಗರಿಗೆದರಬಹುದು. ಇಲ್ಲಿ ಹಾಗಾಗಿದೆ."

ಕೆ. ಎಸ್. ನಾರಾಯಣಾಚಾರ್ಯ : "ಪ್ರತಿ ಪದದ ಅರ್ಥವಿಚಾರ ಲಹರಿಯು ಸೃಜನಾತ್ಮಕವಾಗಿ ಇತಿಹಾಸ, ಕಲೆ, ಪರಂಪರೆ, ಹಾಸ್ಯಪ್ರಜ್ಞೆ, ಸಾಂದರ್ಭಿಕ ಔಚಿತ್ಯಯುಕ್ತ ಬೆಳವಣಿಗೆ, ನಾನಾ ಭಾಷೆಗಳ ತುಲನೆಯಿಂದಾಗಿ ರಸಾಯನವಾಗಿ ಒಂದು ಪುಟ್ಟಪ್ರಬಂಧದ ರೂಪ ಪಡೆದಿದೆ. ನಾನಾ ಸಂಸ್ಕೃತಿಗಳ ಪದರುಗಳ ವಿಶ್ಲೇಷಣೆ ಎಲ್ಲೆಲ್ಲೂ ಕಾಣುತ್ತದೆ. ಅಭಿಪ್ರಾಯ ಭೇದ ಇರುವಲ್ಲಿ ಸೌಜನ್ಯದಿಂದಲೂ ಎಚ್ಚರಿಕೆಯಿಂದಲೂ ವಿವರಿಸಿದ ತಮ್ಮ ಕೌಶಲ್ಯವನ್ನು ತುಂಬ ಮೆಚ್ಚಿಕೊಂಡಿರುವೆ."

ಡಾ. ಶ್ಯಾಮಸುಂದರ ಬಿದರಕುಂದಿ : "ಪಾವೆಂ ಅವರು ಪದಗಳ ಬೆನ್ನುಹತ್ತಿ ಅವುಗಳ ರೂಪ ಸ್ವರೂಪವನ್ನು ಪರಿಚಯಿಸುತ್ತ, ಪದ ಲೋಕದ ಮುಕ್ತಸಂಚಾರಿಯಾಗಿ ಸಾಗುತ್ತಾರೆ. ಯಾವುದೇ ಪದದ ವಿವೇಚನೆ ನಡೆಸುವಾಗ ಅದರ ಮೈಯನ್ನು ಸುತ್ತುಮುತ್ತು ತಿರುಗಿಸಿ ಹೊರಳಿಸಿ ಅದರ ರೂಪ, ಲಕ್ಷಣ ಅರ್ಥಮೌಲ್ಯಗಳನ್ನು ಪರಿಶೀಲಿಸುತ್ತಾರೆ; ಶಬ್ದದ ಮೂಲರೂಪವನ್ನು ಶೋಧ ಮಾಡುತ್ತಾರೆ. ಹೀಗೆ ಪದದ ಮೂಲಕ್ಕೆ ಕೈ ಇಕ್ಕುವ ಅರ್ಥಗ್ರಹಿಕೆ ಪಾವೆಂ ಅವರ ಹಿರಿಯ ಸಾಧನೆಯಾಗಿದೆ."

ಡಾ. ಎಂ. ಎಂ. ಕಲಬುರ್ಗಿ : "ಶಬ್ದಗಳ ಸಾಂಸ್ಕೃತಿಕ ಅಧ್ಯಯನಕ್ಕೆ 'ಪದಾರ್ಥ ಚಿಂತಾಮಣಿ' ಒಂದು ಮಾದರಿ. ಇಲ್ಲಿ ಶಬ್ದಗಳ ಗಂಟನ್ನು ಬಿಚ್ಚುವ ನಂಟನ್ನು ಹುಡುಕುವ ಸಾಹಸವಿದೆ. ಬರವಣಿಗೆಯಲ್ಲಿ ಸರಸ ಶ್ರದ್ಧೆಯಿದೆ. ಹೀಗಾಗಿ ನಿಘಂಟುವಿನ ಹೊಸ ಮಾದರಿಯ ಅಧ್ಯಯನ ಇಲ್ಲಿ ತೆರೆದುಕೊಂಡಿದೆ.

ಡಾ. ಶ್ರೀನಿವಾಸ ಹಾವನೂರ : "ರೀಡರ್ಸ ಡೈಜೆಸ್ಟನಂಥ ಮಾಸಪತ್ರಿಕೆಯ ಸೃಜನಶೀಲ ಧಾರಣಶಕ್ತಿ, ಕನ್ನಡ ಭಾಷೆಗೂ ಇದೆ ಎಂಬುದನ್ನು ಕಲಿಸಿ ಕೊಟ್ಟಿರುವ ಆಚಾರ್ಯರು 'ಪದಾರ್ಥ ಚಿಂತಾಮಣಿ'ಯಂಥ ಅಪರೂಪದ ಶಬ್ದಾರ್ಥಗಳನ್ನು ಸದಾ ಬೆನ್ನುಹತ್ತುತ್ತಿದ್ದರು. ಅದು ಸಾರ್ಥಕವಾಗಿದೆ."

ಅನೇಕ ವಿದ್ವಾನ್ ಸಾಹಿತಿಗಳು 'ಪದಾರ್ಥ ಚಿಂತಾಮಣಿ'ಯಿಂದ ಅವರನ್ನು ಗುರುತಿಸತೊಡಗಿದರೆಂದೂ ಕಾಲು ಶತಮಾನದಿಂದ ಲಾಂಗೂಲಾಚಾರ್ಯನಾಗಿ

ಗುರುತಿಸಲ್ಪಡುತ್ತಿದ್ದವರನ್ನು ಈ ಚಿಂತಾಮಣಿ ವಿಮೋಚನೆಗೊಳಿಸಿಬಿಟ್ಟಿತೆಂದು ಸ್ವತಃ ಪಾವೆಂ ಒಂದೆಡೆ ಹೇಳಿರುವುದುಂಟು.

ಪುಟ್ಟಪ್ಪನವರಿಗೆ ತಮ್ಮ ಸ್ವಂತ ಸಾಮರ್ಥ್ಯದ ಅರಿವು ಚೆನ್ನಾಗಿದೆ. ತಾವು ಸಾಧಿಸಬೇಕೆಂದುದನ್ನು ಅವರು ಸಾಧಿಸಿರುವರೋ ಹೇಗೆ ಎಂಬುದನ್ನು ಅವರೇ ಹೇಳಬೇಕು. ೮೦ ದಾಟಿದರೂ ಅವರದು ಕ್ರಿಯಾಶೀಲ ಮನಸ್ಸು ಹಾಗೂ ವ್ಯಕ್ತಿತ್ವ. ಅವರಲ್ಲಿ ಬರೆದಿರುವ ಮತ್ತು ಬರೆಯಬೇಕು ಎಂದುಕೊಂಡಿರುವ ಅಪಾರ ವಿಷಯ ಸಂಗ್ರಹ ಇದೆ. ಅವರ ಸ್ಮರಣಶಕ್ತಿ ಅಪಾರ. ಅವರ ಉತ್ಸಾಹದಿಂದ ಹೇಳುವ ಸಂಗತಿಗಳು, ಘಟನೆಗಳು, ಉದಾಹರಣೆಗಳು, ವ್ಯಕ್ತಿಸಂಬಂಧಗಳು, ಬರೆದರೆ ಅರ್ಥ ಡಝನ್ ಸಂಪುಟಗಳೇ ಆದಾವು !

ಆಚಾರ್ಯರ ನೆನಪಿನ ಶಕ್ತಿ ಕೂಡ ಬಲುಗಟ್ಟಿ. ಅವರು ಇನ್ನಷ್ಟು ವರ್ಷಕಾಲ ನಮ್ಮೊಡನೆ ಇದ್ದಿದ್ದರೆ ಇನ್ನಷ್ಟು ಪದಗಳ, ಅರ್ಥಗಳ, ಅವುಗಳ ಸಾಂದರ್ಭಿಕ ಉಪಯೋಗಗಳು– ಹೀಗೆ ಕನ್ನಡ ಭಾಷೆಯ ಶ್ರೀಮಂತಿಕೆಯನ್ನು ಬಗೆದು ತೆಗೆಯಲು ಸಾಧ್ಯವಿತ್ತು. ಅವರದು ಸಂಶೋಧಕ ಬುದ್ಧಿ. ಅವರು ಯಾವುದನ್ನೂ ಒಂದೇ ಏಟಿಗೆ ನಂಬುವವರಲ್ಲ. ಅನುಮಾನದಿಂದಲೇ ಆರಂಭಿಸುತ್ತಾರೆ. ಅದನ್ನು ಒರೆಗೆ ಹಚ್ಚಿ ನೋಡಿ, ಮನವರಿಕೆಯಾದರೆ ನಂಬುತ್ತಾರೆ. ಅನುಮಾನ ಮತ್ತು ಕುತೂಹಲ ಪತ್ರಕರ್ತನ ಸ್ವಭಾವಜನ್ಯ ಗುಣಗಳು. ಅವರಿಗೆ ದಿನಪತ್ರಿಕೆಯಲ್ಲಿ ಕೆಲಸಮಾಡಲು ಅವಕಾಶ ಸಿಗದೇ ಹೋಗಿದ್ದು ಕನ್ನಡ ಪತ್ರಿಕೋದ್ಯಮಕ್ಕೆ ಆಗಿಹೋದ ಬಹುದೊಡ್ಡ ನಷ್ಟ. ಅವರು ಕೂಡ ಪಾಪು ಅವರಂತೆಯೇ ಸುಮ್ಮನೇ ಕೂಡತಕ್ಕವರಾಗಿರಲಿಲ್ಲ. ಎಲ್ಲಾದರೂ ಹಳೆಯ ಪತ್ರಿಕೆ, ಕೊನೆಗೆ ಮುದ್ರಿತ ಕಾಗದದ ಒಂದು ತುಂಡು ಸಿಕ್ಕರೂ ಸಾಕು, ಅದನ್ನು ಎತ್ತಿಕೊಂಡು ಓದದೇ ಬಿಟ್ಟವರಲ್ಲ; ಅದರಲ್ಲಿಯೂ ಏನಾದರೂ ವೈಶಿಷ್ಟ್ಯವನ್ನು ಹುಡುಕುವ ಶೋಧಕಬುದ್ಧಿ. ಅವರ ಧೀಶಕ್ತಿ, ಮನಃಶಕ್ತಿ ಬಲು ದೊಡ್ಡದು. ಒಂದು ಉದಾಹರಣೆ ಇಲ್ಲಿದೆ.

೧೯೭೭ರ ಅಕ್ಟೋಬರ್ ೩೧. ಕಚೇರಿಯಲ್ಲಿ ಕಾರ್ಯನಿರತರಾಗಿದ್ದ ಆಚಾರ್ಯರು ಕಾಫಿ ಕುಡಿದ ನಂತರ ರಕ್ತವಾಂತಿ ಮಾಡಿಕೊಂಡರು. ಅವರನ್ನು ಚಿಂತಾಜನಕ ಸ್ಥಿತಿಯಲ್ಲಿ ಕರ್ನಾಟಕ ಮೆಡಿಕಲ್ ಕಾಲೇಜಿನ ಆಸ್ಪತ್ರೆಗೆ ಸೇರಿಸಲಾಯಿತು. ತೀವ್ರ ಉಪಚಾರದಿಂದಲೂ ರಕ್ತವಾಂತಿ ನಿಲ್ಲಲಿಲ್ಲ. ಡಾಕ್ಟರರು ರಕ್ತ ಕೊಡುತ್ತಲೇ ಇದ್ದರೂ ವಾಂತಿ ಆಗುತ್ತಲೇ ಇತ್ತು. ಬೇರೆ ಬೇರೆ ಊರುಗಳಲ್ಲಿದ್ದ ಮಕ್ಕಳನ್ನು ಕರೆಸಿಕೊಂಡರು. ೩೦ ದಿನಗಳಲ್ಲಿ ಎರಡು ಶಸ್ತ್ರಚಿಕಿತ್ಸೆಗಳಾದವು. ಅರೆಜೀವವಾಗಿದ್ದ ಪಾವೆಂ ಶಸ್ತ್ರಚಿಕಿತ್ಸೆ ಕೋಣೆಗೆ ಹೋಗುತ್ತ ಕೈಬೀಸಿ ಎಲ್ಲರಿಂದ ಬೀಳ್ಕೊಂಡರು. ಮೊದಲನೇ ಶಸ್ತ್ರಚಿಕಿತ್ಸೆ, ಸಮಾಧಾನಕರವಾಗಿರಲಿಲ್ಲ. ಎರಡನೇ ಚಿಕಿತ್ಸೆಗೆ ಅವರು ಸಿದ್ಧರಾದರು. ಎಲ್ಲರ ನಿರೀಕ್ಷೆಗೆ

ಮೀರಿ, ಜೀವಸಹಿತವಾಗಿ ಮರಳಿದರು. ದೇಹಸ್ಥಿತಿ ಸುಧಾರಿಸುತ್ತಿದ್ದ ಹಾಗೆಯೇ ತಮ್ಮತನಕ್ಕೆ ಮರಳಿದರು. ಡಾಕ್ಟರುಗಳು ಬಂದರೆ ಅವರು ಮಾತನಾಡುವ ಮೊದಲೇ ಇವರು, ಅವರ ಯೋಗಕ್ಷೇಮ ವಿಚಾರಿಸತೊಡಗಿದರು. ಎಲುವಿನ ಹಂದರವಾಗಿ ಹಾಸುಗೆಯ ಮೇಲಿದ್ದ ಆಚಾರ್ಯರೊಬ್ಬರನ್ನು ಹಳ್ಳಿಗನೊಬ್ಬ 'ನೀನs ಏನಪಾ ಭೀಮಪ್ಪ ಅಂದ್ರ' ಎಂದು ವಿಚಾರಿಸಿದರೆ ಅವರು 'ನಾನು ಭೀಮನ ಹಾಗೆ ಕಾಣುತ್ತೇನೆಯೇ' ಎಂದು ಕೇಳಿ ಸುತ್ತಲಿದ್ದವರನ್ನು ನಗೆಗಡಲಿನಲ್ಲಿ ತೇಲಿಸಿದರು. ಸಲ್ಯಾನ್ ಹಚ್ಚಲು ಹಾಗೂ ಇಂಜೆಕ್ಷನ್ ಮಾಡಲು ನರ್ಸುಗಳು ಅವರ ದೇಹದಲ್ಲಿ ಜಾಗ ಹುಡುಕುತ್ತಿದ್ದರೆ ಇವರೇ ಹೊಸ ಹೊಸ ಜಾಗಗಳನ್ನು ತೋರಿಸುತ್ತಿದ್ದರು. ಡಾಕ್ಟರ್‌ರು ಬಂದರೆ ಅವರಿಗೆ ಅನೇಕ ಪ್ರಶ್ನೆಗಳನ್ನು ಕೇಳಿ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದರು.

ಆಚಾರ್ಯರ ಕರುಳನ್ನು ಬಹುಮಟ್ಟಿಗೆ ಕತ್ತರಿಸಿ ತೆಗೆದು ಹಾಕಲಾಗಿತ್ತು. ಒಂದೇ ಏಟಿಗೆ ಪೂರ್ಣ ಊಟ ಮಾಡುವಂತಿರಲಿಲ್ಲ. ಮೂರು–ನಾಲ್ಕು ಗಂಟೆಗೊಮ್ಮೆ ಒಂದೆರಡು ಇಡ್ಲಿಗಳನ್ನು ತಿನ್ನುತ್ತಿದ್ದರು. ಈ ನಡುವಿನ ಅವಧಿಯಲ್ಲಿಯೇ ಅವರು 'ಪದಾರ್ಥ ಚಿಂತಾಮಣಿ'ಯನ್ನು ಬರೆಯಲು ಆರಂಭಿಸಿದರು. ಅವರು ಈ ಯಾವ ಕಾಲಕ್ಕೂ ಧೃತಿಗೆಡಲಿಲ್ಲ. ಅವರ ಧೀಶಕ್ತಿ, ಕುಂದಿರಲಿಲ್ಲ. ೧೯೭೪ರಲ್ಲಿಯೇ ಮಡದಿ– ಮಕ್ಕಳಿಗೆ ಟಾಟಾ ಹೇಳಿದ್ದ ಆಚಾರ್ಯರು ಮುಂದೆ ಹದಿನೇಳು ವರ್ಷ ಬದುಕಿದರೆನ್ನುವುದು ಅವರದು ಎಲ್ಲರಿಗಿಂತ ಎಲ್ಲವುಗಳಿಗಿಂತ ಭಿನ್ನ ಪ್ರಕೃತಿಯೆಂಬುದನ್ನು ದೃಢಪಡಿಸುತ್ತದೆ.

■■

## ೭. ಸೌಭಾಗ್ಯವತಿಯರು

ಪಾಪು ಹಾಗೂ ಪಾವೆಂ ಜೀವನದ ಒಂದು ಅತಿಮಹತ್ವದ ವಿಷಯದಲ್ಲಿ ಸಮಾನಸುಖಿಗಳು. ಉಭಯತರ ಹೆಂಡಂದಿರು, ಅವರ ಸಾಂಸಾರಿಕ ಬದುಕನ್ನು, ಕಷ್ಟನಷ್ಟಗಳ ನಡುವೆಯೂ ಸಹ್ಯವಾಗುವಂತೆ ಕಟ್ಟಿಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಇಬ್ಬರೂ ಸುದೈವಿಗಳು. ಪಾಪು, ಪತ್ನಿ ಶ್ರೀಮತಿ ಇಂದುಮತಿಯವರನ್ನು ತಮ್ಮ ಜೊತೆಗಾಗಿ, ಸಲಹೆಗಾರ್ತಿ, ವೈದ್ಯೆ, ಗೃಹಮಂತ್ರಿ, ಪ್ರಕಾಶಕಿ, ಹಿತಚಿಂತಕಿ, ಸಹಧರ್ಮಿಣಿ ಎಂದು ಕರೆದಿದ್ದಾರೆ. ಈ ಎಲ್ಲ ಶಬ್ದಗಳೂ ಅರ್ಥಪೂರ್ಣ, ಅನ್ವರ್ಥಕ ಎಂಬುದನ್ನು ಅವರ ಸಮೀಪವರ್ತಿಗಳು ಮನಗಂಡಿದ್ದಾರೆ.

ಪಾವೆಂ ಹೇಳಿರುವುದೂ ಅದನ್ನೇ. ಶಬ್ದಗಳು ಬೇರೆ, ಭಾವ ಒಂದೇ ! ಅರ್ಥವೂ ಬೇರೆ ಅಲ್ಲ. ''೧೯೩೭ರಲ್ಲಿ ಮದುವೆಯಾಯಿತು. ನನಗೆ ಎರಡು ಮಕ್ಕಳಾಗಿ ಮೂರನೆಯದು ಬರುತಿತ್ತು. ೧೫ನೇ ವರ್ಷ ವಯಸ್ಸಿನಲ್ಲಿ ನನ್ನ ಮನೆಗೆ ಬಂದ ನನ್ನಾಕೆ ಲಕ್ಷ್ಮಿ ಹೆಚ್ಚು ಓದಿದವಳಲ್ಲ. ಆದರೆ ಒಳ್ಳೆಯತನದಲ್ಲಿ, ಸಹನೆಯಲ್ಲಿ ಅವಳಂಥವರು ಅಪರೂಪದಲ್ಲಿ ಅಪರೂಪ ಎಂದು ಧಾರಾಳ ಹೇಳಬಲ್ಲೆ. ಅವಳು ಸ್ವಲ್ಪ ಚಂಡಿಯಾಗಿದ್ದರೆ ನನ್ನಲ್ಲಿ ಸಾಹಸ ಪ್ರವೃತ್ತಿ ಹುಟ್ಟಿ ನಾನು ದೊಡ್ಡ ಮನುಷ್ಯನಾಗಿ ಬಿಡುತ್ತಿದ್ದೆ ಎಂದು ನಾನು ಅವಳಿಗೆ ಆಗಾಗ್ಗೆ (ಅಂದರೆ ಈಗೀಗ) ಹೇಳುವುದುಂಟು. ಆದರೆ ನಾನೇ ನನ್ನ ಮಾತನ್ನು ನಂಬುವುದಿಲ್ಲ. ಅವರು ಚಂಡಿಯಾಗಿದ್ದರೆ ಬಹುಶಃ ನಾನು, ನನ್ನ ನಾವೆ ಒಡೆದ ಮೇಲೆ ದಡ ಸೇರುತ್ತಲೇ ಇರಲಿಲ್ಲ. ಅವಳು ನನ್ನೊಡನೆ ಪಟ್ಟ ಪಾಡಿನ ಕೆಲವು

ಮಾದರಿಗಳನ್ನು ಬೇರೆಡೆ ಬರೆದಿದ್ದಾಳೆ. ಅದು ತೀರ ಸೌಮ್ಯವೆಂದು ಹೇಳಿದರೆ ಸಾಕು.'' ಎಂದು ಆಚಾರ್ಯರು ತಮ್ಮ ಉಡುಪಿಯ ಜೀವನ ಕುರಿತ ಲೇಖನದಲ್ಲಿ ಹೇಳಿದ್ದಾರೆ.

ಪುಟ್ಟಪ್ಪನವರು ಜೀವನೋತ್ಸಾಹಿಗಳು. ಆಚಾರ್ಯರಂತೆ ಅದು ಅಂತರ್ಮುಖಿ ವಾಗಿರದೆ ಬಹಿರಂಗದಲ್ಲಿಯೇ ಒಡೆದು ಕಾಣುವಂಥದು. ಪ್ರೀತಿ, ಪ್ರೇಮ, ಪ್ರಣಯ, ತಿಳಿವಳಿಕೆ, ಕಾಳಜಿ ಎಲ್ಲವನ್ನೂ ಪತ್ನಿಯಲ್ಲಿ ಕಂಡವರು. ಆಚಾರ್ಯರು ಮದುವೆಯಾದ ಮೇಲೆ ಪ್ರೀತಿಸಿದರೆ (ಹೆಂಡತಿಯನ್ನು) ಪುಟ್ಟಪ್ಪನವರು ಪ್ರೀತಿಸಿ ಮದುವೆಯಾದರು. ಸೋದರಮಾವನ ಮಗಳು ಎಂಬ ಕಾರಣಕ್ಕಾಗಿ ಹಕ್ಕುದಾರಿಕೆಯನ್ನು ಒಳಗೊಳಗೇ ಸಾಧಿಸಿ, ತಮ್ಮನ್ನು ಆರಾಧಿಸುತ್ತಿದ್ದ ಹೆಣ್ಣುಮಗಳ ಕೈ ಹಿಡಿದರು. ತಮ್ಮ ಹೃದಯ ಕದ್ದ ಹುಡುಗಿಯನ್ನು ಮದುವೆ ಆಗುವುದು ಅವರಿಗೆ ಮಾನಸಿಕವಾಗಿ ಅಷ್ಟು ಸುಲಭ ಎನಿಸಿರಲಿಲ್ಲ.

ಕಾನೂನು ಪರೀಕ್ಷೆ, ತದನಂತರ ಬಾರ್ ಕೌನ್ಸಿಲ್ ಪರೀಕ್ಷೆ ಪಾಸಾಗಿ ಮುಂಬಯಿ ಹೈಕೋರ್ಟಿನಲ್ಲಿ ಪ್ರ್ಯಾಕ್ಟೀಸ್ ಮಾಡುವ ವಿಚಾರದಲ್ಲಿದ್ದಾಗ ಪಾಪು ಮನೆಯಲ್ಲಿ ಅವರ ಮದುವೆಯ ಪ್ರಸ್ತಾಪ, ಪಿಸುಮಾತುಗಳು ಅವರ ಕಿವಿಗೆ ಬಿತ್ತು. ವಿಜಾಪುರದಲ್ಲಿ ಪ್ರಸಿದ್ಧ ನೇತ್ರತಜ್ಞರಾಗಿದ್ದ ಡಾ. ಬಿ. ಎಂ. ಪಾಟೀಲರು ಅವರ ಸೋದರಮಾವ. ಅವರು ಆಗಾಗ್ಗೆ ವಿಜಾಪೂರಕ್ಕೆ ಹೋಗಿಬರುತ್ತಿದ್ದರು. ಯಾಕೆ ಎಂದು ಯಾಕೆ ಹೇಳಬೇಕು ? ಮಾವನ ಮನೆಯವರು ತಮ್ಮ ಹಿರಿಯ ಮಗಳಿಗಾಗಿ ಬೇರೆ ಕಡೆಗೆ ಗಂಡು ನೋಡುವರೋ, ತಮ್ಮ ಮನೆಯವರು ತಮಗೆ ಬೇರೆ ಕಡೆಯಿಂದ ಹೆಣ್ಣು ತರುವರೋ ಎನ್ನುವ ಮುಜುಗರದಲ್ಲಿದ್ದರು ಪಾಪು. ತಾವು ಇಂದುಮತಿಯವರನ್ನೇ ಮದುವೆಯಾಗುವದು ಎಂದು ಅವರು ಬಾಯಿಬಿಟ್ಟು ಮನೆಯವರಿಗೆ ಹಾಗೂ ಸೋದರಮಾವನಿಗೆ ಹೇಗೆ ಹೇಳಿಯಾರು ? ಈ ನಡುವೆ ಅವರ ದೊಡ್ಡಪ್ಪ ಲಿಂಗನಗೌಡರು ವಿಜಾಪುರಕ್ಕೆ ಹೋಗಿ, 'ಹುಡುಗ ಈಗ ಕಾನೂನು ಪರೀಕ್ಷೆ ಪಾಸು ಆಗ್ಯಾನೆ, ಮೊದಲು ಕೆಲಸ ಮಾಡಲಿ, ನಂತರ ಅವನಿಗೆ ನಿಮ್ಮ ಎರಡನೇ ಮಗಳನ್ನು ಕೊಟ್ಟು ಮದುವೆ ಮಾಡಿದರಾಯಿತು' ಎಂದು ಡಾ. ಬಿ.ಎಂ. ಪಾಟೀಲರಿಗೆ ಹೇಳಿ ಬಂದರಂತೆ. ಇದು ಗೊತ್ತಾದಾಗ, ತಾವು ಮೆಚ್ಚಿದ ಹುಡುಗಿ ತಮ್ಮ ಕೈಬಿಟ್ಟು ಹೋದಳೆಂದು ಅವರು ಕಸಿವಿಸಿಪಟ್ಟರು. ಆಗ ಅವರ ನೆರವಿಗೆ ಬಂದವರು ವಿಜಾಪುರದಲ್ಲಿದ್ದ ಅವರ ಗೆಳೆಯರೊಬ್ಬರು. ಅವರಿಗೆ, ಡಾ. ಪಾಟೀಲರೊಂದಿಗೆ ಅಪಾರ ಸ್ನೇಹವಿತ್ತು. 'ವರ ನಿಮ್ಮ ಕೈಯಲ್ಲೇ ಇರುವಾಗ ನಿಮ್ಮ ಮಗಳಿಗೆ ಬೇರೆ ಕಡೆಗೆ ಏಕೆ ವರ ನೋಡುತ್ತೀರಿ ?' ಎಂದು ಕೇಳಿದರು. ಡಾ. ಪಾಟೀಲರ ಮಾವನವರೂ ಸಹ ಮೊದಲು ಮೊದಲನೇ ಹುಡುಗಿಯ ಮದುವೆ ಮಾಡಿರಿ ಎಂದು ಸಲಹೆ ಕೊಟ್ಟರು.

ಡಾ. ಬಿ.ಎಂ. ಪಾಟೀಲರಿಗೂ ತಮ್ಮ ಹಿರಿಯ ಮಗಳನ್ನು ಸೋದರಳಿಯನಿಗೇ ಕೊಟ್ಟು ಮದುವೆ ಮಾಡುವ ಒಲವು ಇದ್ದಿತು. ಒಪ್ಪಿಯೇ ಬಿಟ್ಟರು. ಪುಟ್ಟಪ್ಪನವರು ಅನಕೃ ಅವರನ್ನು ಕರೆದುಕೊಂಡು ಬೆಂಗಳೂರಿನ ಚಿಕ್ಕಪೇಟೆಗೆ ಹೋಗಿ ೧೨೦೦ರೂ ಬೆಲೆಯ (ಇಂದಿನ ಬೆಲೆ ೧೨೦೦೦ಕ್ಕಿಂತ ಹೆಚ್ಚು) ರೇಶ್ಮೆ ಸೀರೆ ಖರೀದಿಸಿಕೊಂಡು ಬಂದರು. ೧೧ ನವೆಂಬರ್, ೧೯೪೫ರಂದು ಅವರ ಮದುವೆ ಕರ್ಜಗಿಯಲ್ಲಿ ಜರುಗಿತು. ಆಗ ಪುಟ್ಟಪ್ಪನವರು ಸೂಟು ಧರಿಸದೆ ಖಾದಿಬಟ್ಟೆಗಳನ್ನು ತೊಟ್ಟುಕೊಂಡಿದ್ದರು.

ಪಾವೆಂ. ಆಚಾರ್ಯರದು, ಹಿರಿಯರು ಹೊಂದಿಸಿದ ಮದುವೆ. ಅವರು ಔಪಚಾರಿಕವಾಗಿ ನೋಡಲು ಬಂದಾಗ ಶ್ರೀಮತಿ ಲಕ್ಷ್ಮಿಯವರು ಮುಖ ತೊಳೆದಿರಲಿಲ್ಲವಂತೆ; ಒಂದು ಒಳ್ಳೆಯ ಸೀರೆಯನ್ನೂ ಉಟ್ಟಿರಲಿಲ್ಲ. ಅವರ ಸೋದರಮಾವನಾದ ಶ್ರೀನಿವಾಸರಾಯರು ಇದ್ದಕ್ಕಿದ್ದ ಹಾಗೆ ಅವರನ್ನು ಆಚಾರ್ಯರ ಮುಂದೆ ನಿಲ್ಲಿಸಿದರು. ಕೆಲವೇ ನಿಮಿಷಗಳಲ್ಲಿ ಅಲ್ಲಿಂದ ಹೋದ ಪಾವೆಂ ತಮ್ಮ ಒಪ್ಪಿಗೆ ಸೂಚಿಸಿದರು. ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡಬೇಕೆಂಬ ಒಂದು ಮಾತಿದೆ. ವಧುವಿಗೆ ಹಿಂದಿ, ಸಂಸ್ಕೃತ ಬರುತ್ತದೆ. ವರನಿಗೆ ಸುಮಾರು ಆಸ್ತಿ ಇದೆ ಎಂಬ ಸುಳ್ಳನ್ನು ಅವರ ಸೋದರಮಾವ ಎರಡೂ ಕಡೆಗೆ ಹೇಳಿದ್ದರು. ವಧು ಎರಡನೇ ತರಗತಿ ದಾಟಿರಲಿಲ್ಲ. ವರನಿಗೆ ಒಂದು ಚಿಕ್ಕ ಮನೆ ಮಾತ್ರ ಇತ್ತು. ಪಾವೆಂ ವರದಕ್ಷಿಣೆ ತೆಗೆದುಕೊಳ್ಳದೆ ಮದುವೆಯಾದರು. ಅವರ ತಾಯಿಗೆ ಅಷ್ಟಾಗಿ ಹಿಡಿಸಿರಲಿಲ್ಲವಂತೆ. ಅವರು ಇಬ್ಬರನ್ನೂ ಪೂರ್ತಿಯಾಗಿ ಕ್ಷಮಿಸಿರಲಿಲ್ಲ ಎಂದು ಶ್ರೀಮತಿ ಪಾವೆಂ ತಮ್ಮ ಅನುಭವ ಕಥನದಲ್ಲಿ ಹೇಳಿದ್ದಾರೆ.

ಆಚಾರ್ಯರ ಆವಶ್ಯಕತೆಗಳು ಬಹಳ ಕಡಿಮೆ. ಊಟ ತಿಂಡಿ, ಎರಡು ಮೂರು ಧೋತರ, ಬಿಳಿ ಅಂಗಿ. ಆದರೆ ಅವರನ್ನು ಸಾಕುವುದು ಅವರ ಪತ್ನಿಗೆ ಸುಲಭದ ಕೆಲಸ ಆಗಲಿಲ್ಲ. ಗಂಡನನ್ನು ಸಾಕುವದೇ ? ಹೌದು, ಪಾವೆಂ ಓದು ಬರವಣಿಗೆ ಹೊರತು ಬೇರೆಯದರಲ್ಲಿ ಅಸ್ತವ್ಯಸ್ತರು ಹಾಗೂ ವಿಕ್ಷಿಪ್ತರು. ಅವರ ಒಲವು ನಿಲುವು, ಭಾವನೆಗಳನ್ನು ಅವರ ಶ್ರೀಮತಿ ಬಹಳ ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. 'ನಮ್ಮ ಒಂದೂವರೆ ವರ್ಷದ ಮಗು ಸತ್ತಾಗ ಅವರು ಕಣ್ಣೀರು ಹಾಕಲಿಲ್ಲ. ಗಾಂಧಿ ಸತ್ತಾಗ ಅವರು ಧ್ವನಿ ತೆಗೆದು ಅತ್ತರು. ಊಟ ಕೂಡ ಮಾಡದೆ ಜ್ವರಪೀಡಿತರಾಗಿ ಮಲಗಿಬಿಟ್ಟರು, ಎಂದು ಅವರ ಪತ್ನಿ 'ಉಡುಪಿಯ ಪರಿಸರದಲ್ಲಿ ಪಾವೆಂ ಆಚಾರ್ಯರು' ಎಂಬ ಸಂಕಲನದಲ್ಲಿ ಬರೆದಿದ್ದಾರೆ.

ಇವರು ಮೋಹಿಯೆ ? ನಿರ್ಮೋಹಿಯೇ ? ಇವರೊಡನೆ ಬಾಳುವುದು ಸುಲಭವೇ ? ಇವರನ್ನು ಪ್ರೀತಿಸದಿರುವುದು ಸುಲಭವೇ ? ಈ ಪ್ರಶ್ನೆ ಎತ್ತಿದ ಅವರೇ ಉತ್ತರಿಸಬೇಕು. ಅವರಿಗೆ ಈಗ ೮೮ ವರ್ಷವಾಗುತ್ತ ಉಡುಪಿಯಲ್ಲಿ ಎರಡನೇ ಮಗನ ಮನೆಯಲ್ಲಿದ್ದಾರೆ.

ಪುಟ್ಟಪ್ಪನವರಿಗೆ ಐವರು ಮಕ್ಕಳು– ಮಂಜುಳಾ, ಶೈಲಜಾ, ಶಾಂತಲಾ, ಅಶೋಕ ಹಾಗೂ ರಾಜು. ಶಾಂತಲಾ ಹಾಗೂ ರಾಜು ಈಗಿಲ್ಲ. ಆಚಾರ್ಯರಿಗೆ ಎಂಟು ಮಂದಿ ಮಕ್ಕಳು. ಅವರಲ್ಲಿ ಒಂದು ಕೂಸಿದ್ದಾಗಲೇ ಮೃತಪಟ್ಟರೆ ಉಳಿದವರು ಸುಖ ಸಂಸಾರ ಮಾಡಿಕೊಂಡು ಇದ್ದಾರೆ. ಅವರೆಂದರೆ ಮುರಳೀಧರ್, ರಾಧಾಕೃಷ್ಣ, ಸುಕನ್ಯಾ, ರಾಘವೇಂದ್ರ, ರಮಾನಂದ, ಅನುಸೂಯಾ, ಅಹಲ್ಯಾ, ಶ್ರೀನಿವಾಸ. ಸುಕನ್ಯಾ ಹಾಗೂ ಹಿರಿಯಮಗ ಶ್ರೀಧರ (ಎರಡು ವರ್ಷದ ಹಸುಳೆ) ಈಗಿಲ್ಲ.

■■

# ೮. ಮಾನ-ಸನ್ಮಾನಗಳು

ಪಾಪು ಹಾಗೂ ಪಾವೆಂ ಅಂಥವರಿಗೆ ಮಾನ-ಸನ್ಮಾನಗಳು ದೊಡ್ಡವಲ್ಲ. ಮಾನ-ಸನ್ಮಾಗಳಿಂದ ಅವರ ಯೋಗ್ಯತೆಯನ್ನು ಅಳೆಯಲು ಸಾಧ್ಯವಿಲ್ಲ. ಕೃತಜ್ಞ ಸಮಾಜವು, ತನ್ನ ಸಂತೋಷಕ್ಕಾಗಿ ಅವರಿಗೆ ನೀಡುವ ಅಲಂಕಾರಗಳಷ್ಟೇ. ಒಬ್ಬರಿಗೆ ಹೆಚ್ಚು, ಇನ್ನೊಬ್ಬರಿಗೆ ಕಡಿಮೆ ಪ್ರಶಸ್ತಿಗಳು, ಸನ್ಮಾನಗಳು ಬಂದಿರಬಹುದು; ಅವರ ಮಾನವಂತಿಕೆಯಲ್ಲಿ ಹೆಚ್ಚು ಕಡಿಮೆ ಎಂಬುದೇನೂ ಇಲ್ಲ. ಪಾಪು ಬಹು ವೈವಿಧ್ಯಮಯ, ಬಹು ವಿಶಾಲವಾದ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿ ನಿಂತು ದುಡಿದವರಾದುದರಿಂದ ಅವರಿಗೆ ತೊಡಿಸಲಾದ ಅಲಂಕಾರಗಳೂ ಹೆಚ್ಚು. ಅದು ಸಾಧ್ಯವೂ ಆಗಿದೆ. ಎರಡು ಅವಧಿಗೆ ರಾಜ್ಯಸಭೆ ಸದಸ್ಯರಾದರು. ಕನ್ನಡಕಾವಲು ಹಾಗೂ ಗಡಿಸಲಹಾ ಸಮಿತಿ ಅಧ್ಯಕ್ಷರಾದರು. ಗೋಕಾಕ ಚಳುವಳಿಯ ನೇತಾರರಾಗಿ ದುಡಿದರು. ರೈಲ್ವೆ ವಲಯಕ್ಕಾಗಿ ಶ್ರಮಿಸಿದರು. ಇವುಗಳನ್ನು ಅವರು ಇಂದಿಗೂ ಬಿಟ್ಟಿಲ್ಲ.

ಪಾವೆಂ ತಮಗೆ ಒಗ್ಗದ ಯಾವ ಕೆಲಸವನ್ನು ಮಾಡದವರು. ಕನ್ನಡಕ್ಕೆ ಏನು ಬೇಕು, ಕರ್ನಾಟಕಕ್ಕೆ ಏನು ಬೇಕು, ಭಾರತಕ್ಕೆ ಏನಾಗಿದೆ, ಅದು ಏನು ಆಗಬೇಕು ಎಂಬುದನ್ನು ಅವರು ಬರೆದು ಬೋಧಿಸಿದರು. ಅವರ ಅಗಾಧ ಮೇಧಾಶಕ್ತಿಯನ್ನು ಅವುಗಳಲ್ಲಿ ತೊಡಗಿಸಿದವರು. ಬಹಿರಂಗ ಸನ್ಮಾನಗಳನ್ನು ಅವರು ಒಪ್ಪಿಕೊಂಡವರೇ ಅಲ್ಲ. ತಮಗೆ ಒದಗಿಬಂದ ಪ್ರಶಸ್ತಿಗಳು ಅವರನ್ನು ಅಚ್ಚರಿಗೊಳಿಸಿವೆ.

ಪಾಪು ಬಹುಪುರಸ್ಕೃತರು. ರಾಜ್ಯೋತ್ಸವ ಪ್ರಶಸ್ತಿ, ಸುವರ್ಣ ಕರ್ನಾಟಕ ಏಕೀಕರಣ ಪ್ರಶಸ್ತಿ, ಟಿಯಸ್ಸಾರ್ ಪ್ರಶಸ್ತಿ, ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಕರ್ನಾಟಕ ವಿಶ್ವವಿದ್ಯಾಲಯದ ಡಿ. ಲಿಟ್. ಕರ್ನಾಟಕ ಪತ್ರಿಕಾ ಅಕಾಡಮಿ ಪ್ರಶಸ್ತಿ ಕನ್ನಡ ಸಾಹಿತ್ಯ ಪರಿಷತ್ತಿನ ಮಹೋನ್ನತ ನೃಪತುಂಗ ಪ್ರಶಸ್ತಿಗಳಿಂದ ಅವರು ಭೂಷಿತರು. ೨೦೦೩ರಲ್ಲಿ ಬೆಳಗಾವಿಯಲ್ಲಿ ಜರುಗಿದ ೭೦ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೌರವಕ್ಕೂ ಅವರು ಪಾತ್ರರಾಗಿದ್ದಾರೆ.

ಆಚಾರ್ಯರಿಗೆ ಸಂದ ಅತ್ಯನ್ನುತ ಪ್ರಶಸ್ತಿ ಎಂದರೆ ಪತ್ರಿಕೋದ್ಯಮದಲ್ಲಿ ಉತ್ಕೃಷ್ಟ ಸಾಧನೆಗೆ ೧೯೯೧ರಲ್ಲಿ ಅವರಿಗೆ ಕೊಡಮಾಡಿದ ಅಖಿಲಭಾರತ ಮಟ್ಟದ ಗೋಯೆಂಕಾ ಪ್ರಶಸ್ತಿ. ಈ ಗೌರವ ಪಡೆದ ಪ್ರಥಮ ಕನ್ನಡಿಗರು ಪಾವೆಂ. ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಪದಕ, ಪಿ. ಆರ್. ರಾಮಯ್ಯ ಪ್ರಶಸ್ತಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವರ್ಧಮಾನ ಪ್ರಶಸ್ತಿ ಇವೇ ಮೊದಲಾದವು ಅವರನ್ನು ಹುಡುಕಿಕೊಂಡು ಬಂದವು. ಅರೆಕಾಲಿಕ ಸುದ್ದಿಗಾರರು, ರಾಜಕಾರಣಿಗಳ ಆಪ್ತರಿಗೆ ಪ್ರಶಸ್ತಿ ಕೊಟ್ಟು ತನ್ನ ಬೆಲೆಯನ್ನು ಹರಾಜಿಗೆ ಹಾಕಿಕೊಂಡ ಕರ್ನಾಟಕ ಮಾಧ್ಯಮ ಅಕಾಡಮಿ ಆಚಾರ್ಯರ ಹೆಸರನ್ನೆತ್ತಲೇ ಇಲ್ಲ. ಅವರು ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು.

■■

# ೯. ಹುಬ್ಬಳ್ಳಿಯ ಹೆಮ್ಮೆ

ಪಾಪು ಹಾಗೂ ಪಾವೆಂ ಮೂಲತಃ ಹುಬ್ಬಳ್ಳಿಯವರಲ್ಲ. ಒಬ್ಬರು ಈಗಿನ ಹಾವೇರಿ ಜಿಲ್ಲೆಯವರು, ಇನ್ನೊಬ್ಬರು ದಕ್ಷಿಣ ಕನ್ನಡದವರು. ಪಾಪು ತಮ್ಮ ಈಗಿನ ಜಿಲ್ಲೆಯಲ್ಲಿ ಉಳಿದುದು ಕಡಿಮೆ. ಪಾವೆಂ ತಮ್ಮ ೨೮ನೇ ವಯಸ್ಸಿಗೆ ಉಡುಪಿಯನ್ನು ಬಿಟ್ಟು ಮೊದಲು ಧಾರವಾಡ, ನಂತರ ಹುಬ್ಬಳ್ಳಿಗೆ ಬಂದರು. ಇಬ್ಬರಿಗೂ ಹುಬ್ಬಳ್ಳಿ ಕರ್ಮಭೂಮಿ; ಅವರಿಬ್ಬರೂ ಸಾಧಕರಾಗಿ ಬೆಳೆದದ್ದು ಹುಬ್ಬಳ್ಳಿಯಲ್ಲಿ. ಹುಬ್ಬಳ್ಳಿ ಅವರಿಗೆ ಆದರ ನೀಡಿತು. ಹುಬ್ಬಳ್ಳಿಗೆ ಅವರು ಶ್ರೇಯಸ್ಸು ತಂದುಕೊಟ್ಟರು.

ಹುಬ್ಬಳ್ಳಿ ಸ್ವಾತಂತ್ರ್ಯ ಹೋರಾಟ, ಕರ್ನಾಟಕ ಏಕೀಕರಣ ಮತ್ತು ನಂತರ ರಾಜಕೀಯ ಚಟುವಟಿಕೆಗಳ ಕೇಂದ್ರವಾಗಿ ೫೦ ವರ್ಷಗಳ ಹಿಂದೆಯೇ ಬೆಳೆಯತೊಡಗಿತ್ತು. ಆದುದರಿಂದ ಅದು ಪತ್ರಿಕಾ ಕೇಂದ್ರವಾಗಿಯೂ ಬೆಳೆಯಿತು. ಹೊರಗಿನಿಂದ ಬಂದವರೇ ಹುಬ್ಬಳ್ಳಿಯನ್ನು ಸರ್ವವಿಧವಾಗಿ ಕಟ್ಟಿದರು. ಚಿತ್ರದುರ್ಗದ ನಿಜಲಿಂಗಪ್ಪನವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಹುಬ್ಬಳ್ಳಿಯಲ್ಲಿಯೇ ಕಾರ್ಯಪ್ರವೃತ್ತರಾದರು. ಅವರಂತೆ ವಿಜಾಪುರದ ಅಂಬಲಿ ಚೆನ್ನಬಸಪ್ಪನವರು. ಪತ್ರಕರ್ತರಲ್ಲಿ ಆಗ ಬಹುತೇಕರು– ಈ ಲೇಖಕನೂ ಸೇರಿದಂತೆ– ವಿಜಾಪುರ ಜಿಲ್ಲೆಯವರೇ. ಈ ದಿಶೆಯಲ್ಲಿ ಮುಖ್ಯವಾಗಿ ಸ್ಮರಿಸಬೇಕಾದ ಹೆಸರು ಎಂದರೆ ಮೊಹರೆ ಹಣಮಂತರಾಯರದು. ಅವರು 'ಸಂಯುಕ್ತ ಕರ್ನಾಟಕ'ವನ್ನು

ಕಟ್ಟಿದವರು. ನಾಲ್ಕು ಅಖಿಲ ಭಾರತ ಪತ್ರಿಕಾ ಸಂಸ್ಥೆಗಳ ಅಧ್ಯಕ್ಷರಾಗಿ ಹುಬ್ಬಳ್ಳಿಯನ್ನು ಅಖಿಲ ಭಾರತ ನಕಾಶೆಯಲ್ಲಿ ನಿಲ್ಲಿಸಿದರು. ಅಂದು ವಿಜಾಪುರ ಜಿಲ್ಲೆಯಿಂದ ಅನ್ನವನ್ನು ಹುಡುಕಿಕೊಂಡು ಬಂದವರು ಅಗ್ರಗಣ್ಯ ನಾಗರಿಕರಾಗಿದ್ದಾರೆ, ವೈದ್ಯರಾಗಿದ್ದಾರೆ, ಉದ್ಯಮಿಗಳಾಗಿದ್ದಾರೆ, ಬೇರೆ ಜಿಲ್ಲೆಗಳಿಂದ ಬಂದವರೂ ಇದ್ದಾರೆ. ಅವರ ಸಂಖ್ಯೆ ಸಣ್ಣದು. ಅಂದ ಹಾಗೆ ಪಾಪು ಅವರಿಗೂ ವಿಜಾಪುರದ ನಂಟು ಇದೆ, ಪ್ರೀತಿ ಇದೆ, ವಿಜಾಪುರ ಅವರ ಶ್ರೀಮತಿಯವರ ತವರು.

ಮೊಹರೆಯವರಂತೂ ಸರೀಯೆ! ಪಾಪು ಹಾಗೂ ಪಾವೆಂ ಹುಬ್ಬಳ್ಳಿಯ ಹೆಮ್ಮೆಯಾಗಿದ್ದಾರೆ. ಅವರು ಹುಬ್ಬಳ್ಳಿಯನ್ನು ಬೌದ್ಧಿಕವಾಗಿ ಬೆಳೆಸಿದ್ದಾರೆ, ಹುಬ್ಬಳ್ಳಿ ಅವರನ್ನು ಬೆಳೆಸಿದೆ. ಅಷ್ಟೇ ಅಲ್ಲ, ತಮ್ಮ ತಮ್ಮ ಕ್ಷೇತ್ರದಲ್ಲಿ ಅನೇಕರನ್ನು ಬೆಳೆಸಿದ್ದಾರೆ.

■■

# ಅನುಬಂಧ

೧. ಚೇತೋಹಾರಿ ವೃತ್ತಿ

''ಪತ್ರಕರ್ತರು ಕಂಡಂತೆ ಪಾಪು''ದಲ್ಲಿ ಪಾಪು ಚೆನ್ನುಡಿ

೨. ಆಚಾರ್ಯ ಎಂಬ ಅನ್ವರ್ಥಕನಾಮ

'ಕಸ್ತೂರಿ' ಸ್ವರ್ಣಮಹೋತ್ಸವ ಸಂಚಿಕೆಯಲ್ಲಿ ಶಿವಾನಂದ ಜೋಶಿ

೩. ಕನ್ನಡ ಪತ್ರಿಕಾ ಪ್ರಪಂಚದ ದೊಡ್ಡಪ್ಪ

'ಪತ್ರಕರ್ತರು ಕಂಡಂತೆ ಪಾಪು'ದಲ್ಲಿ ಶಿವಾನಂದ ಜೋಶಿ

೪. ಪಾವೆಂ ಅವರಿಗೆ ಬಿ.ಡಿ ಗೋಯೆಂಕಾ ರಾಷ್ಟ್ರೀಯ ಪ್ರಶಸ್ತಿ

ತಂದುಕೊಟ್ಟ 'ಪದಾರ್ಥ ಚಿಂತಾಮಣಿ'ಯ ಒಂದು ಮಾದರಿ

೫. ಪ್ರಶಸ್ತಿಯೊಡನೆ ಸಂದ ಆಚಾರ್ಯರ ಸಾಧನೆಯ ಶ್ಲಾಘನಾಪತ್ರ

# ಚೇತೋಹಾರಿ ವೃತ್ತಿ

ಪತ್ರಿಕೋದ್ಯಮ ಒಂದು ಮಾಮೂಲಿ ವೃತ್ತಿಯಲ್ಲ. ಅದು ಒಂದು ಸೇವೆ, ಒಂದು ಆದರ್ಶ. ಅದರಲ್ಲಿ ಸಮಾಜಕ್ಕೆ ಒಳ್ಳೆಯದನ್ನು ಮಾಡಬೇಕೆನ್ನುವ ಅರ್ಪಣೆಯ ಭಾವನೆ ಇದೆ. ಏರಿದಷ್ಟೂ ಏರಬೇಕಾದ ಎತ್ತರಗಳು ಅದರಲ್ಲಿ ಇದ್ದೇ ಇವೆ. ಒಳ್ಳೆಯದನ್ನು ಮಾಡಿದಷ್ಟೂ ಒಳ್ಳೆಯದನ್ನು ಮಾಡಬೇಕೆನ್ನುವ ಅವಕಾಶಗಳು ಅದರಲ್ಲಿ ಇವೆ. ಲೋಕಶಿಕ್ಷಣವನ್ನು ಒದಗಿಸುವ ಅದರ ಕಾರ್ಯಕ್ಕೆ ಕೊನೆ ಎನ್ನುವದು ಎಲ್ಲಿದೆ ?

ಜೀವಿಗಳಿಗೆ ಪುನರ್ಜನ್ಮ ಎನ್ನುವುದೊಂದು ಇರುವುದಾದರೆ ನಾನು ಪತ್ರಿಕೋದ್ಯಮಿ ಆಗಿಯೇ ಜನ್ಮವೆತ್ತಿ ಬರಬೇಕೆಂದು ಆಶಿಸುತ್ತೇನೆ. ಅದಕ್ಕಿಂತ ಪವಿತ್ರವಾದ ಜನ್ಮ ಇನ್ನೊಂದಿಲ್ಲವೆಂದು ನಾನು ದೃಢವಾಗಿ ನಂಬಿದ್ದೇನೆ. ಈ ವೃತ್ತಿಯಲ್ಲಿ ಜೀವನ ಇದೆ, ಸಾಹಸವಿದೆ, ಸ್ವಾರಸ್ಯ ಇದೆ, ಜಿಜ್ಞಾಸೆ ಇದೆ, ರೋಮಾಂಚನ ಇದೆ, ಪ್ರಕಾಶ ಇದೆ, ಮನರಂಜನೆ ಇದೆ.

ಪತ್ರಿಕೋದ್ಯಮವು ಅತ್ಯಂತ ಚೇತೋಹಾರಿಯಾದ ಕಾರ್ಯ ಆಗಿದೆ. ಅದು ಜನರನ್ನು ಜನರಿಗೆ, ಜನರನ್ನು ಸರಕಾರಕ್ಕೆ, ಸರಕಾರವನ್ನು ಜನರಿಗೆ ಪರಿಚಯ ಮಾಡಿಕೊಡುವ ಕೆಲಸವನ್ನು ಮಾಡುತ್ತದೆ. ಜನರನ್ನು ಒಬ್ಬರೊಬ್ಬರ ಸಮೀಪಕ್ಕೆ ತರಲು ಅದು ಅವರ ನಡುವೆ ತಿಳಿವಳಿಕೆಯ ಸೇತುವೆಯನ್ನು ನಿರ್ಮಿಸುತ್ತದೆ.

ಪರಸ್ಪರರಲ್ಲಿ ಸರಿಯಾದ ತಿಳಿವಳಿಕೆ ಇಲ್ಲದೆ ಜನರು ವಿನಾಕಾರಣ ವಿಭಜನೆ ಗೊಂಡಿದ್ದಾರೆ. ಅವರಲ್ಲಿ ತಿಳಿವಳಿಕೆ ಮೂಡಿಸಿ, ಅವರು ಪರಸ್ಪರರನ್ನು ಪ್ರೀತಿಸಿವಂತೆ ಮಾಡಲು ಸಾಧ್ಯವಿದೆ. ಅದನ್ನು ಪತ್ರಿಕೋದ್ಯಮ ಬಹು ಯಶಸ್ವೀ ರೀತಿಯಿಂದ ಮಾಡಬಲ್ಲದು. ಸುಮ್ಮಿಶ್ರ ಸಮಾಜದಲ್ಲಿ ಬದುಕಿರುವ ನಮ್ಮ ಜನರು ಕೂಡಿ ಹೋಗುವಂತೆ ಮಾಡಲು ಬಹುದೊಡ್ಡ ಪ್ರಯತ್ನದ ಅಗತ್ಯವಿದೆ.

ಸತ್ಯಶೋಧದ ಡಯೊಜಿನಸ್ ಕೆಲಸವನ್ನು ಪತ್ರಿಕೋದ್ಯಮ ಮಾಡಬೇಕಾಗುತ್ತದೆ. ತನಗೆ ತಿಳಿದ ಸತ್ಯವನ್ನು ಸಾರ್ವಜನಿಕ ಹಿತಕ್ಕೋಸ್ಕರ ಅದು ಸಾರ್ವಜನಿಕರಿಗೆ ತಿಳಿಸಿಕೊಡಬೇಕು. ಪತ್ರಿಕೋದ್ಯಮಿ, ಒಂದು ವೇಳೆ ತಾನು ತಿಳಿದಿರುವುದು ಸತ್ಯವಲ್ಲವಾದರೆ ಅದನ್ನು ಜನರಿಗೆ ಹೇಳಿ ಸತ್ಯದ ಶೋಧಕ್ಕೆ ಪುನಃ ತೊಡಗಬೇಕು. ಜನರಿಗೆ ಯಥಾರ್ಥವಾದುದನ್ನು ತಿಳಿಸಿಕೊಡುವುದೇ ಆತನ ಕರ್ತವ್ಯವಾಗಿದೆ.

ಪತ್ರಿಕೆಯಲ್ಲಿ ಪತ್ರಿಕೋದ್ಯಮದಲ್ಲಿ ರಾಕ್ಷಸ ಶಕ್ತಿ ಇರಬೇಕು. ಆದರೆ ಅದು ರಾಕ್ಷಸ ಕೆಲಸಕ್ಕೆ ಉಪಯೋಗ ಆಗಬಾರದು. ತನಗೆ ಆದುದು ಜಗತ್ತಿಗೇ ಆದುದು ಎಂದು ಪತ್ರಿಕೋದ್ಯಮಿ ತಿಳಿಯದೆ, ಜಗತ್ತಿಗೆ ಆದುದು ತನಗೇ ಆದುದೆಂದು ತಿಳಿದು ಪ್ರತಿಕ್ರಿಯೆ ವ್ಯಕ್ತಪಡಿಸಬೇಕು.

- ಪಾಟೀಲ ಪುಟ್ಟಪ್ಪ

# ಆಚಾರ್ಯರೆಂಬ ಅನ್ವರ್ಥಕ ನಾಮ

ನಾನು ಪತ್ರಕರ್ತನಾದೇನು, ಆದರೂ ಆಗಬಹುದು ಎನ್ನುವ ಅನುಮಾನ, ಆಲೋಚನೆ ಇಲ್ಲದಿದ್ದ ದಿನಗಳಿಂದಲೂ ನಾನು ಪಾ.ವೆಂ. ಆಚಾರ್ಯರನ್ನು ಬಲ್ಲವನು. ಅವರ ಮಗ ಮುರಳೀಧರ ಮತ್ತು ನಾನು, ಅವರ ಮನೆ ಹತ್ತಿರ, ಅಂಚಟಗೇರಿ ಓಣಿಯಲ್ಲಿದ್ದ ಹದಿನೇಳನೇ ನಂಬರ್ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳು. ಮಧ್ಯಂತರದ ಸಮಯದಲ್ಲಿ ಅವನು, ನನ್ನನ್ನು ಮನೆಗೆ ಕರೆದುಕೊಂಡು ಹೋದಾಗ ಆಚಾರ್ಯರನ್ನು ನೋಡುತ್ತಿದ್ದೆ. ಎಂದಾದರೂ ಒಮ್ಮೆ ಅವರು ಮಾತನಾಡಿಸುತ್ತಿದ್ದರು. ಒಂದು ದಿನ ಈ ಹುಡುಗ ಒಂದೇ ಸಂಸ್ಥೆಯಲ್ಲಿ ತಮ್ಮ ಕಿರಿಯ ಸಹೋದ್ಯೋಗಿಯಾಗಿ ದುಡಿಯುತ್ತಾನೆ ಎನ್ನುವ ಕನಸು ಅವರಿಗಾದರೂ ಹೇಗೆ ಬೀಳಬೇಕು !

ತಂದೆಯನ್ನು ಕಂಡರೆ ಮಕ್ಕಳಿಗೆ ಭಯಭಕ್ತಿ ಬಹಳ. ಅವರನ್ನು ಕಂಡಾಗ ನನಗೂ ಹೆದರಿಕೆ ಆಗುತ್ತಿದ್ದಿತು. ಅವರು ಮನೆಯಲ್ಲಿದ್ದರೆ.... ಸೂಜಿ ಬಿದ್ದರೂ ಕೇಳುವಷ್ಟು ಮನೆ ಶಾಂತವಾಗಿರುತ್ತಿತ್ತು. ಮಧ್ಯಮ ಹಾಗೂ ಕೆಳಮಧ್ಯಮ ವರ್ಗದ ಜನರು ವಾಸವಾಗಿದ್ದ ಎದುರುಬದುರಾದ ಮನೆಗಳ ಸಾಲು. ಮುರಳಿಯ ಮನೆಯಲ್ಲಿ ರೆಡಿಯೊ ಇರಲಿಲ. ಆದುದರಿಂದ ಅವರು ಶ್ರೀಮಂತರಲ್ಲ ಎನ್ನುವ ಎಣಿಕೆ ನನ್ನದು. ಆ ಕಾಲದಲ್ಲಿ ೧೯೫೦ರ ಎಡಬಲ, ಶ್ರೀಮಂತರ ಮನೆಗಳಲ್ಲಿ ಮಾತ್ರ ರೆಡಿಯೋ ಕಾಣಬಹುದಾಗಿತ್ತು. ಮುರಳಿ ಮನೆಯಲ್ಲಿ ದಿನ ಪತ್ರಿಕೆಗಳು, ನಿಯತಕಾಲಿಕಗಳು ಸಾಕಷ್ಟು ಇರುತ್ತಿದ್ದುದು ನನಗೆ ನೆನಪಿದೆ.

ಆಚಾರ್ಯರು 'ಸಂಯುಕ್ತ ಕರ್ನಾಟಕ'ದಲ್ಲಿ ಕೆಲಸ ಮಾಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಅವರು ದಿನಪತ್ರಿಕೆಯ ಸಾಪ್ತಾಹಿಕ ಸಂಚಿಕೆ ಮತ್ತು ಹ.ರಾ. ಪುರೋಹಿತರು ಸಂಪಾದಕರಾಗಿದ್ದ 'ಕರ್ಮವೀರ'ದಲ್ಲಿ ಬರೆಯುತ್ತಿದ್ದರು. ನಂತರ ಸಂ.ಕ. ಸಾಪ್ತಾಹಿಕ ಹಾಗೂ 'ಕರ್ಮವೀರ' ಒಂದಾಗಿ ರವಿವಾರ ಪ್ರಕಟವಾಗತೊಡಗಿದವು. ಕರ್ಮವೀರ ಸಂ.ಕ. ಸಾಪ್ತಾಹಿಕ ಭಾಗವನ್ನೊಳಗೊಂಡು ಪ್ರಕಟವಾಗುತ್ತಿದ್ದ ದಿನಗಳಲ್ಲಿ ಅದೊಂದು ರಸಗವಳವೇ ಆಗಿರುತ್ತಿದ್ದಿತು. ಕಥೆ, ಕವನ, ಸಾಂದರ್ಭಿಕ ಲೇಖನ, ಲಾಂಗೂಲಾಚಾರ್ಯರ ಹರಟೆ ಕೂಡ ಆಕರ್ಷಣೆಗಳಲ್ಲಿ ಒಂದಾಗಿರುತ್ತಿತ್ತು, ಅವರ ಹರಟೆಯ ಆಶಯ ನಮಗೆ ಆಗ ಪೂರ್ಣ ಅರ್ಥವಾಗುತ್ತಿರಲಿಲ್ಲ. ಅವರದು ಬೌದ್ಧಿಕವಾದ ಹರಟೆ, ಹಾಸ್ಯ ಅಲ್ಲಿ ಸೂಕ್ಷ್ಮಾತಿಸೂಕ್ಷ್ಮ. ಅರ್ಥ ಮಾಡಿಕೊಳ್ಳಬಲ್ಲವರಿಗೆ ನಗುವಿನೊಂದಿಗೆ ಜ್ಞಾನೋದಯವೂ ಆಗತಕ್ಕ ಹರಟೆ ಅದು. ಆಚಾರ್ಯರ ಬರಹವೇ ಹಾಗೆ. ಮೇಲ್ಪದರಿನ ನಯನಾಜೂಕನ್ನು ಬದಿಗೆ ಸರಿಸಿ, ಒಳಪದರಿನಲ್ಲಿ ಹುದುಗಿಕೊಂಡ ಹೂರಣವನ್ನು ಸವಿಯಬೇಕು. ಅದು ಕನ್ನಡದಲ್ಲಿ ಅವರೊಬ್ಬರಿಗೇ ಸಾಧಿಸಿದ ತಂತ್ರ ನೈಪುಣ್ಯ. ನಮ್ಮನ್ನು ಕಂಡು ನಾವೇ ನಗಬೇಕಾಗಿ ಬರುವ ಸನ್ನಿವೇಶ ಸೃಷ್ಟಿಸುವಲ್ಲಿ ಅವರದು ಎತ್ತಿದ ಕೈ. ಆತ್ಮವಿಮರ್ಶೆಗೆ ಒದಗುವ ಸವಾಲು ಅದು. ಅದು ನಿಜವಾದ ವಿಡಂಬನೆ. ೧೯೫೬ರಲ್ಲಿ ಮೊಹರೆ ಹಣಮಂತರಾಯರು 'ರೀಡರ್ಸ್ ಡೈಜೆಸ್ಟ್' ಮಾದರಿಯ ಮಾಸಪತ್ರಿಕೆಯನ್ನು ಹೊರಡಿಸಿದ್ದು ಪಾ.ವೆಂ. ಅವರನ್ನು ಮನಸ್ಸಿನಲ್ಲಿರಿಸಿಕೊಂಡೇ. ಪರಿಕಲ್ಪನೆ ಮೊಹರೆಯವರದು, ಅದಕ್ಕೆ ರಕ್ತ, ಮಾಂಸ ತುಂಬಿ ಜೀವಕೊಟ್ಟವರು ಆಚಾರ್ಯರು. ಇನ್ನೊಂದು ಅರ್ಥದಲ್ಲಿ ಅವರು ಕಸ್ತೂರಿಗೆ ಜೀವತೇಯ್ದರು ಎಂಬುದೂ ನಿಜ. 'ಕಸ್ತೂರಿ' ಆಚಾರ್ಯರನ್ನು ನಿಜವಾದ ಬೆಳಕಿನಲ್ಲಿ ನಿಲ್ಲಿಸಿತು. ಅವರ ಪ್ರತಿಭೆ, ಜ್ಞಾನಾರ್ಜನೆ, ಉತ್ಕಟ ಆಸಕ್ತಿ ಹಳೆಯದನ್ನು ಪರಿಷ್ಕರಿಸಿ ಹೊಸ ವಸ್ತುವನ್ನು ಉತ್ಪಾದಿಸುವ ಕಲೆ ಇವುಗಳಿಂದಾಗಿ ಆಚಾರ್ಯರೆಂದರೆ ಕಸ್ತೂರಿ, ಕಸ್ತೂರಿ ಎಂದರೆ ಆಚಾರ್ಯರು ಎನ್ನುವಂತಾಯಿತು.

ಒಂದು ಮಾತನ್ನು ಇಲ್ಲಿ ತಪ್ಪದೇ ಹೇಳಬೇಕು. ಆಚಾರ್ಯರನ್ನು ಓದಿ ಅರ್ಥ ಮಾಡಿಕೊಳ್ಳುವ ಓದುಗರು ಆ ಕಾಲದಲ್ಲಿ ದೊಡ್ಡ ಸಂಖ್ಯೆಯಲ್ಲಿ ಇದ್ದರು. ಅವರಲ್ಲಿ ಯಾವಾಗಲೂ ಮೊದಲನೆಯವರೆಂದರೆ ಮೊಹರೆ ಹಣುಮಂತರಾಯರು. ಒಳ್ಳೆಯದನ್ನು ಗುರುತಿಸುವ, ಗೌರವಿಸುವ ಗುಣ ಅವರಲ್ಲಿತ್ತು ಆಚಾರ್ಯರು, ಮೊಹರೆಯವರ ಮೆಚ್ಚುಗೆಗೆ ಪಾತ್ರರಾದ ಕೆಲವೇ ಕೆಲವರಲ್ಲಿ ಒಬ್ಬರು. ಅವರಲ್ಲಿ ಇನ್ನೊಬ್ಬರೆಂದರೆ ಪಾಟೀಲ ಪುಟ್ಟಪ್ಪನವರು. ಮುಂದೆ ಒಂದು ದಿನ, ಈ ಇಬ್ಬರು ಅಪರೂಪದ ಪತ್ರಕರ್ತರ ಗರಡಿಯಲ್ಲಿ ಪಳಗುವ ಅವಕಾಶ ನನಗೆ ಸಿಕ್ಕಿದ್ದು ನನ್ನ ಪೂರ್ವಜನ್ಮದ ಪುಣ್ಯವೇ ಹೌದು. ಇಬ್ಬರೂ ಭಿನ್ನ ಪ್ರಕೃತಿಯ, ಭಿನ್ನ ಶೈಲಿಯ, ಭಿನ್ನ ನಿಲುವೆಯ ಬರಹಗಾರರು. ಒಂದು ವಿಷಯದಲ್ಲಿ ಇಬ್ಬರೂ ಒಂದೇ– ಇಬ್ಬರದೂ ಸ್ವತಂತ್ರ

ಮನೋಧರ್ಮ, ತಮ್ಮ ಕಣ್ಣುಗಳಿಂದಲೇ ನೋಡಿ ನಂಬುವ ಜಾತಿ. ಇಬ್ಬರಿಂದಲೂ ನಾನು, ನನ್ನ ಯೋಗ್ಯತೆಗೆ ತಕ್ಕಷ್ಟು ಏನನ್ನಾದರೂ ಕಲಿತುಕೊಂಡಿದ್ದರೆ, ಅದು ಅವರ ಈ ನಿಲುಮೆಯಿಂದಲೇ ! ಒಬ್ಬರು ನನಗೆ ಬುನಾದಿ ಕಟ್ಟಿಕೊಟ್ಟರೆ ಇನ್ನೊಬ್ಬರು ನನಗೆ ಆತ್ಮವಿಶ್ವಾಸದ ಬುತ್ತಿ ಕಟ್ಟಿಕೊಟ್ಟರು.

ನಾನು ೧೯೬೨ರಲ್ಲಿ 'ಸಂಯುಕ್ತ ಕರ್ನಾಟಕ' ಸೇರುವ ಮೊದಲು ಸಂದರ್ಶನಕ್ಕೆ ಹೋಗಿದ್ದೆ. ದಿ. ಹ. ರಾ. ಪುರೋಹಿತ, ಪಾ.ವೆಂ. ಹಾಗೂ ಜಾಬ್ ಮ್ಯಾನೇಜರ್ ವಿ.ವಾಯ್. ಜಠಾರ ಸಂದರ್ಶಕ ಸಮಿತಿಯಲ್ಲಿದ್ದರು. ಎಲ್ಲರೂ ಪರಿಚಿತರೇ, ಪುರೋಹಿತರು ನಮ್ಮ ತಂದೆ ತಾಯಿ, ಊರಿನಲ್ಲಿ ಮಳೆಬೆಳೆ ಕುರಿತು ವಿಚಾರಿಸಿ, ಆಗಸ್ಟ್ ಪೈಲಾದಿಂದ ಬಾ ಎಂದು ಬೀಳ್ಕೊಟ್ಟರು. ಆಚಾರ್ಯರಿಗೆ ಸಮಾಧಾನವಾಗಲಿಲ್ಲ. ''ನಿಮ್ಮ ಹ್ಯಾಂಡ್‌ರೈಟಿಂಗ್ ನೋಡಬೇಕು'' ಎಂದರು. ಪುರೋಹಿತರು, 'ಮುತ್ತಿನಂಥ ಅಕ್ಷರ ಬರೀತಾನ' ಎಂದು ಹೇಳಿ ಮುಗಿಸಿಬಿಟ್ಟರು. ಆಚಾರ್ಯರಿಗೆ ಅಸಮಾಧಾನವಾಯಿತು.

ನಾನು, ಸಂಯುಕ್ತ ಕರ್ನಾಟಕದಲ್ಲಿ ಇನ್ನೂ ಕಿರಿಯವನಾಗಿದ್ದಾಗಲೇ, ಕಸ್ತೂರಿಗಾಗಿ ಬರೆದುಕೊಟ್ಟ ಮೊದಲನೇ ಲೇಖನ ''ಐನ್ ಫ್ಲೆಮಿಂಗ್ ಹಾಗೂ ಜೇಮ್ಸ್ ಬಾಂಡ್' ಅದನ್ನು ನಾನು ಸ್ವಲ್ಪ ಅಧೈರ್ಯ, ಅನುಮಾನಗಳಿಂದಲೇ ಆಚಾರ್ಯರ ಕೈಗೆ ಕೊಟ್ಟು ಬಂದೆ. ಅವರು ನಸುನಗೆ ನಕ್ಕ (ಅದನ್ನು ಗುರುತಿಸುವುದೂ ಸುಲಭವಲ್ಲ)ರು. ತಮಗೆ ಲೇಖನ ಬರೆದುಕೊಟ್ಟದ್ದಕ್ಕೂ ಅವರಿಗೆ ಸಂತೋಷವಾಯಿತೆಂಬ ಭರವಸೆಯಿಂದ ಮರಳಿದೆ. ಎರಡು ಮೂರು ದಿನಗಳ ನಂತರ ಆಚಾರ್ಯರಿಂದ ಬುಲಾವಣೆ ಬಂತು.

''ನಿಮ್ಮ ಲೇಖನ ಚೆನ್ನಾಗಿದೆ. ಆದರೆ ಇಷ್ಟು ವಿಷಯ ಸಾಲದು'' ಎನ್ನುತ್ತ ನನ್ನಕೈಗೆ ಒಂದಿಷ್ಟು ಮುದ್ರಿತ ಪುಟಗಳನ್ನು ಕೊಟ್ಟರು. ''ಇದನ್ನು ಚೆನ್ನಾಗಿ ಓದಿ ಸೇರಿಸಿಕೊಂಡು ಬರ್ರಿ'' ಎಂದು ಸೂಚಿಸಿ ಕಾರ್ಯಮಗ್ನರಾದರು. ಆ ಇಂಗ್ಲೀಷ್ ಪುಟಗಳಲ್ಲಿ ಫ್ಲೇಮಿಂಗನ ವೈಯಕ್ತಿಕ ಜೀವನ, ಅವನ ಬಾಂಡ್ ಸೃಷ್ಟಿಯಲ್ಲಿ ತೋರಿದ ಪ್ರಾವೀಣ್ಯ, ಅವನ ಸಾಹಸದ ವರ್ಣನೆ ಕುರಿತ ಮಾಹಿತಿ ಇತ್ತು. ನನ್ನ ಲೇಖನವನ್ನು ಮನೆಯಲ್ಲಿ ಇಡೀ ರಾತ್ರಿ ನಿದ್ರೆಗೆಟ್ಟು ಪರಿಷ್ಕರಿಸಿ ತಂದು ಅವರಿಗೆ ಕೊಟ್ಟೆ. ನನ್ನ ಅವಸರ ಅವರಿಗೆ ಅರ್ಥವಾಗಿರಬೇಕು. ತಮ್ಮ ದಪ್ಪ ಗ್ಲಾಸುಗಳ ಮೂಲಕ ನನ್ನ ಮುಖವನ್ನು ಅವಲೋಕಿಸಿ ಅದನ್ನು ಮೇಜಿನ ಮೇಲೆ ಇರಿಸಿದರು. ಅದು ಮರು ತಿಂಗಳು ಪ್ರಕಟವಾಯಿತು. ನನ್ನ ಆನಂದಕ್ಕೆ ಪಾರವೇ ಇರಲಿಲ್ಲ.

ಆ ಕಾಲದಲ್ಲಿ, ಸ್ವಲ್ಪಮಟ್ಟಿಗೆ ಇವತ್ತಿಗಾದರೂ, 'ಕಸ್ತೂರಿ'ಯಲ್ಲಿ ಲೇಖನ ಪ್ರಕಟವಾಗುವುದಾದರೆ ಅದೊಂದು ದೊಡ್ಡ ಮನ್ನಣೆ. ಆಚಾರ್ಯರೇ ಮುರಳೀಧರ, ರಾಧಾಕೃಷ್ಣ, ಪಾ.ವೆಂ. ಇಲ್ಲವೆ ಪೂರ್ಣ ಹೆಸರುಗಳನ್ನು ತಮ್ಮ ಲೇಖನಗಳಿಗೆ ಹಾಕುತ್ತಿದ್ದರು.

ಗಂಗಾಧರ ಹೆಗಡೆ ಹಾಗೂ ಮಾಧವ ಮಹಿಷಿ ಸಹಾಯಕರಾಗಿದ್ದಷ್ಟು ಕಾಲ ಅವರಿಗೆ ನೆಮ್ಮದಿ ಇತ್ತು. ಹೆಗಡೆಯವರು ದಿನಕ್ಕೆ ಹತ್ತು ಕಪ್ ಚಹ ಹೀರುತ್ತ ಸಾಲುಗಟ್ಟಿ ಬೀಡಿಸೇದುತ್ತ ವಾರದಲ್ಲಿ ಕನಿಷ್ಟ ಎರಡು ಲೇಖನಗಳನ್ನು ಬರೆಯುತ್ತಿದ್ದರು.

ನಿಜಲಿಂಗಪ್ಪ ಕಾಂಗ್ರೆಸ್ ಅಧ್ಯಕ್ಷರಾದಾಗ ನಾನು ಅವರ ಪ್ರೊಫೈಲ್ ಬರೆದುಕೊಟ್ಟೆ. ಮರುದಿನ ಬುಲಾವ್ ಬಂತು. ಆಚಾರ್ಯರು ಆಗಲೇ ನನಗೆ ಸುಪರಿಚಿತವಾಗಿದ್ದ ಖಚಿತವಾದ ಧ್ವನಿಯಲ್ಲಿ "ಜೋಶಿಯವರೇ ನಿಜಲಿಂಗಪ್ಪ ಯಾರಿಗೆ ಗೊತ್ತಿಲ್ಲ. ಹೊಸದಾಗಿ ಆಲೋಚಿಸಿ, ಅವರ ಬಗ್ಗೆ ಹೊಸದೇನಾದರೂ ಬರೀರಿ" ಎಂದು ಲೇಖನ ಮರಳಿ ಕೊಟ್ಟರು.

'ನಿಜಲಿಂಗಪ್ಪನವರ ಹಿರಿಯ ಮಗಳು ಪಾರ್ವತಮ್ಮ ಹುಬ್ಬಳ್ಳಿಯಲ್ಲಿದ್ದಾರೆ, ನಿಮಗೆ ಗೊತ್ತೇನು' ಎಂದು ಕೇಳಿದರು. 'ನಾನು ಅವರನ್ನು ಮಾತನಾಡಿಸಿಕೊಂಡು ಬರುತ್ತೇನೆ' ಎಂದು ತಟಕ್ಕನೆ ಎದ್ದು ಹೊರಟು ಬಿಟ್ಟೆ. ಆ ಸಂದರ್ಶನ, ನಿಜಲಿಂಗಪ್ಪನವರ ವೈಯಕ್ತಿಕ ಜೀವನದ ಅನೇಕ ಸರಸ ಸಂಗತಿಗಳನ್ನು ಹೊರಹಾಕಿತು. ಆಚಾರ್ಯರು ಆ ಹಿರಿಯ ಧುರೀಣನ ಏಳು ಬೀಳುಗಳನ್ನು ಪರಾಮರ್ಶಿಸಿ ಒಂದು ಪುಟದಷ್ಟು ಪುಟ್ಟ ಬರಹವನ್ನು ಸಂದರ್ಶನಕ್ಕೆ ಜೋಡಿಸಿ ಪ್ರಕಟಿಸಿದರು. ಆಚಾರ್ಯರಿಂದ ಕಲಿತ ಈ ಪಾಠ ನನಗೆ ದಿನಪತ್ರಿಕೆ ಕೆಲಸದಲ್ಲೂ ಬಹಳ ನೆರವಾಯಿತು.

ಒಮ್ಮೆ ಅವರು ತಾವಾಗಿಯೇ ಕರೆದುಕೊಟ್ಟರು, ಹಿಂದಿಯ 'ಕಾದಂಬಿನಿ'. 'ಕಾದಂಬಿನಿ'ಯನ್ನು ಕೊಟ್ಟು ಅದರಲ್ಲಿದ್ದ ಹಿಟ್ಲರ್‌ನ ಕೊನೆಯ ದಿನಗಳನ್ನು ಕುರಿತ ಲೇಖನವನ್ನು ಬರೆದು ಕೊಡ್ರಿ ಎಂದರು. ಹಿಂದಿಯನ್ನು ಆ ಮಟ್ಟದಲ್ಲಿ ಓದಿ ಭಾಷಾಂತರಿಸಿದ ಅನುಭವ ನನಗೆ ಇರಲಿಲ್ಲ. ಅನುಮಾನಪಟ್ಟೆ. ನನ್ನ ಕೇಳಿದರು. "ಸಿನೇಮಾ ಹಿಂದಿ ಅರ್ಥವಾಗುತ್ತದೆ ಎಂದು ಹೇಳುವುದೇ ತಡ, 'ಅಷ್ಟು ಸಾಕು' ಎನ್ನುತ್ತ ನನ್ನನ್ನು ಸಾಗಹಾಕಿದರು. ಲೇಖನ ಪ್ರಕಟವಾಯಿತು. ನನಗೆ ಹಿಂದಿ ತಿಳಿಯುತ್ತದೆ ಎಂದು ಖಾತ್ರಿಯಾಯಿತು. ವಿಷಯ ಸಂಗ್ರಹ, ಜಾಣ್ಮೆ, ಅದನ್ನು ಸ್ವತಂತ್ರ ಲೇಖನವಾಗಿ ಪರಿವರ್ತಿಸುವ ಕಲೆಯನ್ನು ಅವರು ನನಗೆ, ಕಲಿಸಿಕೊಟ್ಟರು. ಅವರು ನಿಜಾರ್ಥದಲ್ಲಿ ಆಚಾರ್ಯರು.

ಈ ರೀತಿ ಅವರು ನನ್ನಲ್ಲಿ ಆತ್ಮವಿಶ್ವಾಸ ಮೂಡಿಸಿದರು. ನಂತರ ನಾನೂ ಬರೆದುಕೊಟ್ಟೆ. ಅವರೂ ಹೇಳಿ ಬರೆಸಿದರು. ನಾನು 'ಕಸ್ತೂರಿ'ಯ 'ಮಾನ್ಯ' ಲೇಖಕರಲ್ಲಿ ಒಬ್ಬನಾದೆ. ಅವರೊಂದಿಗೆ ನನಗೆ ಇಷ್ಟು ನಿಕಟ ಸಂಪರ್ಕ ಬಂದದ್ದನ್ನು ಕಂಡು 'ಡೇಲಿ'ಯವರಿಗೆ ಆಶ್ಚರ್ಯವೋ ಆಶ್ಚರ್ಯ. ಅವರು 'ಸಂಯುಕ್ತ ಕರ್ನಾಟಕ'ದ ವಿಭಾಗಕ್ಕೆ ಬರುತ್ತಿದ್ದುದೇ ಕಡಿಮೆ. ದಿ.ಆರ್.ಕೆ. ಜೋಶಿ ಇಲ್ಲವೆ ಸುರೇಂದ್ರ ದಾನಿಯವರ ಎದುರಿನಲ್ಲಿ ಐದು ನಿಮಿಷ ಕುಳಿತು ಎದ್ದು ಹೋಗುತ್ತಿದ್ದರು.

ವಿಷಾದದ ಸಂಗತಿಯೆಂದರೆ ಆಚಾರ್ಯರ (ಸಂ.ಕ. ಹಾಗೂ 'ಕರ್ಮವೀರ' ಸೇರಿ) ಸಹೋದ್ಯೋಗಿಗಳಲ್ಲಿ ಬಹಳ ಜನರು ಅವರನ್ನು ತಪ್ಪಾಗಿ ಗ್ರಹಿಸಿದ್ದು, ಅವರದು ಗಂಭೀರ ಪ್ರಕೃತಿ, ಜನರೊಂದಿಗೆ ಬೆರೆಯುವುದಿಲ್ಲ, ಸರ್ವಜ್ಞನಂತೆ ನಡೆದುಕೊಳ್ಳುತ್ತಾರೆ ಎಂದು ಕೊಂಡವರೇ ಬಹಳ ಜನರು. ಅವರ ಆಲೋಚನೆಯ ಮಟ್ಟ, ಉಚ್ಚತಮ ಹಾಸ್ಯ ಪ್ರಜ್ಞೆ, ವಿಷಯಗಳ ಆಳವಾದ ಚಿಂತನೆ ಅವರನ್ನು ಉಳಿದವರಿಂದ ಬೇರೆಯಾಗಿ ನಿಲ್ಲಿಸಿದ್ದು ನಿಜ. ಅವರಿಗೆ ಹರಟೆ, ವಿಡಂಬನೆ ಎಂದರೆ ಅರ್ಥಪೂರ್ಣ ಜ್ಞಾನಾರ್ಜನೆಯ ಸಾಧನಗಳಾಗಿದ್ದವು.

'ಕಸ್ತೂರಿ'ಯನ್ನು ಸೇರಿ ನಾನು ಅವರೊಂದಿಗೆ ಕೆಲಸ ಮಾಡಬೇಕೆಂಬ ಇಚ್ಛೆ ಆಚಾರ್ಯರಿಗೆ ಇತ್ತು, 'ಕಸ್ತೂರಿ'ಗೆ ಬಂದು ಬಿಡಿ, ನೀವೇ ಮುಂದೆ ಅದರ ಸಂಪಾದಕನಾಗಬಹುದೆಂದು ತಮ್ಮ ಮನೋಗತ ವ್ಯಕ್ತಮಾಡಿದ್ದರು. ದಿನಪತ್ರಿಕೆಯ ರೋಮಾಂಚಕತೆ, ನಿತ್ಯ ನೂತನ ಅನುಭವ, ವಿಶಾಲವಾದ ಕಾರ್ಯಕ್ಷೇತ್ರವೇ ನನಗೆ ಅಚ್ಚುಮೆಚ್ಚು ಎಂದು ನಾನು ಉತ್ತರ ಕೊಟ್ಟಾಗ ಅವರು ಎರಡೇ ಶಬ್ದಗಳಲ್ಲಿ ಸಮ್ಮತಿಸಿದರು "ಅದೂ ಸರಿಯೇ" ?

ಆಚಾರ್ಯರ ಸಾಹಿತ್ಯ ರಚನೆ ಅಪಾರ, ಅರ್ಥಪೂರ್ಣ. ಅವರು ತಮ್ಮ ಕಾಲಕ್ಕೆ ಮೀರಿದ ವಿದ್ವತ್ತು ಅನುಭವ ಹೊಂದಿದ್ದರು. ಅವರನ್ನು, ಅವರ ಬರಹಗಳನ್ನು ತಿಳಿಯುವ ಕುತೂಹಲ ಅವರ ಸಮಕಾಲೀನರಿಗೆ ಇರಲಿಲ್ಲವೆಂದು ನಾನು ಭಾವಿಸಿದ್ದೇನೆ. ಅವರು ಕಂಡಾಪಟ್ಟೆ ಭಾಷಣ ಬಿಗಿದು ಬೀಗುವಂಥವರಲ್ಲ. ಓದು ಬರಹವೇ ಅವರ ಬದುಕಾಗಿತ್ತು ಅವರ ಕಣ್ಣಮುಂದೆ ಓಡಾಡಿದ ಹುಡುಗನೊಬ್ಬ, ಅವರ ಕಿರಿಯ ಸಹೋದ್ಯೋಗಿಯಾಗಿ, ಅವರ ಮೆಚ್ಚುಗೆ ಪಡೆದ ಭಾಗ್ಯ ಸಣ್ಣದಲ್ಲ.

*('ಕಸ್ತೂರಿ' ಸ್ವರ್ಣ ಸಂಚಿಕೆಯಿಂದ)*

■■

# ಕನ್ನಡ ಪತ್ರಿಕಾ ಪ್ರಪಂಚದ ದೊಡ್ಡಪ್ಪ

ಪಾಟೀಲ ಪುಟ್ಟಪ್ಪನವರ 'ಪ್ರಪಂಚ'ದಲ್ಲಿ ಕಲಿಯಬೇಕೆನ್ನುವ ಹಂಬಲ ಉಳ್ಳವರು ಏಕಲವ್ಯನಾಗಿರಬೇಕು. ಅವನು ಕುತೂಹಲ ನಿಷ್ಠೆ ಹಾಗೂ ನಿರ್ಧಾರ ಹೊಂದಿರಬೇಕು. ಆದರೆ ಒಂದು ಮಾತು, ಪುಟ್ಟಪ್ಪನವರು ಬೆರಳು ಕೇಳುವುದಿಲ್ಲ. ಅವರು ತಮಗೆ ತಾವೇ ಮಾದರಿ ಹಾಗೂ ಅವರಂತೆ ದುಡಿಯಬಲ್ಲವರಿಗೆ ಅವರಂಥ ಬೇರೆ ಮಾದರಿ ಸಿಕ್ಕುವುದಿಲ್ಲ. ಪುಟ್ಟಪ್ಪನವರು ಕಿವಿ ಹಿಂಡಿ ಕಲಿಸುವವರಲ್ಲ, ಆದರೆ ಕಲಿಯಬೇಕೆಂಬ ಹಂಬಲ ಉಳ್ಳವರಿಗೆ ಅವರಂಥ ಶಿಕ್ಷಕನನ್ನು ಬೇರೆಲ್ಲೂ ನಾನು ಕಂಡಿಲ್ಲ. ಪುಟ್ಟಪ್ಪನವರಂತೆ ಬರೆಯಲು ಕಲಿಯಬೇಕಾದರೆ ಪುಟ್ಟಪ್ಪನವರನ್ನು ಓದಬೇಕು; ಪುಟ್ಟಪ್ಪನವರಂತೆ ಓದಬೇಕು. ಅವರ ಕೆಲಸದ ರೀತಿಯನ್ನು ನೋಡಬೇಕು, ಅವರ ಶೈಲಿಯನ್ನು ಅರ್ಥಮಾಡಿಕೊಳ್ಳಬೇಕು. ಅವರು, ವ್ಯಕ್ತಿಯ ಯೋಗ್ಯತೆ ಅಳೆಯುವಲ್ಲಿ ನಿಸ್ಸೀಮರು. ಬಾಯಿಬಿಟ್ಟು ಹೇಳತಕ್ಕವರಲ್ಲ. ಹೇಳಬೇಕೆಂದಾಗ ಕೆಲವೇ ಶಬ್ದಗಳಲ್ಲಿ ಹೇಳಿ ಮುಗಿಸುತ್ತಾರೆ. ಅವರನ್ನು ಅರ್ಥಮಾಡಿಕೊಳ್ಳುವುದು ಕಠಿಣ. ಅರ್ಥಮಾಡಿಕೊಂಡಾಗ ವೃತ್ತಿಯ ಬಗೆಗೆ ಅವರು ಬೆಳೆಸಿಕೊಂಡು ಬಂದಿರುವ ಗೌರವ, ಅದನ್ನು ನಿರ್ವಹಿಸುವಲ್ಲಿ ಅವರಿಗೆ ಇರುವ ಪ್ರೀತಿಪೂರ್ವಕ ನಿಷ್ಠೆ, ಅದಕ್ಕಾಗಿ ಅವರು ಮಾಡಿಕೊಂಡ ಸಿದ್ಧತೆ, ಅದನ್ನು ಮಾಡಿ ಮುಗಿಸುವಾಗ ಅವರ ಮುಖದಲ್ಲಿ ಮೂಡುವ ಸಮಾಧಾನ ಎಲ್ಲವೂ ಸ್ಪಷ್ಟ ಗೋಚರ.

ಪುಟ್ಟಪ್ಪನವರ ಮೆಚ್ಚುಗೆ ಗಳಿಸುವುದು ಸುಲಭದ ಮಾತು ಅಲ್ಲ. ಅವರು ಗುಣಗ್ರಾಹಿ ಅಲ್ಲವೆಂದು ಇದರ ಅರ್ಥವಲ್ಲ. ಪ್ರಸಂಗ ಬಂದಾಗ, ಪರೋಕ್ಷವಾಗಿ ಆದರೆ ಅರ್ಥವಾಗುವಂತೆ ಹೇಳುವ ಜಾಣ ಅವರು. ನನ್ನದೇ ಒಂದು ಉದಾಹರಣೆ ಸಾಕು. ಅದೇ ಆಗ ನಾನು 'ಪ್ರಪಂಚ' ಹಾಗೂ 'ವಿಶ್ವವಾಣಿ'ಯಲ್ಲಿ ಎರಡು ವರ್ಷಗಳ ಸೇವೆ ಪೂರೈಸಿದ್ದೆ. ಬಹುಬೇಗ ನನಗೆ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಹೊಣೆ ವಹಿಸಲಾಗಿತ್ತು. ಒಂದು ನಡುರಾತ್ರಿ ಗೋವೆಯ ವಿಮೋಚನೆಯ ಸುದ್ದಿ ಪಟ್ಟಿ ಟೆಲಿಪ್ರಿಂಟರಿನಲ್ಲಿ ಬಂದಾಗ ರೋಮಾಂಚನಗೊಂಡೆ. ಕೂಡಲೇ ಪುಟ್ಟಪ್ಪನವರಿಗೆ ದೂರವಾಣಿಯಲ್ಲಿ ಸುದ್ದಿ ಮುಟ್ಟಿಸಿದೆ. 'ಸರಿ' ಎಂದರು. 'ತಾವು ಬರುತ್ತೀರಾ ?' ಎಂದು ಕೇಳಿದೆ. 'ನಾನು ಬರಬೇಕಾದರೆ ನೀವೇಕೆ ಅಲ್ಲಿರಬೇಕು' ಎಂದು ಥಟ್ಟನೆ ಉತ್ತರಿಸಿ, ರಿಸೀವರ್ ಕೆಳಗಿಟ್ಟುಬಿಟ್ಟರು. ನಾನು ಅಕ್ಷರಶಃ ಕುಣಿದು ಕುಪ್ಪಳಿಸಿದೆ. ಪುಟ್ಟಪ್ಪನವರು ನನ್ನ ಮೇಲೆ ಇರಿಸಿದ ವಿಶ್ವಾಸ ನನ್ನ ಕಾರ್ಯೋತ್ಸಾಹವನ್ನು ಇಮ್ಮಡಿಗೊಳಿಸಿತು. ಇದಕ್ಕಿಂತ ಹೆಚ್ಚಿನ ಪ್ರಶಂಸೆ ಬೇಕೆ ? ಅದೇ ಉತ್ಸಾಹದಲ್ಲಿ ಪತ್ರಿಕೆ ಪ್ರಕಟವಾಗುವ ಮೊದಲೇ ಗೋವೆಯ ವಿಮೋಚನೆಯನ್ನು ಜನತೆಗೆ ತಿಳಿಸಬೇಕೆಂಬ ಉದ್ದೇಶದಿಂದ, 'ಪ್ರಪಂಚ'ದ ಪುಟಗಳು ಮುದ್ರಣವಾಗುತ್ತಿದ್ದ ಯಂತ್ರದಲ್ಲಿ ಒಂದು ನೂರು ಭಿತ್ತಿ ಪತ್ರಗಳನ್ನು ಸಿದ್ಧಪಡಿಸಿ ಬಸ್ ನಿಲ್ದಾಣ, ರೇಲ್ವೆ ನಿಲ್ದಾಣ ಮತ್ತು ದುರ್ಗದ ಬೈಲು ಮೊದಲಾದ ಕಡೆಗಳಲ್ಲಿ ಅಂಟಿಸಲು ಕಳಿಸಿದೆ. ಒಂದು ಕಡೆಯಲ್ಲಿ ಈ ಕೆಲಸ, ಇನ್ನೊಂದು ಕಡೆಯಲ್ಲಿ ಮೊದಲನೇ ಪುಟದ ವಿಶೇಷ ವಿನ್ಯಾಸ ರೂಪಿಸಿ ಪುಟ ಮುಗಿಸುವ ಅವಸರ. ಈ ನಡುವೆ ಯಂತ್ರದಿಂದ ಕೆಳಗಿಸಿದ 'ಪ್ರಪಂಚ'ದ ಪುಟಗಳ ಅಕ್ಷರ ಜೋಡಣೆ ಸಂಪೂರ್ಣ ಅಸ್ತವ್ಯಸ್ತ. ಪುಟ್ಟಪ್ಪನವರು ಏನು ಅಂದಾರು ಎನ್ನುವ ಗಾಬರಿ, ಚಿಂತೆ. ಮರುದಿನ ರಾತ್ರಿಪಾಳಿಗೆ ಎಂದಿನಂತೆ ಬೇಗ ಬಾರದೆ, ಸ್ವಲ್ಪ ತಡವಾಗಿ ಕಚೇರಿಯಲ್ಲಿ ಕಾಲಿರಿಸಿದೆ. ಆ ಹೊತ್ತಿಗೆ ಪುಟ್ಟಪ್ಪನವರು ಮನೆಗೆ ಹೋಗಿರಬಹುದೆಂಬ ಲೆಕ್ಕಾಚಾರ ಬುಡಮೇಲು. ನಾನು ಮೆಲ್ಲಗೆ ಅಟ್ಟವೇರಿ ಪ್ರಿಂಟರ್ ಮುಂದೆ ನಿಂತುಕೊಂಡೆ. ಕೆಳಗಿನ ದೀಪ ಆರಿತು. ಸಂಪಾದಕರು ಹೊರಗೆ ಹೊರಟರೆಂದು ಸಮಾಧಾನದ ನಿಟ್ಟುಸಿರುಬಿಟ್ಟೆ. ಆದರೆ ಯಾರೋ ಅಟ್ಟ ಏರಿ ಬರುವ ಹೆಜ್ಜೆ ಸಪ್ಪಳ. ಪುಟ್ಟಪ್ಪನವರು ಮೇಲೇರಿ ಬಂದು, ನನ್ನನ್ನು ಕಂಡು ಮುಗುಳ್ನಗೆ ನಕ್ಕರು. ನಾನು ಮರುಮಾತು ಆಡುವ ಮೊದಲೇ ಅವರು ಕೆಳಗಿಳಿದು ಹೋದರು. ಅವರನ್ನು ನಾನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೆ. ಅವರು ನನ್ನನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದರು.

ಏಕಲವ್ಯನಂತೆ ಕಲಿಯಬೇಕೆಂದು ಮೇಲೆ ಹೇಳಿದ್ದೇನೆ, ಅಲ್ಲವೆ ? ದ್ರೋಣಾಚಾರ್ಯರು ಏಕಲವ್ಯನನ್ನು ಆರಿಸಿಕೊಂಡಿರಲಿಲ್ಲ, ಪುಟ್ಟಪ್ಪನವರು

ಅರ್ಜುನನನ್ನು ಆರಿಸಿಕೊಳ್ಳುವುದಿಲ್ಲ, ಅವರು ಏಕಲವ್ಯನನ್ನು ಆಯ್ದುಕೊಳ್ಳುತ್ತಾರೆ. ಆ ಗೌರವ ನನಗೆ ಪ್ರಾಪ್ತವಾಗಿತ್ತು ಅವರ 'ಪ್ರಪಂಚ'ದಲ್ಲಿ, ಅವರ ಸಮ್ಮತಿ, ಅಸಮ್ಮತಿ ಎರಡನ್ನೂ ಅವರ ಮುಖದಲ್ಲಿಯೇ ಅರಸಬೇಕು. ಯಾವಾಗಲಾದರೂ ಒಮ್ಮೆ ಪ್ರಸಂಗ ನೋಡಿ ಕೆಲವು ಆಣಿಮುತ್ತುಗಳನ್ನು ಆಡುತ್ತಿದ್ದರು. ನನ್ನ ಮೇಲೆ ಶಾಶ್ವತ ಪರಿಣಾಮ ಉಂಟುಮಾಡಿದ ಇಂಥ ಒಂದು ಆಣಿಮುತ್ತು ಎಂದರೆ – A journalist must know something of everything and everything of something.

ಸಂಪಾದಕನಾಗಿ ಸಂತೋಷಪಡುವುದು ಪತ್ರಕರ್ತರಲ್ಲಿ ಎಲ್ಲರಿಗೂ ಇರುವ ಒಂದು ಮಹತ್ವಾಕಾಂಕ್ಷೆ. ಎಲ್ಲರಿಗೂ ಅವಕಾಶ ಸಿಗಲಾರದು. ಆದರೆ ಸಂಪಾದಕನಾಗುವ ಅರ್ಹತೆಯನ್ನು ಬೆಳೆಸಿಕೊಳ್ಳಲು ಎಲ್ಲರಿಗೂ ಸಾಧ್ಯತೆ ಇದೆ. ಇದು ವಿಶೇಷ ಪರಿಣತಿಯ ಕಾಲ. ಆದರೆ ವೃತ್ತಿಯ ಇತರ ಅಂಗಗಳನ್ನು ಅಲಕ್ಷಿಸಬೇಕೆಂಬುದು ಇದರ ಅರ್ಥವಲ್ಲ. ವೃತ್ತಿಯ ಪ್ರತಿಯೊಂದು ಅಂಗ–ಸುದ್ದಿ ಸಂಪಾದನೆ, ಸಂಪಾದಕೀಯ ಲೇಖನ, ವಿಶೇಷ ಲೇಖನ, ಸುದ್ದಿ ವಿಶ್ಲೇಷಣೆ, ವರದಿಗಳ ಎಲ್ಲ ಪ್ರಕಾರಗಳು, ಬೇರೆ ಬೇರೆ ಅಕ್ಷರ ಪ್ರಕಾರಗಳ ಜ್ಞಾನ ಇತ್ಯಾದಿಗಳಲ್ಲೂ ದುಡಿದು ಅನುಭವ ಹೊಂದಿದವನು ಮಾತ್ರ ದಕ್ಷ, ಯಶಸ್ವೀ ಸಂಪಾದಕನಾಗುತ್ತಾನೆ. ಜೊತೆಗೆ ವಸ್ತುನಿಷ್ಠ ನಿಲುಮೆ, ವಿಷಯ ಪ್ರಜ್ಞೆ, ವ್ಯಕ್ತಿ ಪ್ರಜ್ಞೆ, ನಿರ್ಣಯ ಶಕ್ತಿ ಎಲ್ಲಕ್ಕೂ ಮಿಗಿಲಾಗಿ ಸಾಮಾಜಿಕ ಚಿಂತನೆ ಅವಶ್ಯಕ. ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ತೊಡಗಿರುವ, ತೊಡಗಿದ್ದ ಎಲ್ಲ ಮಹತ್ವದ ವ್ಯಕ್ತಿಗಳ ಜಾತಕವನ್ನು ಜಾಲಾಡಿರುವ ಪುಟ್ಟಪ್ಪನವರು ಒಂದು ಉಜ್ವಲ ಮಾದರಿ.

ಒಬ್ಬ ನಿಷ್ಠಾವಂತ ಪತ್ರಕರ್ತ ಸಮಾಜದ ಶಿಕ್ಷಕನಾಗಬಲ್ಲ. ಅವನ ಹೊಣೆ ಆರು ತಾಸುಗಳಿಗೆ, ವೇತನ ಮಂಡಳಿ ನಿಗದಿಪಡಿಸಿದ ವೇತನಕ್ಕೆ ಸೀಮಿತವಲ್ಲ. ನಿರಂತರ ಚಿಂತನಶೀಲ ಪತ್ರಕರ್ತನಿಗೆ ನಿವೃತ್ತಿ ಇಲ್ಲ. ಬೇಕಾದರೆ ಕನ್ನಡ ಪತ್ರಿಕಾ ಪ್ರಪಂಚದ 'ದೊಡ್ಡಪ್ಪ' ಪಾಟೀಲ ಪುಟ್ಟಪ್ಪನವರನ್ನು ಕೇಳಿ ನೋಡಿರಿ.

*(ಪಾಪು ಅಭಿನಂದನ ಗ್ರಂಥದಿಂದ)*

■■


ಕಸ್ತೂರಿ
ಪದಾರ್ಥ ಚಿಂತಾಮಣಿ
● ಪಾವೆಂ ●
—: 113 :—
ಗಟ್ಟದಿಂದ ಘಾಟೀವರೆಗೆ

# ಶ್ಲಾಘನಾ ಪತ್ರ

(ಆಚಾರ್ಯರಿಗೆ ಬಿ.ಡಿ. ಗೋಯೆಂಕಾ ಪ್ರಶಸ್ತಿಯೊಡನೆ ಸಂದ ಶ್ಲಾಘನಾ ಪತ್ರ)

"ಪಿ.ವ್ಹಿ ಆಚಾರ್ಯರು ಪರಮ ಉದಾರ ಮಾನವತವಾದಿ ಹಾಗೂ ಪರಾಮರ್ಶಕರು. ಅವರು ಕನ್ನಡದ ಎರಡು ತಲೆಮಾರುಗಳ ಓದುಗರಿಗೆ ವೈಚಾರಿಕ ಸಾಹಿತ್ಯದಲ್ಲಿ ಪರಿಶುದ್ಧ ಶಿಕ್ಷಣವನ್ನು ಪ್ರದಾನ ಮಾಡಿದ ಪ್ರಜ್ಞಾವಂತರು. ಅವರ 'ಕಸ್ತೂರಿ' ಮಾಸಪತ್ರಿಕೆ ಗದ್ಯವನ್ನು, ಅದು ಹಿಂದೆ ಎಂದೂ ಏರದಿದ್ದ ಎತ್ತರಕ್ಕೆ ಕೊಂಡೊಯ್ದಿದೆ. ಪ್ರಬಂಧಕಾರರಾಗಿ, ಸಂಪಾದಕರಾಗಿ ಹಾಗೂ ಅಂಕಣಕಾರರಾಗಿ ಅವರ ಸತ್ಕೀರ್ತಿಯು, ವಿನೋದ ಪ್ರಜ್ಞೆ, ವಿದ್ವತ್ತು ಹಾಗೂ ಅವರ ಮೃದುಮಧುರ ವಿಡಂಬನೆಯ ಗಟ್ಟಿ ತಳಹದಿಯ ಮೇಲೆ ನಿಂತಿದೆ. ಅವರು ಕರ್ನಾಟಕದ ಬಹು ಗೌರವಾನ್ವಿತ ಪತ್ರಕರ್ತರು ಹಾಗೂ ವೃತ್ತಿಯ ಶ್ರೇಷ್ಠ ದರ್ಜೆಯ ಪ್ರತೀಕವಾಗಿದ್ದಾರೆ."



'ಪಾವೆಂ' ದಂಪತಿ : ದಿ. ಪಾಡಿಗಾರು ವೆಂಕಟರಮಣ ಆಚಾರ್ಯರು ಹಾಗೂ
ಶ್ರೀಮತಿ ಲಕ್ಷ್ಮೀಬಾಯಿ



'ಪಾಪು' ದಂಪತಿ : ಪಾಟೀಲ ಪುಟ್ಟಪ್ಪನವರು ಹಾಗೂ
ಶ್ರೀಮತಿ ಇಂದುಮತಿ ಪಾಟೀಲ

[illegible] ಮುದ್ರಣ, ಗದಗ. # 08372-237566